# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಆಗಸ್ಟ್ 30, 2024

ಸಂಪುಟ : 51 ಸಂಚಿಕೆ : 108 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಬಡತನ ಐಶ್ವರ್ಯದಿಂದ ನಿವಾರಣೆಯಾಗದು

### ರಾಮಕೃಷ್ಣ ಮಿಷನ್ ಕಾರ್ಯದರ್ಶಿ ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್




ದಾವಣಗೆರೆ, ಆ. 29 - ಒಳಗಿನ ಬಡತನವನ್ನುಹೊರಗಿನ ಐಶ್ವರ್ಯದಿಂದ ತುಂಬಲು ಸಾಧ್ಯವಿಲ್ಲ. ಸ್ವಾರ್ಥಕ್ಕೆ ಕಡಿವಾಣ ಹಾಕಿ ದೈವತ್ವ ಬೆಳೆಸಿಕೊಳ್ಳು ವುದರಿಂದ ಮಾತ್ರ ಉನ್ನತಿ ಸಾಧ್ಯ ಎಂದು ರಾಮಕೃಷ್ಣ ಮಿಷನ್ ಕಾರ್ಯದರ್ಶಿ ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ ಹೇಳಿದರು.

ಶ್ರೀ ವಾಸವಿ ಸೇವಾ ಸಂಘದಿಂದ ನಗರದ ಡಿಸಿಎಂ ಟೌನ್‌ಶಿಪ್‌ನಲ್ಲಿ ಗುರುವಾರ ಹಮ್ಮಿ ಕೊಳ್ಳಲಾಗಿದ್ದ ಶ್ರೀಮತಿ ಪ್ರೇಮಾ ರಾಜನಹಳ್ಳಿ ಶ್ರೀ ರಮಾನಂದ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭದ ಸಮಾರೋಪದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಪಶುತ್ವ, ಮನುಷ್ಯತ್ವ ಹಾಗೂ ದೈವತ್ವ ಎಂಬ ಮೂರು ಹಂತಗಳಿರುತ್ತವೆ. ಪಶುಗಳು ಸಹ ಆಹಾರ, ಗೂಡು ಹಾಗೂ ಮರಿಗಳ ನಿರ್ವಹಿಸುತ್ತವೆ. ಮನುಷ್ಯ ಜೀವನದ ಉದ್ದೇಶ ಇಷ್ಟಕ್ಕೇ ಇದ್ದರೆ, ಪಶುತ್ವದ ಗುಣಕ್ಕೆ ಸೀಮಿತವಾದಂತಾಗುತ್ತದೆ ಎಂದು ಸ್ವಾಮೀಜಿ ಹೇಳಿದರು.

ಪ್ರಾಣಿ ಗುಣಗಳಿಂದ ಮೇಲೆದ್ದು ಬಂದಾಗ ಮನುಷ್ಯತ್ವ ಹಾಗೂ ದೈವತ್ವಕ್ಕೆ ತಲುಪಲು ಸಾಧ್ಯವಾಗುತ್ತದೆ. ಆತ್ಮೀಯತೆ, ಸಹಜತೆ, ಪ್ರೀತಿ, ನಿಸ್ವಾರ್ಥ ಮುಂತಾದವು ದೈವತ್ವದಲ್ಲಿ ಕಂಡು ಬರುತ್ತವೆ ಎಂದವರು ತಿಳಿಸಿದರು.

ಅಪರಿಚಿತರಿಂದ ಗೌರವ ಪಡೆಯುವುದು ಸುಲಭ. ಆದರೆ, ನಮ್ಮ ಸ್ವಭಾವ ಗೊತ್ತಿರುವ ವರಿಂದ ಗೌರವ ಪಡೆಯುವುದು ಕಷ್ಟ. ಹೀಗಾ ಗಿಯೇ ಕುಟುಂಬದಲ್ಲಿ ಗೌರವ ಪಡೆಯುವುದು ಸುಲಭವಲ್ಲ. ನಮ್ಮ ವ್ಯಕ್ತಿತ್ವ ಉತ್ತಮವಾಗಿದ್ದಾಗ ಮಾತ್ರ ಕುಟುಂಬದಲ್ಲಿ ಗೌರವ ಸಿಗುತ್ತದೆ ಎಂದು ಸ್ವಾಮೀಜಿ ಹೇಳಿದರು.

ಯಾವ ಕುಟುಂಬ ಜೊತೆಯಾಗಿ ಪ್ರಾರ್ಥಿಸುವ, ಭೋಜನ ಸೇವಿಸುವ ಹಾಗೂ ಅಧ್ಯಯನ ಮಾಡುವ ಪದ್ಧತಿ ಹೊಂದಿರುತ್ತದೆಯೋ (2ನೇ ಪುಟಕ್ಕೆ)

## ಡಿಕೆಶಿ ಅಕ್ರಮ ಆಸ್ತಿ : ಸಿಬಿಐ ಮನವಿ ತಳ್ಳಿ ಹಾಕಿದ ಹೈಕೋರ್ಟ್

ಬೆಂಗಳೂರು, ಆ. 29 - ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿ ಪ್ರಕರಣದ ತನಿಖೆಗಾಗಿ ಸಿಬಿಐಗೆ ನೀಡಲಾಗಿದ್ದ ಅನುಮತಿಯನ್ನು ವಾಪಸ್ ಪಡೆಯುವ ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ತಳ್ಳಿ ಹಾಕಿದೆ.

ನ್ಯಾಯಮೂರ್ತಿಗಳಾದ ಕೆ. ಸೋಮಶೇಖರ್ ಹಾಗೂ ಉಮೇಶ್ ಎಂ. ಅಡಿಗ ಅವರನ್ನು ಒಳಗೊಂಡ ಪೀಠ, ಸಿಬಿಐ ದಾಖಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ ಆದೇಶ ಹೊರಡಿಸಿದೆ.

74.93 ಕೋಟಿ ರೂಪಾಯಿಗಳ ಅಕ್ರಮ ಆಸ್ತಿ

### ತನಿಖೆ ಅನುಮತಿ ಸುಪ್ರೀಂನಲ್ಲಿ ನಿರ್ಧಾರ

ಪ್ರಕರಣದ ವಿಚಾರಣೆಗಾಗಿ ಸಿಬಿಐಗೆ ನೀಡಲಾಗಿದ್ದ ಅನುಮತಿಯನ್ನು ರಾಜ್ಯ ಸರ್ಕಾರ ಡಿಸೆಂಬರ್ 26, 2023ರಲ್ಲಿ ವಾಪಸ್ ಪಡೆದಿತ್ತು. ಈ ಪ್ರಕರಣದ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸಲಾಗಿತ್ತು.

ಈ ನಿರ್ಧಾರ ಪ್ರಶ್ನಿಸಿ ಸಿಬಿಐ ಹೈಕೋರ್ಟ್ ಮೊರೆ ಹೋಗಿತ್ತು. ಈ ಬಗ್ಗೆ 67 ಪುಟಗಳ ತೀರ್ಪು ನೀಡಿರುವ ಹೈಕೋರ್ಟ್, ಈ ವಿಷಯವನ್ನು (2ನೇ ಪುಟಕ್ಕೆ)

### ಸಾಯುವವರೆಗೂ ಪ್ರಕರಣಗಳನ್ನು ಎದುರಿಸಬೇಕು



ಬೆಂಗಳೂರು, ಆ. 29 - ಬಿಜೆಪಿ ನಮ್ಮ ಮೇಲೆ ಷಡ್ಯಂತ್ರ ಮಾಡುತ್ತಿದೆ. ನಾನು ಸಾಯುವ ವರೆಗೂ ಕೋರ್ಟ್ ಪ್ರಕರಣ ಗಳನ್ನು ಎದುರಿಸಲೇಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಆದಾಯಕ್ಕೂ ಮೀರಿ ಆಸ್ತಿ ಸಂಪಾದನೆ ಪ್ರಕರಣದಲ್ಲಿ ಹೈಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಮಾತನಾಡಿದ ಅವರು, ನಾನೇನು ತಪ್ಪು ಮಾಡಿಲ್ಲ ಎಂದು ಅವತ್ತು ವಾದ ಮಾಡಿದ್ದೆ, ಇವತ್ತೂ ವಾದ ಮಾಡುತ್ತಿದ್ದೇನೆ. ಇವತ್ತಿನ ಜಯ ನನಗಿಂತ ಹೆಚ್ಚಾಗಿ ಕರ್ನಾಟಕ ಸರ್ಕಾರಕ್ಕೆ ಸಿಕ್ಕ (2ನೇ ಪುಟಕ್ಕೆ)

## ಬಳ್ಳಾರಿ ಜೈಲಿಗೆ ದರ್ಶನ್ ರವಾನೆ



ಬೆಂಗಳೂರು ಆ. 29- ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಆರೋಪಿ ನಟ ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲಾಗಿದೆ.

ನಗರದ ಪರಪ್ಪನ ಅಗ್ರಹಾರದಲ್ಲಿ ವಿಶೇಷ ಸೌಲಭ್ಯ ಪಡೆಯುತ್ತಿದ್ದ ಆರೋಪದ ಮೇಲೆ ದರ್ಶನ್ ಅವರನ್ನು ಇಂದು ಮುಂಜಾನೆ 4 ಗಂಟೆಗೆ ಬಳ್ಳಾರಿ ಜೈಲಿಗೆ (2ನೇ ಪುಟಕ್ಕೆ)

## ನೌಕಾ ದಳಕ್ಕೆ ಅರಿಘಾಟ್ ಸೇರ್ಪಡೆ

ನವದೆಹಲಿ, ಆ. 29 - ನೌಕಾದಳದ ಎರಡನೇ ಪರಮಾಣು ಚಾಲಿತ ಬ್ಯಾಲೆಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿ ನೌಕೆ ಅರಿಘಾಟ್ ಅನ್ನು ಸೈನ್ಯಕ್ಕೆ ಸೇರ್ಪಡೆ ಮಾಡಲಾಗಿದೆ. ಈ ಸಂದರ್ಭದಲ್ಲಿ (4ನೇ ಪುಟಕ್ಕೆ)

## ಕೇಂದ್ರದ ವಕ್ಫ್ ಕಾಯ್ದೆ ತಿದ್ದುಪಡಿಗೆ ರಾಜ್ಯ ಬೋರ್ಡ್ ವಿರೋಧ

ಬೆಂಗಳೂರು, ಆ. 29 - ಕೇಂದ್ರದ ಉದ್ದೇಶಿತ ವಕ್ಫ್ ಕಾಯ್ದೆ ತಿದ್ದುಪಡಿ ಪ್ರಸ್ತಾಪಕ್ಕೆ ರಾಜ್ಯ ವಕ್ಫ್ ಬೋರ್ಡ್ ವಿರೋಧ ವ್ಯಕ್ತಪಡಿಸಿದೆ.

ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್, ರಾಜ್ಯ ವಕ್ಫ್ ಬೋರ್ಡ್ ಅಧ್ಯಕ್ಷ ಅನ್ವರ್ ಬಾಷ ನೇತೃತ್ವದಲ್ಲಿ ನಡೆದ ವಕ್ಫ್ ಬೋರ್ಡ್ ಆಡಳಿತ ಮಂಡಳಿ ಸಭೆಯಲ್ಲಿ ತಿದ್ದುಪಡಿ ಕಾಯ್ದೆಗೆ ವಿರೋಧ ಪಡಿಸಿ ನಿರ್ಣಯ ಕೈಗೊಳ್ಳಲಾಯಿತು. ನಂತರ ಸಚಿವ (2ನೇ ಪುಟಕ್ಕೆ)

## ಗೂಢಚಾರಿಕೆ : ಕರ್ನಾಟಕ ಸೇರಿ ಏಳು ರಾಜ್ಯಗಳಲ್ಲಿ ಎನ್‌ಐಎ ಶೋಧ

ನವದೆಹಲಿ, ಆ. 29 - ಪಾಕಿಸ್ತಾನದ ಗೂಢಚಾರಿ ಜಾಲದ ಮೂಲಕ ರಕ್ಷಣಾ ಮಾಹಿತಿ ಸೋರಿಕೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆಯಾದ ಎನ್.ಐ.ಎ., ಕರ್ನಾಟಕ ಸೇರಿದಂತೆ ಏಳು ರಾಜ್ಯಗಳಲ್ಲಿ ಶೋಧ ನಡೆಸಿದೆ. ಪಾಕಿಸ್ತಾನದ ಮೂಲಕ ಹಣ ಪಡೆದು ಭಾರತದಲ್ಲಿ ಗೂಢಚಾರಿಕೆ ನಡೆಸಿದ ಶಂಕಿತರಿಗೆ (2ನೇ ಪುಟಕ್ಕೆ)

## ಕೇಂದ್ರ ನಿ. ನೌಕರರಿಗೆ ಸರಳ ಅರ್ಜಿ

ನವದೆಹಲಿ, ಆ. 29 - ನಿವೃತ್ತ ನೌಕರರಿಗಾಗಿ ಕೇಂದ್ರ ಸರ್ಕಾರ ಸರಳೀಕೃತ ಅರ್ಜಿಯನ್ನು ರೂಪಿಸಿದೆ. ಇದು Bhavishya/e-HRMS ಆನ್‌ಲೈನ್‌ನಲ್ಲಿ ಲಭ್ಯವಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. ಆಗಸ್ಟ್ 30ರಿಂದ ಈ ವ್ಯವಸ್ಥೆ ಜಾರಿಗೆ ಬರಲಿದೆ. ಇದು ಕಾಗದ ರಹಿತ ಆಡಳಿತಕ್ಕೂ ನೆರವಾಗಲಿದೆ.

## ಜಿಲ್ಲೆಯ ಯಾವುದೇ ತಾಲ್ಲೂಕಿನಲ್ಲಿ ಆಸ್ತಿಗಳ ನೋಂದಣಿಗೆ ಅವಕಾಶ



ದಾವಣಗೆರೆ, ಆ. 29 - ಆಸ್ತಿಗಳ ನೋಂದಣಿಯನ್ನು ಯಾವ ಸ್ಥಳದಲ್ಲಾದರೂ ನೋಂದಣಿ ಮಾಡಿಸಲು ಅವಕಾಶ ಕಲ್ಪಿಸಿದ್ದು ಬರುವ ಸೆಪ್ಟೆಂಬರ್ 2 ರಿಂದ ಜಿಲ್ಲೆಯೊಳಗೆ ಯಾವುದೇ ತಾಲ್ಲೂಕಿನಲ್ಲಿ ನೋಂದಣಿ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಪ್ರಸ್ತುತ ಸಾರ್ವಜನಿಕರು ಸ್ಥಿರಾಸ್ತಿ ಇರುವ ವ್ಯಾಪ್ತಿಯ ಉಪನೋಂದಣಿ ಕಚೇರಿಯಲ್ಲಿ ಮಾತ್ರ ದಸ್ತಾವೇಜನ್ನು ನೋಂದಣಿ ಮಾಡಲು ಅವಕಾಶವಿದ್ದು, ಆದರ ಎನಿವೇರ್ ನೋಂದಣಿಯಲ್ಲಿ ದಸ್ತಾವೇಜನ್ನು ಸ್ಥಿರಾಸ್ತಿ ಇರುವ ಜಿಲ್ಲೆಯ ಯಾವುದಾದರೂ ಉಪ ನೋಂದಣಿ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು.

ಎನಿವೇರ್ ನೋಂದಣಿ ವ್ಯವಸ್ಥೆಯು ಸಾರ್ವಜನಿಕರಿಗೆ ಹಲವರು ರೀತಿಯಲ್ಲಿ ಉಪಯುಕ್ತವಾಗಿದ್ದು ದಸ್ತಾವೇಜಿನ ನೋಂದಣಿಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ. ನೋಂದಣಿಯಲ್ಲಿ ವಿಳಂಬವನ್ನು ತಡೆಗಟ್ಟುತ್ತದೆ, ಸಾರ್ವಜನಿಕರು ಸಮೀಪದಲ್ಲಿರುವ ಉಪನೋಂದಣಿ ಕಚೇರಿಯಲ್ಲಿ ದಸ್ತಾವೇಜನ್ನು ನೋಂದಾಯಿಸಬಹುದು. ಸ್ಲಾಟ್ ಲಭ್ಯವಿರುವಂತಹ ಕಚೇರಿಯನ್ನು ನೋಂದಣಿಗೆ ಆಯ್ಕೆ ಮಾಡಿಕೊಳ್ಳಬಹುದು, ನೋಂದಣಿ ಪ್ರಕ್ರಿಯೆ ಸುಲಭವಾಗುವುದಲ್ಲದೆ ಸಮಯವು ಸಹ ಉಳಿಯುತ್ತದೆ, ಉಪನೋಂದಣಿ ಕಚೇರಿಗಳಲ್ಲಿ ಜನದಟ್ಟಣೆ ಕಡಿಮೆಯಾಗುತ್ತದೆ. ಕಚೇರಿ ಸಿಬ್ಬಂದಿಗಳ ಮೇಲೆ ಕೆಲಸದ ಒತ್ತಡ ಕಡಿಮೆಯಾಗುತ್ತದೆ ಹಾಗೂ (2ನೇ ಪುಟಕ್ಕೆ)

## ಸಿಎಂ ಪ್ರಾಸಿಕ್ಯೂಷನ್ ಅರ್ಜಿ ವಿಚಾರಣೆ ನಾಳೆಗೆ ಮುಂದೂಡಿಕೆ



ಬೆಂಗಳೂರು, ಆ. 29 - ರಾಜ್ಯಪಾಲರು ಮುಡಾ ಹಗಣದಲ್ಲಿ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿದ್ದನ್ನು ಪ್ರಶ್ನಿಸಿ ಸಿಎಂ ಸಿದ್ಧರಾಮಯ್ಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ನಾಡಿದ್ದು ದಿನಾಂಕ 31ಕ್ಕೆ ಮುಂದೂಡಿದೆ.

ಶನಿವಾರ ಬೆಳಗ್ಗೆ 10:30 ಕ್ಕೆ ವಿಚಾರಣೆಯನ್ನು ನಿಗದಿಪಡಿಸಲಾಗಿದೆ. ಆ ಮೂಲಕ ಹಿಂದಿನ ಮಧ್ಯಂತರ ಆದೇಶವನ್ನು ಹೈಕೋರ್ಟ್ ಮುಂದುವರಿಸಿದೆ. ವಿಚಾರಣೆ ಮುಂದೂಡುವಂತೆ ಜನಪ್ರತಿನಿಧಿಗಳ ಕೋರ್ಟ್‌ಗೆ ಸೂಚನೆ ನೀಡಿದೆ.

ಇಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ವಿರುದ್ಧದ ಪ್ರಾಸಿಕ್ಯೂಷನ್ ಅನುಮತಿ ಪ್ರಶ್ನಿಸಿ ಹೈಕೋರ್ಟ್ ನಲ್ಲಿ ಸಲ್ಲಿಸಿದ್ದ ಅರ್ಜಿಯ (4ನೇ ಪುಟಕ್ಕೆ)

## ಶ್ರೀಮತಿ ಶಾರದಮ್ಮ ನಿಧನ



ದಾವಣಗೆರೆ ಸಿಟಿ ಎಸ್.ಎಸ್. ಹೈಟೆಕ್ ಲೇ ಔಟ್, 7ನೇ ಕ್ರಾಸ್, ಧರ್ಮಸ್ಥಳ ಟ್ರಸ್ಟ್ ಹತ್ತಿರದ ವಾಸಿ, **ಶ್ರೀಮತಿ ಶಾರದಮ್ಮ** ಅವರು ದಿನಾಂಕ 29-8-2024ರ ಗುರುವಾರ ಸಂಜೆ 3.40 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 62 ವರ್ಷ ವಯಸ್ಸಾಗಿತ್ತು. ಮೃತರು ಪತಿ, ಇಬ್ಬರು ಪುತ್ರರು, ಅಳಿಯಂದಿರು, ಮಾವಂದಿರು, ಸಹೋದರ, ಸಹೋದರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ದಿನಾಂಕ 30-8-2024ರ ಶುಕ್ರವಾರ ಬೆಳಿಗ್ಗೆ 9 ಗಂಟೆಯವರೆಗೆ ಎಸ್.ಎಸ್. ಹೈಟೆಕ್ ಲೇ ಔಟ್‌ನಲ್ಲಿರುವ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು.
ನಂತರ ಬೆಳಿಗ್ಗೆ 9 ರಿಂದ 12 ಗಂಟೆಯವರೆಗೆ ಶಿರಮಗೊಂಡನಹಳ್ಳಿಯಲ್ಲಿ ಇರಿಸಲಾಗುವುದು. ನಂತರ ಬೆಳವನೂರಿನ
ಮೃತರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು, ಪತಿ : ಶಿವದೇವಪ್ಪ, ಮಗ : ರುದ್ರೇಶ್, ಶ್ರೀಮತಿ ಸೌಮ್ಯ ಮತ್ತು ನಾಡಿಗರ ವಂಶಸ್ಥರು, ಬ್ಯಾಡಗಿ ವಂಶಸ್ಥರು, ಕರಿಯಪ್ಪ ವಂಶಸ್ಥರು, ಹೊರಟ್ಟಿ ವಂಶಸ್ಥರು ಹಾಗೂ ಕುಟುಂಬ ವರ್ಗದವರು. ಮೊ. : 9844415701, 9844966593

---

॥ ಶ್ರೀ ಯಲ್ಲಮ್ಮ ದೇವಿ ಪ್ರಸನ್ನ ॥

## ವೈಕುಂಠ ಸಮಾರಾಧನೆ ಆಹ್ವಾನ



ದಿನಾಂಕ : 21.08.2024ರ ಬುಧವಾರ ಬೆಳಿಗ್ಗೆ 4.10ಕ್ಕೆ

**ಶ್ರೀ ವಿರೂಪಣ್ಣ ವೈ. ಅಂಬರ್‌ಕರ್**
B.Com., F.C.A.
(ಚಾರ್ಟರ್ಡ್ ಅಕೌಂಟೆಂಟ್ಸ್, ದಾವಣಗೆರೆ)

ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ
**‘ದಶಕೀರವನ್ನು’**
ದಿನಾಂಕ :30.08.2024ರ ಶನಿವಾರ ತ್ರಿಶೂಲ್ ಕಲಾ ಭವನ, ಪಿ.ಬಿ. ರಸ್ತೆ, ದಾವಣಗೆರೆಯಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ :
ಶ್ರೀಮತಿ ಶೈಲಾ ಅಂಬರ್‌ಕರ್ ಮತ್ತು ಓಂಕಾರ್ ಅಂಬರ್‌ಕರ್
ಮತ್ತು ಮಗಳು, ಅಳಿಯ ಮತ್ತು ಮೊಮ್ಮಗಳು
ಅಂಬರ್‌ಕರ್ ವಂಶಸ್ಥರು ಹಾಗೂ ಬಂಧು-ಮಿತ್ರರು
ಫೋನ್ : 99024 21432

---


## ಶಿವನಾರದಮುನಿ ಸ್ವಾಮಿ ಕಡೇ ಶ್ರಾವಣ ಶನಿವಾರದ ವಿಶೇಷ ಪೂಜೆ



ಇತಿಹಾಸ ಪ್ರಸಿದ್ಧ ಹರಪನಹಳ್ಳಿ ತಾಲ್ಲೂಕು ಶ್ರೀ ಕ್ಷೇತ್ರ ಚಿಗಟೇರಿ ಗ್ರಾಮದಲ್ಲಿ
ದಿನಾಂಕ: 31.08.2024 ರಂದು ಸ್ವಾಮಿಯ ಕಡೇ ಶ್ರಾವಣ ಶನಿವಾರ ಬೆಳಿಗ್ಗೆ 5.00 ರಿಂದ 6.00 ಗಂಟೆಯೊಳಗೆ ರುದ್ರಾಭಿಷೇಕ ನೆರವೇರಲಿದ್ದು, ನಂತರ ಹೊಸ ಮಡಿ, ಹೂವಿನ ಅಲಂಕಾರದೊಂದಿಗೆ ವಿಶೇಷ ಪೂಜೆಯು
ಬೆಳಿಗ್ಗೆ 9.30 ರಿಂದ 10.00 ಗಂಟೆಯೊಳಗಾಗಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ಪ್ರಧಾನ ಅರ್ಚಕರಿಂದ ಮಹಾ ಮಂಗಳಾರತಿಯೊಂದಿಗೆ ವಿಶೇಷ ಪೂಜೆ ನೆರವೇರುವುದು. ಸರ್ವಭಕ್ತಾದಿಗಳು ಸಮಯಕ್ಕೆ ಸರಿಯಾಗಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಿ, ದರ್ಶನಾಶೀರ್ವಾದ ಪಡೆಯಬೇಕೆಂದು,
ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಅಣಬೇರು ರಾಜಣ್ಣನವರು ತಿಳಿಸಿರುತ್ತಾರೆ.

ವಿ.ಸೂ. :- ಸ್ವಾಮಿಯ ವಿಶೇಷ ಪೂಜೆಯ ನಂತರ ಸುಮಾರು 25 ಸಾವಿರ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆಯನ್ನು ಶ್ರೀ ನಾರದಮುನಿ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.

**ಶ್ರೀ ನಾರದಮುನಿ ಸೇವಾ ಟ್ರಸ್ಟ್ (ರಿ.) ಚಿಗಟೇರಿ.**
ಟ್ರಸ್ಟಿನ ಸರ್ವ ಸದಸ್ಯರು ಮತ್ತು ದಾಸೋಹ ಸಮಿತಿ ಸದಸ್ಯರುಗಳು,
ಸಹಾಯಕ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬಳ್ಳಾರಿ.
ಚಿಗಟೇರಿ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ಉಪಾಧ್ಯಕ್ಷರು,
ಸರ್ವ ಸದಸ್ಯರು, ಅಭಿವೃದ್ಧಿ ಅಧಿಕಾರಿ ಮತ್ತು ಸರ್ವಭಕ್ತಾದಿಗಳು
ಹಾಗೂ ಚಿಗಟೇರಿ ಗ್ರಾಮಸ್ಥರು.


---

## ಎಂ. ಚನ್ನಬಸಪ್ಪ ನಿಧನ



**ಶ್ರೀ ಎಂ. ಚನ್ನಬಸಪ್ಪನವರು** (83 ವರ್ಷ)
ನಿವೃತ್ತ ಸಹಾಯಕ ನಿರ್ದೇಶಕರು
ನಗರ ಯೋಜನೆ ಇಲಾಖೆ, ದಾವಣಗೆರೆ.

ಇವರು, ದಿನಾಂಕ : 29.08.2024ರ ಬೆಳಗಿನ ಜಾವ 12.45 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ : 30.08.2024ರ ಶುಕ್ರವಾರ ಮಧ್ಯಾಹ್ನ 12.00ಕ್ಕೆ ಶಾಮನೂರು ಗ್ಲಾಸ್ ಹೌಸ್ ಹತ್ತಿರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ಅಂತಿಮ ದರ್ಶನಕ್ಕಾಗಿ ಪಾರ್ಥಿವ ಶರೀರವನ್ನು ಮೃತರ ಸ್ವಗೃಹ 3226, 11ನೇ ಮೇನ್, 3ನೇ ಕ್ರಾಸ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆಯಲ್ಲಿ ಇರಿಸಲಾಗುವುದು.

ಇಂತಿ ದುಃಖತಪ್ತರು :
ಶ್ರೀಮತಿ ಸರಿತಾ, ಶ್ರೀ ಗಿರೀಶ್ ಮತ್ತು ಮಕ್ಕಳು
ಶ್ರೀಮತಿ ಗಾಯಿತ್ರಿ, ಶ್ರೀ ಜಗದೀಶ್ ಮತ್ತು ಮಕ್ಕಳು
ಶ್ರೀಮತಿ ಮಂಗಳ, ಶ್ರೀ ರಾಜಶೇಖರ್ ಮತ್ತು ಮಕ್ಕಳು
ಮಲ್ಲಪ್ಪ ವಂಶಸ್ಥರು, ಕಾಕನೂರು ಹಾಗೂ ಬಂಧು-ಮಿತ್ರರು
ಫೋ. : 9449172613, 8722585100

# ಹರಿಹರ : ಶಿಥಿಲಗೊಂಡ ಶಾಲಾ-ಕಾಲೇಜು ಕಟ್ಟಡಗಳ ದುರಸ್ತಿಗೆ ಅನುದಾನಕ್ಕೆ ಮನವಿ



ಹರಿಹರ, ಅ. 29 - ಶಿಥಿಲವಾದ ಕೊಠಡಿಗಳ ನೆಲ ಸಮ ಮಾಡಿ ಹೊಸದಾಗಿ ಕಟ್ಟಡ ಕಟ್ಟುವುದಕ್ಕೆ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಿಗೆ ಮತ್ತು ಅಧಿಕಾರಿ ವರ್ಗದವರಿಗೆ ಜಿ.ಪಂ. ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಸುರೇಶ್ ಇಟ್ನಾಳ್ ಸೂಚಿಸಿದರು.

ನಗರದ ಹೈಸ್ಕೂಲ್ ಬಡಾವಣೆಯ ಹಳ್ಳದ ಕೇರಿ ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆಗೆ ಭೇಟಿ ಕೊಟ್ಟು ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಶಾಲೆಯ ಶೌಚಾಲಯ ಕಟ್ಟಡ ಕಾಮಗಾರಿ ಶೇ. 60 ರಷ್ಟು ಮುಗಿದಿದ್ದು, ಕೆಲವು ವ್ಯಕ್ತಿಗಳು ತಮ್ಮ ಪತ್ರಿಷ್ಠೆ ಗೊಸ್ಕರ ಪಕ್ಕದಲ್ಲಿ ದೇವಸ್ಥಾನ ಇದೆ ಎಂದು ಅಡ್ಡಿಪಡಿಸುತ್ತಿರುವುದು, ಇದು ಸಮಂಜಸವಾಗಿ ಇರದೆ ಇರೋದರಿಂದ ಅಡ್ಡಿಪಡಿಸುತ್ತಿರುವ ವ್ಯಕ್ತಿಗಳ ಮಾತಿಗೆ ಮನ್ನಣೆ ಕೊಡುವುದನ್ನು ಬಿಟ್ಟು ಕಾಮಗಾರಿ ಪೂರ್ಣಗೊಳಿಸಿ ಒಂದು ವೇಳೆ ಕಾಮಗಾರಿ ತಡೆಯುವುದಕ್ಕೆ ಮುಂದಾದರೆ ಪೊಲೀಸ್ ಇಲಾಖೆಯ ಸಹಕಾರ ಪಡೆದುಕೊಂಡು ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಶಾಲೆಯ ಪಕ್ಕದಲ್ಲಿ ಕೊಠಡಿಯೊಂದು ನಿರ್ಮಾಣ ಗೊಳ್ಳುತ್ತಿದ್ದು, ಅದಕ್ಕೂ ಡಿ.ಆರ್.ಎಂ ಮೈದಾನದ ಕ್ರೀಡಾಭಿವೃದ್ಧಿ ಸಂಘದವರು ಅಡ್ಡಿಪಡಿಸ ಲಾಗುತ್ತಿದೆ ಎಂದು ಸ್ಥಳದಲ್ಲಿ ಮಾಹಿತಿ ಪಡೆದ ಅವರು, ಸಂಘದ ಅಧ್ಯಕ್ಷ ವಕೀಲ ಆನಂದ್ ಕುಮಾರ್ ಅವರೊಂದಿಗೆ ಚರ್ಚಿಸಿ ಶಾಲಾ ಮಕ್ಕಳಿಗೆ ತೊಂದರೆ ಆಗುವ ಕಾರಣಕ್ಕೆ ಕೊಠಡಿ ಕಟ್ಟಲಾ ಗುತ್ತಿದೆ ಎಂದು ವಿವರಣೆ ನೀಡಿದರು. ಆದರೆ ವಕೀಲರು ಶಾಲೆ ಹಿಂಭಾಗದಲ್ಲಿ ಸಾಕಷ್ಟು ಜಾಗವಿದೆ ಶಿಥಿಲವಾಗಿರುವ ಕೊಠಡಿ ಗಳ ಜಾಗದಲ್ಲಿ ಹೊಸ ಕೊಠಡಿಗಳನ್ನು ನಿರ್ಮಾಣ ಮಾಡುವಂತೆ ಹೇಳಿದರು.

ಇದೇ ವೇಳೆ ಜಿಲ್ಲಾ ಜಾಗೃತಿ ಸಮಿತಿಯ ಸದಸ್ಯ ರಹಮತ್ ಮತ್ತು ಡಿ.ಆರ್.ಎಂ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಜಬಿವುಲ್ಲಾ ಮುಂತಾದವರು ಪ್ರೌಢಶಾಲೆಗೆ ಭೇಟಿ ನೀಡಿ ಸ್ಥಳ ಪರಿಶೀಲಿಸುವಂತೆ ಮಾಡಿದ ಮನವಿಗೆ ಸ್ಪಂದಿಸಿ ಶಾಲೆಯನ್ನು ಪರಿಶೀಲಿಸಿದರು. ಈ ಹಿಂದೆ ಶಾಲಾ ಸುಧಾರಣಾ ಸಮಿತಿಯಿಂದ ಕೊಠಡಿಗಳಿಗೆ ಟೆಂಡರ್ ನೀಡಿರುವ ಬಗ್ಗೆ ಮಾಹಿತಿ ಪಡೆದು ಅದರ ವಿವರವನ್ನು ತಮಗೆ ಕಳಿಸುವಂತೆ ಮುಖ್ಯೋಪಾಧ್ಯಾಯರಿಗೆ ತಿಳಿಸಿದರು.

ಈ ಸಮಯದಲ್ಲಿ ಡಿ.ಆರ್.ಎಂ ಕ್ರೀಡಾಭಿವೃದ್ಧಿ ಸಂಘದ ಕಾರ್ಯದರ್ಶಿ ಸಿದ್ದೇಶ್, ಉಪಾಧ್ಯಕ್ಷ ರವಿ, ಪರಶುರಾಮ್, ಸುನಿಲ್, ಗೋಪಾಲಿ, ರಾಘವೇಂದ್ರ ಕೊಂಡಜ್ಜಿ, ಸಂತೋಷ್, ದಾದಾಪೀರ್, ಪ್ರೇಮ್ ಇತರರು ಉಪಸ್ಥಿತರಿದ್ದರು.

# ವಕೀಲರು ಕಕ್ಷಿದಾರರಿಗೆ ದಾರಿದೀಪವಾಗಬೇಕು

## ಜಗಳೂರು : ಲೋಕ ಅದಾಲತ್ ಪೂರ್ವಭಾವಿ ಸಭೆಯಲ್ಲಿ ನ್ಯಾ. ಅಣ್ಣಯ್ಯನವರ್



ಜಗಳೂರು, ಆ.29- ದ್ವೇಷ, ಅಸೂಯೆ ಮತ್ತು ಸಿಟ್ಟು ಮನುಷ್ಯನನ್ನು ಸದಾ ಸಮಸ್ಯೆಗಳ ಸುಳಿಗೆ ದೂಡುತ್ತದೆ. ಸಂಯಮ, ತಾಳ್ಮೆ ಮತ್ತು ಸಹಾನುಭೂತಿಯಿಂದ ನೆಮ್ಮದಿಯ ಜೀವನ ನಡೆಸಲು ಸಾಧ್ಯ ಎಂದು 1ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರ್ ಅಭಿಪ್ರಾಯಪಟ್ಟರು.

ಪಟ್ಟಣದ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಬುಧವಾರ ಲೋಕ್ ಅದಾಲತ್ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಮೊದಲು ಮನಸ್ಸಿನಿಂದ ನಕಾರಾತ್ಮಕ ವಿಚಾರ ಗಳನ್ನು ತೆಗೆದುಹಾಕಬೇಕು. ಉರಿಯುವವನು ಉರಿಯಲಿ ಕೊನೆಗೆ ಬೂದಿಯಾಗುತ್ತಾನೆ. 'ಕುದಿಯುವವನು ಕುದಿಯಲಿ ಬೆಂದು, ಸೀದು ಹೋಗುತ್ತಾನೆ' ಎಂಬ ಸಂತರ ಅನುಭವದ ಮಾತು ಎಲ್ಲ ಕಾಲಕ್ಕೂ ಸತ್ಯವಾಗಿದೆ. ಜೀವನದಲ್ಲಿ ನೊಂದು, ಬೆಂದಾಗ ಮಾತ್ರ ತಾಳ್ಮೆ, ಸಂಯಮದ ಮಹತ್ವ ತಿಳಿಯುತ್ತದೆ. ರಾಗದ್ವೇಷವಿಲ್ಲದ ಸಂತಸದ ಜೀವನ ಮುಖ್ಯ ಎಂದರು.

ನ್ಯಾಯಾಲಯಗಳಲ್ಲಿ ಆಗಾಗ್ಗೆ ನಡೆಯುವ ಲೋಕ್ ಅದಾಲತ್ ಕಾರ್ಯಕ್ರಮಗಳು ಮಹತ್ವದ್ದಾಗಿವೆ. ನಾನೇ ಹೆಚ್ಚು ಎಂಬ ಅಹಮ್ಮಿಕೆ ಮನುಷ್ಯನಿಗೆ ಒಳ್ಳೆಯದಲ್ಲ. ಐಶ್ವರ್ಯ, ಅಂತಸ್ತಿಗಾಗಿ ಹಪಾಹಪಿಸಿ, ಕೊನೆಗೆ ಆರೋಗ್ಯ ಕಳೆದುಕೊಳ್ಳುತ್ತಾರೆ. ದುರಾಸೆಯಿಂದ ಸಂಕಷ್ಟ ತಪ್ಪಿದ್ದಲ್ಲ. ವಕೀಲರು ಕಕ್ಷಿದಾರರಿಗೆ ದಾರಿದೀಪವಾಗಬೇಕು. ನ್ಯಾಯಾಧೀಶರು, ವಕೀಲರು ಮತ್ತು ಕಕ್ಷಿದಾರರು ಹಣತೆ, ಎಣ್ಣೆ ಮತ್ತು ಬತ್ತಿಯಂತೆ ಒಂದಾದಲ್ಲಿ ದೀಪ ಉಜ್ವಲವಾಗಿ ಬೆಳಗಲು ಸಾಧ್ಯವಾಗುತ್ತದೆ ಎಂದು ನ್ಯಾಯಾಧೀಶ ಅಣ್ಣಯ್ಯನವರ್ ವಿಶ್ಲೇಷಿಸಿದರು.

ಕುಂಟುಂಬದಲ್ಲಿ ಶಾಂತಿ, ಸಾಮರಸ್ಯ ಇದ್ದಲ್ಲಿ ಯಾವುದೇ ವ್ಯಕ್ತಿ ತನ್ನ ಕ್ಷೇತ್ರದಲ್ಲಿ ಉತ್ತಮವಾದದ್ದನ್ನು ಸಾಧಿಸಬಹುದು. ನ್ಯಾಯಾಲಯಗಳಲ್ಲಿರುವ ಸಿವಿಲ್ ಮತ್ತು ಕ್ರಿಮಿನಲ್ ಸ್ವರೂಪದ ಪ್ರಕರಣಗಳನ್ನು ಲೋಕ್ ಅದಾಲತ್‌ಗಳ ಮೂಲಕ ರಾಜೀಸಂಧಾನ ಮಾಡಿಕೊಂಡಲ್ಲಿ ನೆಮ್ಮದಿಯ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ನ್ಯಾಯಾಧೀಶ ಮಹಾವೀರ್ ಎಂ. ಕರೆಣ್ಣನವರ್ ಹೇಳಿದರು.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ರಶ್ಮಿ, ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲ ಯದ ನ್ಯಾಯಾಧೀಶ ಚೇತನ್, ವಕೀಲರ ಸಂಘದ ಅಧ್ಯಕ್ಷ ಮರೇನಹಳ್ಳಿ ಟಿ.ಬಸವರಾಜ್, ಸಹಾಯಕ ಸರ್ಕಾರಿ ಅಭಿಯೋಜಕ ಮಂಜುನಾಥ್, ಹಿರಿಯ ವಕೀಲ ವೈ.ಹನುಮಂತಪ್ಪ ಇದ್ದರು.

# ಡಿಕೆಶಿ ಅಕ್ರಮ ಆಸ್ತಿ : ಮನವಿ ತಳ್ಳಿ ಹಾಕಿದ ಹೈಕೋರ್ಟ್

(1ನೇ ಪುಟದಿಂದ) ಸುಪ್ರೀಂ ಕೋರ್ಟ್ ಇತ್ಯರ್ಥ ಪಡಿಸಬೇಕಿದೆ ಎಂದು ತಿಳಿಸಿದೆ. ಆಗಸ್ಟ್ 12ರಂದು ಹೈಕೋರ್ಟ್ ಪೀಠ ಈ ಕುರಿತ ತೀರ್ಪನ್ನು ಕಾಯ್ದಿರಿಸಿತ್ತು.

ಈ ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಶಿವಕುಮಾರ್ ವಿರುದ್ಧದ ಪ್ರಕರಣದ ತನಿಖೆಗಾಗಿ ಸಿಬಿಐಗೆ ಅನುಮತಿ ನೀಡಲಾಗಿತ್ತು. ವಿಚಾರಣೆ ನಡೆಸಿದ್ದ ಸಿಬಿಐ, ಶಿವಕುಮಾರ್ ವಿರುದ್ಧ ಎಫ್‌ಐಆರ್ ಸಹ ದಾಖಲಿಸಿತ್ತು.

ನಂತರ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ, ಸಿಬಿಐಗೆ ಅನುಮತಿ ನೀಡಿರುವುದು ಕಾನೂನಿಗೆ ಅನುಗುಣವಾಗಿಲ್ಲ ಎಂದು ಹೇಳಿ ಹಿಂದಿನ ಸರ್ಕಾರದ ನಿರ್ಧಾರವನ್ನು ವಾಪಸ್ ಪಡೆದಿತ್ತು.

## ಸಾಯುವವರೆಗೂ ಪ್ರಕರಣಗಳನ್ನು ಎದುರಿಸಬೇಕು

(1ನೇ ಪುಟದಿಂದ) ಜಯವಾಗಿದೆ ಎಂದರು.

ನನ್ನ ಮೇಲಿನ ಜಾರಿ ನಿರ್ದೇಶನಾಲಯದ ಪ್ರಕರಣ ಕೂಡ ವಜಾ ಆಯಿತು. ನನ್ನ ಆಸ್ತಿ ಏನಿದೆ ಅಂತ ನನಗೆ ಗೊತ್ತಿದೆ. ಈ ಸಂಬಂಧ ನಾನು ದಾಖಲೆ ಕೊಟ್ಟಿದ್ದೇನೆ. ನಮಗೆ ತೊಂದರೆ ಕೊಡುವಂತಹ ಕೆಲಸ ನಡೆಯುತ್ತಿದೆ ಎಂದು ಶಿವಕುಮಾರ್ ಆರೋಪಿಸಿದರು.

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರು ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರಿಂಕೋರ್ಟ್‌ಗೆ ಮೇಲ್ಮನವಿ ಹೋಗುವುದಾಗಿ ಹೇಳಿದ್ದಾರೆ. ಅವರಿಗೂ ನ್ಯಾಯಾಲಯ, ನಮಗೂ ನ್ಯಾಯಾಲಯ ಇದೆ. ನಾನು ಸಾಯೋವರೆಗೂ ಈ ರೀತಿ ಕೇಸ್‌ಗಳನ್ನು ಎದುರಿಸಲೇಬೇಕು ಎಂದರು.

ಯತ್ನಾಳ್‌ಗೂ ಈ ಪ್ರಕರಣಕ್ಕೂ ಏನು ಸಂಬಂಧ ಇದೆ? ಸಿಬಿಐ ನವರೇ ಈ ಪ್ರಕರಣಕ್ಕೆ ಅಷ್ಟು ತಲೆಕೆಡಿಸಿಕೊಂಡಿಲ್ಲ ಎಂದೂ ಶಿವಕುಮಾರ್ ಹೇಳಿದರು.

ಈ ನಡುವೆ, ಹೇಳಿಕೆ ನೀಡಿರುವ ಯತ್ನಾಳ್, ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸುವುದಾಗಿ ಹೇಳಿದ್ದಾರೆ.

ಸಿಬಿಐ ತನಿಖೆ ನಡೆಸಲು ನೀಡಿದ್ದ ಸಮ್ಮತಿ ಹಿಂಪಡೆದಿದ್ದ ಕ್ರಮವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ನಾವು ದಾವೆ ಹೂಡಿದ್ದೆವು. ಇದರಲ್ಲಿ ಸಂವಿಧಾನಿಕ ಪ್ರಶ್ನೆಗಳು ಉದ್ಭವಿಸುವ ಕಾರಣ ನಮ್ಮ ಅರ್ಜಿಯನ್ನು ಹಿರಿಯ ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ನ್ಯಾಯಮೂರ್ತಿ ಉಮೇಶ್ ಎಂ. ಅಡಿಗ ಪೀಠವು ತಿರಸ್ಕರಿಸಿದೆ ಎಂದು ಯತ್ನಾಳ್ ಹೇಳಿದರು.

ಸರ್ವೋಚ್ಚ ನ್ಯಾಯಾಲಯದಲ್ಲಿ ನಾವು ಇದನ್ನು ಪ್ರಶ್ನಿಸುತ್ತೇವೆ. ಭ್ರಷ್ಟಾಚಾರದ ವಿರುದ್ಧ ನಮ್ಮ ಸಮರ ಇಲ್ಲಿಗೆ ನಿಲ್ಲುವುದಿಲ್ಲ. ಈ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ನಾವು ಕೊಂಡೊಯ್ಯುತ್ತೇವೆ ಎಂದವರು ತಿಳಿಸಿದ್ದಾರೆ.

# ಹರಿಹರ : ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ಸಮಸ್ಯೆ



ಹರಿಹರ, ಅ.29- ನಗರದ ಎಪಿಎಂಸಿ ಆವರಣದಲ್ಲಿರುವ ಡಿಪ್ಲೋಮಾ ಕಾಲೇಜು ವಿದ್ಯಾರ್ಥಿಗಳು ಬಸ್ ವ್ಯವಸ್ಥೆ ಇಲ್ಲದೇ ಇರೋದರಿಂದ ಪ್ರತಿನಿತ್ಯ ಗುತ್ತೂರು, ದೀಟೂರು, ಸಾರಥಿ, ಕೊಂಡಜ್ಜಿ, ಕರಲಹಳ್ಳಿ, ಕುರುಬರಹಳ್ಳಿ, ಗಂಗನಹರಸಿ ಭಾಗದಿಂದ ಬರುವಂತ ವಿದ್ಯಾರ್ಥಿಗಳು ಕಾಲೇಜಿಗೆ ಹೋಗುವಾಗ ಮತ್ತು ಬರುವಾಗ ಇಟ್ಟಿಗೆ ಮರಳು ತುಂಬಿದ ಮಜ್ದಾ ವಾಹನಗಳ ಮೂಲಕ ಕಾಲೇಜಿಗೆ ಹೋಗಿ ಬರುವಂತಾಗಿದೆ. ಎಪಿಎಂಸಿ ಮುಂಭಾಗದಲ್ಲಿ ಗ್ರಾಮೀಣ ಪ್ರದೇಶಗಳಿಗೆ ಓಡಾಡುವ ಸರ್ಕಾರಿ ಬಸ್ ನಿಲ್ಲಿಸಿ, ಪ್ರತಿನಿತ್ಯ ಕಾಲೇಜಿಗೆ ಓಡಾಡುವ ವಿದ್ಯಾರ್ಥಿಗಳಿಗೆ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ಅವಕಾಶ ಮಾಡಿಕೊಟ್ಟರೆ ಇಲ್ಲಿನ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದಂತಾಗುತ್ತದೆ.

# ವಕ್ಫ್ ಕಾಯ್ದೆ ತಿದ್ದುಪಡಿಗೆ ವಿರೋಧ

(1ನೇ ಪುಟದಿಂದ) ಜಮೀರ್ ಅಹಮದ್ ಖಾನ್ ಹಾಗೂ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಕುರಿತು ನಿರ್ಣಯದ ಪ್ರತಿ ನೀಡಿ ಕೇಂದ್ರಕ್ಕೆ ತಿದ್ದುಪಡಿ ಕಾಯ್ದೆ ವಿರೋಧಿಸಿ ಪತ್ರ ಬರೆಯಲು ಮನವಿ ಮಾಡಿತು.

ಕೇಂದ್ರ ಸರ್ಕಾರ ರಚನೆ ಮಾಡಿರುವ ಜಂಟಿ ಸಲಹಾ ಸಮಿತಿಗೂ ಯಾವುದೇ ರೀತಿಯ ಮಾಹಿತಿ ಕೊಡುವುದಿಲ್ಲ. ನಮ್ಮದು ಸ್ವಾಯತ್ತ ಸಂಸ್ಥೆಯಾಗಿದ್ದು, ಉದ್ದೇಶಿತ ತಿದ್ದುಪಡಿ ಕಾಯ್ದೆ ಸಮುದಾಯದ ಹಿತಾಸಕ್ತಿಗೆ ವಿರುದ್ಧ ವಾಗಿದೆ. ಇದರ ಹಿಂದಿನ ಉದ್ದೇಶ ಬೇರೆ ಇದೆ ಎಂದು ವಕ್ಫ್ ಬೋರ್ಡ್ ಆಡಳಿತ ಮಂಡಳಿ ಸಭೆ ಅಭಿಪ್ರಾಯ ಪಟ್ಟಿದ್ದನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರಲಾಯಿತು.

ಮುಂದಿನ ಅಧಿವೇಶನದಲ್ಲಿ ರಾಜ್ಯ ಸರ್ಕಾರ ಖಂಡನಾ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಕೋರಲಾಯಿತು.

# ಬಳ್ಳಾರಿ ಜೈಲಿಗೆ ದರ್ಶನ್ ರವಾನೆ

(1ನೇ ಪುಟದಿಂದ) ಸ್ಥಳಾಂತರಿಸಲಾಯಿತು.

ದರ್ಶನ್ ಬಳ್ಳಾರಿ ಜೈಲಿಗೆ ಧಾವಿಸುತ್ತಿದ್ದಂತೆ ಡಿಐಜಿ ಟಿ.ಪಿ. ಶೇಷ ಅವರು ಆದೇಶ ಹೊರಡಿಸಿ ಇವರನ್ನು ಪ್ರತ್ಯೇಕ ಸೆಲ್‌ನಲ್ಲಿ ಇಡುವಂತೆ ಸೂಚಿಸಿದ್ದಾರೆ. ಇವರನ್ನು ಸಾಮಾನ್ಯ ಖೈದಿಯಂತೆ ನೋಡಿಕೊಳ್ಳಬೇಕು ಹಾಗೂ ಇವರ ಸೆಲ್‌ಗೆ 24 ಗಂಟೆಗಳ ಕಾಲ ಸಿಸಿ ಟಿವಿ ಕ್ಯಾಮರ ಅವಳವಡಿಸಬೇಕು. ದಿನಕ್ಕೆ ಒಂದೆರಡು ಬಾರಿಯಾದರೂ ಜೈಲ್ ಮುಖ್ಯಸ್ಥರು ಭೇಟಿ ನೀಡಿ ಪರಿಶೀಲಿಸಬೇಕು. ದರ್ಶನ್ ಇರುವ ಸೆಲ್ ಉಸ್ತುವಾರಿಗೆ ಕಿರಿಯ ಅಧಿಕಾರಿ ನೇಮಿಸಿದಲ್ಲಿ ಅವರಿಗೆ ಬಾಡಿ ಕ್ಯಾಮರಾ ಅಳವಡಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಜೈಲಿನಲ್ಲಿ ನಟ ದರ್ಶನ್ ಭೇಟಿಗೆ ಚಿತ್ರೋದ್ಯಮದವರು ಭೇಟಿ ಕೊಡುವಂತಿಲ್ಲ. ಬರೀ ಅವರ ಕುಟುಂಬದವರು, ಅವರ ರಕ್ತ ಸಂಬಂಧಿಗಳು ಸಮಯಾವಕಾಶ ಪಡೆದು ಭೇಟಿ ಮಾಡಬಹುದಾಗಿದೆ ಎಂದಿದ್ದಾರೆ.

# ಆಸ್ತಿಗಳ ನೋಂದಣಿಗೆ ಅವಕಾಶ

ನ್ಯಾಮತಿ ಕಚೇರಿಗಳಲ್ಲಿ ನೋಂದಣಿ ಕೆಲಸ ಸಮಾನವಾಗಿ ಹಂಚಿಕೆಯಾಗುತ್ತದೆ.

ಸಾರ್ವಜನಿಕರು ಎನಿವೇರ್ ನೋಂದಣಿಯ ಸದುಪಯೋಗಪಡಿಸಿಕೊಂಡು ತಮಗೆ ಹತ್ತಿರದ ಅಥವಾ ನೋಂದಣಿಗೆ ಸ್ಲಾಟ್ ಲಭ್ಯವಿರುವಂತಹ ಕಚೇರಿ ಆಯ್ಕೆ ಮಾಡಿಕೊಂಡು ನೊಂದಣಿ ಮಾಡಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ ನಾಳೆ ಆರೋಗ್ಯ ಶಿಬಿರ

ಮಲೇಬೆನ್ನೂರು, ಆ.29- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಾಡಿದ್ದು ದಿನಾಂಕ 31ರ ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ಮಲೇಬೆನ್ನೂರು ಲಯನ್ಸ್ ಕ್ಲಬ್ ಮತ್ತು ಎಸ್.ಎಸ್. ನಾರಾಯಣ ಹೆಲ್ತ್ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಲಯನ್ಸ್ ಕ್ಲಬ್ ಅಧ್ಯಕ್ಷೆ ಪಾರ್ವತಮ್ಮ ಇ.ಎಂ. ಮರುಳಸಿದ್ದೇಶ್ ತಿಳಿಸಿದ್ದಾರೆ.

## ಕೈಲಾಸ ಸಮಾರಾಧನೆ



**ದಿ|| ಶ್ರೀ ರಟ್ಟಿಹಳ್ಳಿ ತಿಪ್ಪಣ್ಣ ಆರ್.ಹೆಚ್.**


ವಡ್ಡಿನಹಳ್ಳಿ ನಿಧನ: 15-08-2024

**ಕೈಲಾಸ ಸಮಾರಾಧನೆಯನ್ನು 30-08-2024 ಮಧ್ಯಾಹ್ನ 12 ಗಂಟೆಗೆ ಸ್ವ-ಗ್ರಾಮ ಹೊನ್ನೂರು ವಡ್ಡಿನಹಳ್ಳಿ ಗ್ರಾಮದಲ್ಲಿ ಏರ್ಪಡಿಸಲಾಗಿದೆ.**

ಇಂತಿ

**ಶ್ರೀನಿವಾಸ್ ರಟ್ಟಿಹಳ್ಳಿ (ಗಾಳಿ ಶ್ರೀನಿವಾಸ್)**
**ಅಕ್ಕ-ತಂಗಿಯರು ಮತ್ತು ರಟ್ಟಿಹಳ್ಳಿ ಕುಟುಂಬ ವರ್ಗ**

## ನಾಲ್ಕನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಸೂರ್ಯನಾರಾಯಣ ಎಲಿಗಾರ್**

ಎನ್.ಕೆ.ಎಸ್. ಸೈಕಲ್ ಮಾರ್ಟ್ ಮಾಲೀಕರು,
ನಿಧನ : 30.08.2020

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

✦ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಉಸ್ತುವಾರಿ ಸಚಿವರು
✦ ಆರ್.ಎಸ್. ಶೇಖರಪ್ಪ ✦ ಡಿ. ಬಸವರಾಜ್
✦ ಆರ್. ಹೆಚ್. ನಾಗಭೂಷಣ್ ✦ ದಿನೇಶ್ ಕೆ. ಶೆಟ್ಟಿ
✦ ಶ್ರೀನಿವಾಸ್ ಶಿವಗಂಗಾ ✦ ತಿಪ್ಪೇಸ್ವಾಮಿ ಶಾಮನೂರು
✦ ರಾಜುರೆಡ್ಡಿ ✦ ಡಾ. ರಮೇಶ್ ✦ ಮಂಜುನಾಥ ಬಾಪೂಜಿ
✦ ಶಶಿಧರ್ ✦ ಚೈತನ್ಯಕುಮಾರ್ ✦ ಸುರೇಶ್ ಜರೀಕಟ್ಟೆ
✦ ರಾಮನಾಥ ಖಮಿತ್ಕರ್ ✦ ಜಗದೀಶ್ ಮುದೇಗೌಡ್ರು ✦ ಅಜಯ್
✦ ಸುರಭಿ ಶಿವಮೂರ್ತಿ ✦ ವಿಠಲ್ ಅಮಾಸಿ ✦ ಅಜಯ್ ✦ ಹಾಲೇಶ್ ನಲ್ಲುಂದ

# ಬಡತನ ಐಶ್ವರ್ಯದಿಂದ ನಿವಾರಣೆಯಾಗದು

(1ನೇ ಪುಟದಿಂದ) ಅಲ್ಲಿ ಸಂಬಂಧಗಳು ಗಟ್ಟಿಯಾಗುತ್ತವೆ. ತಂದೆ - ತಾಯಿಗಳು ಮಕ್ಕಳಿಗೆ ಆದರ್ಶ ವಾಗುವಂತೆ ಇರಬೇಕು ಹಾಗೂ ಮಕ್ಕಳೂ ಸಹ ತಂದೆ - ತಾಯಿಗಳಿಗೆ ಆದರ್ಶವಾಗುವಂತಹ ಬದುಕು ಬದುಕಬೇಕು ಎಂದವರು ಕಿವಿಮಾತು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಪಾಲಿಕೆ ಸದಸ್ಯ ಎಸ್.ಟಿ. ವೀರೇಶ್, ಭಾರತೀಯ ಹಿಂದೂ ಸಂಸ್ಕೃತಿ ಹಾಗೂ ಗುರು ಪರಂಪರೆಯನ್ನು ನಮ್ಮ ಮಕ್ಕಳಿಗೆ ಪರಿಚಯಿಸಬೇಕು. ಪಾರಂಪರಿಕ ಹೆಗ್ಗಳಿಕೆಯನ್ನು ತಿಳಿಸುವ ಹೊಣೆ ಹಿರಿಯರ ಮೇಲಿದೆ. ಇದರಿಂದ ಸಮಾಜವನ್ನು ಗಟ್ಟಿಗೊಳಿಸಬಹುದು ಎಂದು ಹೇಳಿದರು.

ಶ್ರೀ ವಾಸವಿ ಸೇವಾ ಸಂಘದ ಅಧ್ಯಕ್ಷ ಕೆ.ಎಸ್. ರುದ್ರಶ್ರೇಷ್ಠಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ವಾಸವಿ ಸೇವಾ ಸಂಘದ ಮಾಜಿ ಅಧ್ಯಕ್ಷರಾದ ವೈ. ತಿಪ್ಪೇಸ್ವಾಮಿ ಶ್ರೇಷ್ಠಿ, ವೈ. ಅನಂತ ಶ್ರೇಷ್ಠಿ, ಮಾಜಿ ಖಜಾಂಚಿ ಬಿ.ಹೆಚ್. ಕೃಷ್ಣಮೂರ್ತಿ ಶ್ರೇಷ್ಠಿ, ಸಂಘದ ಗೌರವಾಧ್ಯಕ್ಷ ಹೆಚ್. ಪ್ರಹ್ಲಾದಶ್ರೇಷ್ಠಿ, ನಿವೃತ್ತ ಕೃಷಿ ಅಧಿಕಾರಿ ಎಸ್. ನಾಗರಾಜ್ ಶ್ರೇಷ್ಠಿ, ಮುಖಂಡರಾದ ಯುಟಿಐ ಮಂಜುನಾಥ, ಹೆಚ್.ವಿ. ರಮೇಶ್, ಎಸ್.ಆರ್. ಮಂಜುನಾಥ, ಬಿ.ಹೆಚ್. ಭಾಸ್ಕರ ಶ್ರೇಷ್ಠಿ, ಮೀನಾಕ್ಷಮ್ಮ ಶ್ರೀಧರ ಶ್ರೇಷ್ಠಿ, ಲಕ್ಷ್ಮಿದೇವಮ್ಮ ರಾಘವೇಂದ್ರ ಶ್ರೇಷ್ಠಿ ಮತ್ತಿತರರು ಉಪಸ್ಥಿತರಿದ್ದರು.

# ಹಬ್ಬಕ್ಕೆ ಬ್ಯಾನರ್, ಬಂಟಿಂಗ್ಸ್ ಕಟ್ಟಲು ಅನುಮತಿ ಕಡ್ಡಾಯ : ಜಿಲ್ಲಾಧಿಕಾರಿ ಆದೇಶ

ರಾಣೇಬೆನ್ನೂರು,ಆ.29- ಸೆಪ್ಟೆಂಬರ್ 7ರಂದು ಪ್ರತಿಷ್ಠಾಪನೆಯೊಂದಿಗೆ ಪ್ರಾರಂಭವಾಗುವ ಗಣಪತಿ ಹಬ್ಬ ಹಾಗೂ ಸೆಪ್ಟೆಂಬರ್ 16 ರಂದು ಆಚರಿಸುವ ಈದ್ ಮಿಲಾದ್ ಹಬ್ಬಗಳು ಸುಗಮವಾಗಿ ನಡೆ ಯಲು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಹಾವೇರಿ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ.

ಹಬ್ಬ ಆಚರಣೆಗೆ ಬ್ಯಾನರ್, ಬಂಟಿಂಗ್ಸ್ ಮತ್ತು ಫ್ಲೆಕ್ಸ್ ಕಟ್ಟುವವರು ಪೊಲೀಸ್ ಇಲಾಖೆಯಿಂದ ನಿರಾಪೇಕ್ಷಣಾ ಪತ್ರ ಪಡೆದು ತಮಗೆ ಸಂಬಂಧಿಸಿದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿಗಳಿಂದ ಅನುಮತಿ ಪಡೆಯಬೇಕು. ಅನ್ಯ ಧರ್ಮದವರ ಭಾವನೆಗಳಿಗೆ ದಕ್ಕೆಯಾಗುವ ಯಾವುದೇ ವಿಷಯಗಳು ಅವುಗಳಲ್ಲಿರಬಾರದು.

ಹೆಚ್ಚಿನ ಶಬ್ಧದ ಧ್ವನಿವರ್ಧಕ ಬಳಸಲು ಅನುಮತಿ ಪಡೆದಿರಬೇಕು. ಕೋಮು ಭಾವನೆ ಕೆರಳುವಂತಹ ಹಾಡು, ಸಂಭಾಷಣೆ, ಬಾಷಣ ಮುಂತಾದವುಗಳನ್ನು ಧ್ವನಿವರ್ಧಕದಲ್ಲಿ ಹಾಕುವಂತಿಲ್ಲ. ಬೆಳಿಗ್ಗೆ 6 ರಿಂದ ರಾತ್ರಿ 10 ಗಂಟೆವರೆಗೆ ಮಾತ್ರ ಧ್ವನಿವರ್ಧಕ ಬಳಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ನಗರದಲ್ಲಿ ಅಪರಿಚಿತ ಯುವಕನ ಶವ ಪತ್ತೆ

ದಾವಣಗೆರೆ, ಆ.29- ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಸುಮಾರು 30-35 ವರ್ಷ ವಯಸ್ಸಿನ ಅಪರಿಚಿತ ಯುವಕನ ಶವ ಮೊನ್ನೆ ಪತ್ತೆಯಾಗಿದೆ. ಸಂಬಂಧಪಟ್ಟವರು ಬಡಾವಣೆ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದು. ಮೃತನು ಗೋಧಿ ಮೈಬಣ್ಣ, ದುಂಡು ಮುಖ ಚಹರೆ ಹೊಂದಿದ್ದು, ಸಾಧಾರಣ ಕಪ್ಪು ತಲೆಕೂದಲು, ಗಡ್ಡ ಇರುತ್ತದೆ. ಬಲಗೈ ಹೆಬ್ಬೆರಳು ಗಾಯವಾಗಿದ್ದು, ಬಲಗೈ ಮುಂಗೈ ಹೊರಭಾಗದಲ್ಲಿ ಹಾರ್ಟ್ ಸಿಂಬಲ್ ಚಿಹ್ನೆ, ಒಳಭಾಗದಲ್ಲಿ ಲಕ್ಷ್ಮಿ, ಅಮ್ಮ ಅಂತ ಹಚ್ಚೆ ಇರುತ್ತದೆ. ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಓಂ ಸಿಂಬಲ್ ಹಚ್ಚೆ ಇರುತ್ತದೆ. ಎಡಗೈ ಮುಂಗೈ ಮೇಲೆ KM ಹಚ್ಚೆ ಇರುತ್ತದೆ. ಎಡಗೈ ಮುಂಗೈನಲ್ಲಿ ಆಸ್ಪತ್ರೆಯ ಕ್ಯಾನಲ್ ಇರುತ್ತದೆ. ಹಸಿರು ಬಣ್ಣದ ತುಂಬು ತೋಳಿನ ಶರ್ಟ್, ಗ್ರೇ ಕಲರ್ ಸ್ಪೋರ್ಟ್ಸ್ ಪ್ಯಾಂಟ್, ಬ್ಲೂ ಕಲರ್ ನಿಕ್ಕರ್ ಧರಿಸಿರುತ್ತಾನೆ.

|| ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆಯ ಆನೆಕೊಂಡ ಪೇಟೆ
ಶಿವಶಂಕರಪ್ಪ ಗಲ್ಲಿ ವಾಸಿ
**ದಿ|| ಶ್ರೀ ಮುದೇಗೌಡ್ರ ರುದ್ರಪ್ಪ**
ನಿವೃತ್ತ ರೆವಿನ್ಯೂ ಇನ್ಸ್‌ಪೆಕ್ಟರ್ ಇವರ ಧರ್ಮಪತ್ನಿ


**ಶ್ರೀಮತಿ ಮುದೇಗೌಡ್ರ ಸಿದ್ದಮ್ಮ**

ಇವರು ದಿನಾಂಕ 26.08.2024ನೇ ಸೋಮವಾರ
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ 30.08.2024ನೇ ಶುಕ್ರವಾರ
ಮಧ್ಯಾಹ್ನ 12.30 ಕ್ಕೆ ಶ್ರೀ ಕಾಳಿಕಾಂಬ ವಿಶ್ವಕರ್ಮ
ಕಲ್ಯಾಣ ಮಂಟಪ, ಶ್ರೀ ಕಾಳಿಕಾದೇವಿ ರಸ್ತೆ,
**ದಾವಣಗೆರೆ.** ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಮೃತರ ಪುತ್ರ, ಶ್ರೀ ಮುದೇಗೌಡ್ರ ಬಸವರಾಜಪ್ಪ, ಪುತ್ರಿಯರು, ಅಳಿಯಂದಿರು, ಮುದೇಗೌಡ್ರ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 8310040701**


ವಿ.ಸೂ.: ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಹ|| ಭ|| ಪ. ಗಡ್ಡಾಳೆ ಗೋಪಾಲ್ ರಾವ್ ನಿಧನ



ದಾವಣಗೆರೆ ಸಿಟಿ ಎಂ.ಜಿ. ಬಿಲ್ಡಿಂಗ್ ಹತ್ತಿರ 2ನೇ ಮೇನ್, 2ನೇ ಕ್ರಾಸ್, ಎಸ್.ಪಿ.ಎಸ್. ನಗರ ವಾಸಿ ದಿ. ಗಡ್ಡಾಳೆ ರಾಮಣ್ಣನವರ ನಾಲ್ಕನೇ ಮಗ ಹ|| ಭ|| ಪ. ಗಡ್ಡಾಳೆ ಗೋಪಾಲ್ ರಾವ್ (74) ಇವರು ದಿನಾಂಕ: 29.8.2024ರ ಗುರುವಾರ ಮಧ್ಯಾಹ್ನ 1.30ಕ್ಕೆ ನಿಧನರಾದರು. ನಾಲ್ವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 30.8.2024ರ ಶುಕ್ರವಾರ ಬೆಳಿಗ್ಗೆ 9.30ಕ್ಕೆ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಲಿದೆ.

## ರಾಮಗೊಂಡನಹಳ್ಳಿ ತಾ.ಪಂ. ಮಾಜಿ ಸದಸ್ಯ ಬಿ. ಧರ್ಮಪ್ಪ ನಿಧನ



ದಾವಣಗೆರೆ ತಾಲ್ಲೂಕು ರಾಮಗೊಂಡನಹಳ್ಳಿ ಗ್ರಾಮದ ತಾಲ್ಲೂಕು ಪಂಚಾಯ್ತಿ ಮಾಜಿ ಸದಸ್ಯ ಬಿ. ಧರ್ಮಪ್ಪ ಇವರು ದಿನಾಂಕ 29.8. 2024ರ ಗುರುವಾರ ಮಧ್ಯಾಹ್ನ 1.40ಕ್ಕೆ ನಿಧನರಾದರು. ಧರ್ಮಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.8.2024ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ರಾಮಗೊಂಡನಹಳ್ಳಿಯಲ್ಲಿ ನೆರವೇರಿಸಲಾಗುವುದು.



# ಕೆ.ಎನ್.ಹಳ್ಳಿ ಗ್ರಾ.ಪಂ. ನಿಂದ ಭದ್ರೆಗೆ ಬಾಗಿನ

ಮಲೇಬೆನ್ನೂರು, ಆ.29- ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಕಡಾರನಾಯಕನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಬುಧವಾರ ಗಂಗೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಲಾಯಿತು.

ಗ್ರಾ.ಪಂ ಅಧ್ಯಕ್ಷೆ ಗಿರಿಜಮ್ಮ ಕರಿಯಪ್ಪ, ಉಪಾಧ್ಯಕ್ಷ ಪರಶುರಾಮ್, ಸದಸ್ಯರಾದ ವಿ.ಕುಬೇರಪ್ಪ, ಭರಮಗೌಡ ಪಾಟೀಲ್, ಹುಸೇನ್ ಸಾಬ್, ಜಿ.ಹೆಚ್.ಬಸವನಗೌಡ, ಜಿ.ಲೋಕೇಶ್, ಕಾರ್ಯದರ್ಶಿ ಬಿ.ದಾನಪ್ಪ, ಕಂಪ್ಯೂಟರ್ ಆಪರೇಟರ್ ವಿದ್ಯಾ, ಬಿಲ್ ಕಲೆಕ್ಟರ್ ತಿಪ್ಪೇಶ್, ಮಾರುತಿ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಭಾಗವಹಿಸಿದ್ದರು.

# ಗೂಢಚಾರಿಕೆ : ಎನ್‌ಐಎ ಶೋಧ

(1ನೇ ಪುಟದಿಂದ) ಸಂಬಂಧಿಸಿದ ತಾಣಗಳಲ್ಲಿ ಶೋಧ ನಡೆಸಲಾಗಿದೆ. ಕರ್ನಾಟಕವಷ್ಟೇ ಅಲ್ಲದೇ, ಗುಜರಾತ್, ಕೇರಳ, ತೆಲಂಗಾಣ, ಉತ್ತರ ಪ್ರದೇಶ, ಬಿಹಾರ ಹಾಗೂ ಹರಿಯಾಣಗಳ 16 ತಾಣಗಳಲ್ಲಿ ಶೋಧ ನಡೆಸಲಾಗಿದೆ.

ಈ ವೇಳೆ 22 ಮೊಬೈಲ್ ಫೋನ್ ಹಾಗೂ ಹಲವಾರು ಸೂಕ್ಷ್ಮ ದಾಖಲೆಗಳನ್ನು ವಶಪಡಿಸಿಕೊಳ್ಳ ಲಾಗಿದೆ. ಭಾರತ ವಿರೋಧಿ ಸಂಚಿನ ಭಾಗವಾಗಿ ಭಾರತೀಯ ನೌಕಾ ದಳದ ಮಾಹಿತಿಯನ್ನು ಸೋರಿಕೆ ಮಾಡ ಲಾಗಿತ್ತು ಎಂದು ಆರೋಪಿಸಲಾಗಿದೆ.

# ಮಲೇಬೆನ್ನೂರಿನಲ್ಲಿಂದು ಕಲೋತ್ಸವ

ಲಯನ್ಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಮಲೇಬೆನ್ನೂರು ಕ್ಲಸ್ಟರ್ ಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಲಾ ಮುಖ್ಯ ಶಿಕ್ಷಕ ಚಂದ್ರಶೇಖರ್ ತಿಳಿಸಿದ್ದಾರೆ.

# ಹರಿಹರ : ವಾಹನ ಡಿಕ್ಕಿ - ಹಸು ಸಾವು



ಹರಿಹರ, ಅ, 29 - ನಗರದ ಹಳೆ ಪಿ.ಬಿ. ರಸ್ತೆ ಜಯಶ್ರೀ ಟಾಕೀಸ್ ಎದುರು ಬಿಡಾಡಿ ಹಸುವಿಗೆ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಬಿಡಾಡಿ ಹಸು ಸ್ಥಳದಲ್ಲೇ ಸಾವಿಗೀಡಾಗಿದೆ. ಹಸು ರಸ್ತೆ ದಾಟುವಾಗ ವೇಗವಾಗಿ ಚಲಿಸುತ್ತಿದ್ದ ವಾಹನ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ನಡೆದಿದೆ. ಸ್ಥಳಕ್ಕೆ ಪೊಲೀಸ್ ಮತ್ತು ನಗರಸಭೆ ಅಧಿಕಾರಿಗಳು ಭೇಟಿ ನೀಡಿದ್ದರು.

# ಅಪ್ರಾಪ್ತ ಬಾಲಕಿ ಅಪಹರಣ : ಬಂಧನ

**ನ್ಯಾಮತಿ**

ನ್ಯಾಮತಿ, ಆ.29- ತಾಲ್ಲೂಕಿನ ಅಪ್ರಾಪ್ತ ಬಾಲಕಿಯ ಅಪಹರಣದ ಹಿನ್ನೆಲೆಯಲ್ಲಿ ಕುಟುಂಬಸ್ಥರು ನೀಡಿದ ದೂರಿನನ್ವಯ ಪವನ ಎಂಬ ಯುವಕನನ್ನು ನ್ಯಾಮತಿ ಪೊಲೀಸರು ಗುರುವಾರ ಬಂಧಿಸಿ, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿರುವ ಬಗ್ಗೆ ವರದಿಯಾಗಿದೆ.

ಒಂದೇ ಗ್ರಾಮದ ಇಬ್ಬರು ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದರು ಎನ್ನಲಾಗಿದ್ದು, 9ನೇ ತರಗತಿ ಓದುತ್ತಿದ್ದ ಯುವತಿಯನ್ನು ಅದೇ ಗ್ರಾಮದ ಕೃಷಿ ಕೆಲಸ ಮಾಡುತ್ತಿದ್ದ 23 ವರ್ಷದ ಯುವಕ ಪ್ರೀತಿಸುತ್ತಿದ್ದ ಎನ್ನಲಾಗಿದ್ದು, ಗ್ರಾಮದಿಂದ ಬೇರೆಡೆಗೆ ಕರೆದೊಯ್ಯಲಾಗಿದ್ದು, ಬಾಲಕಿ ಕಾಣೆಯಾದ ಹಿನ್ನೆಲೆಯಲ್ಲಿ ಯುವತಿ ಕುಟುಂಬಸ್ಥರು ನ್ಯಾಮತಿ ಠಾಣೆಯಲ್ಲಿ ದೂರು ನೀಡಿದ್ದರು.

ಭದ್ರಾವತಿಯಲ್ಲಿದ್ದ ಆರೋಪಿಯನ್ನು ಬಂಧಿಸಿರುವ ಪೊಲೀಸರು, ಗುರುವಾರ ನ್ಯಾಮತಿಗೆ ಕರೆತಂದಿದ್ದಾರೆ. ಕಾಣೆಯಾಗಲು ಸಹಕಾರ ನೀಡಿದ ಯುವಕನ ಇತರೆ ಮೂವರು ಸ್ನೇಹಿತರು ಕಾಣೆಯಾಗಿದ್ದಾರೆ. ಅವರನ್ನು ಬಂಧಿಸಲು ಕಾರ್ಯಾಚರಣೆ ನಡೆಸಲಾಗಿದೆ. ಇಂದು ಸ್ಥಳ ಮಹಜರು ನಡೆಸಲಾಗಿದೆ ಎಂದು ನ್ಯಾಮತಿ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದ ಚನ್ನಗಿರಿ ಡಿವೈಎಸ್ಪಿ ರುದ್ರಪ್ಪ ಉಜ್ಜನಕೊಪ್ಪ ತಿಳಿಸಿದ್ದಾರೆ.

# ಕವಿತಾಗೆ ಜಾಮೀನು, ತೆಲಂಗಾಣ ಸಿಎಂ ಹೇಳಿಕೆಗೆ ಸುಪ್ರೀಂ ತರಾಟೆ

ನವದೆಹಲಿ, ಆ. 28 - ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರಿಗೆ ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಜಾಮೀನು ನೀಡಿದ್ದಕ್ಕೆ ಸಂಬಂಧಿಸಿದಂತೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ನೀಡಿದ ಹೇಳಿಕೆಗಳಿಗೆ ಸುಪ್ರೀಂ ಕೋರ್ಟ್ ಆಕ್ಷೇಪಿಸಿದೆ.

ಕವಿತಾ ಅವರಿಗೆ ಜಾಮೀನು ನೀಡುವ ವಿಷಯದಲ್ಲಿ ಬಿಜೆಪಿ ಹಾಗೂ ಬಿಆರ್‌ಎಸ್ ಪಕ್ಷಗಳ ನಡುವೆ ಒಪ್ಪಂದವಾಗಿದೆ ಎಂದು ರೆಡ್ಡಿ ಇಂಗಿತ ವ್ಯಕ್ತಪಡಿಸಿದ್ದರು. ಇಂತಹ ಹೇಳಿಕೆಗಳಿಂದ ಜನರ ಮನಸ್ಸಿನಲ್ಲಿ ಆತಂಕಗಳು ಮೂಡುತ್ತವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ರಾಜಕೀಯ ವೈರತ್ವಕ್ಕಾಗಿ ನ್ಯಾಯಾಲಯಗಳನ್ನು ಏಕೆ ಎಳೆದು ತರಬೇಕು? ನಾವು ರಾಜಕೀಯ ಪಕ್ಷಗಳ ಜೊತೆ ಚರ್ಚಿಸಿ ಆದೇಶ ಹೊರಡಿಸುತ್ತೇವೆಯೇ? ಎಂದು ರೆಡ್ಡಿ ಪರವಾಗಿ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹತಗಿ ಅವರಿಗೆ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ನೇತೃತ್ವದ ಮೂವರು ಸದಸ್ಯರ ಪೀಠ ಪ್ರಶ್ನಿಸಿದೆ.

ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಪಿ.ಕೆ. ಮಿಶ್ರ ಹಾಗೂ ಕೆ.ವಿ. ವಿಶ್ವನಾಥನ್ ಅವರಿದ್ದಾರೆ.

ರಾಜಕಾರಣಿಗಳೇ ಆಗಲಿ ಅಥವಾ ಬೇರೆ ಯಾರೇ ಆಗಲಿ ನಮ್ಮ ಆದೇಶಗಳನ್ನು



ಟೀಕಿಸಿದರೆ ಚಿಂತಿಸುವುದಿಲ್ಲ. ನಮ್ಮ ಅಂತರಾಳ ಹಾಗೂ ಪ್ರಮಾಣ ವಚನಕ್ಕೆ ಅನುಗುಣವಾಗಿ ಕರ್ತವ್ಯ ನಿರ್ವಹಿಸುತ್ತೇವೆ ಎಂದು ಪೀಠ ತಿಳಿಸಿತು.

ಆದರೆ, ಮುಖ್ಯಮಂತ್ರಿಯಾಗಿ ಈ ರೀತಿಯ ಬೇಜವಾಬ್ದಾರಿ ಹೇಳಿಕೆ ನೀಡಲಾಗಿದೆ. ಮುಖ್ಯಮಂತ್ರಿಯಾದವರು ಇಂತಹ ಹೇಳಿಕೆ ನೀಡಬಹುದೇ? ಸಂವಿಧಾನಿಕ ಹುದ್ದೆಯಲ್ಲಿರುವವರು ಈ ರೀತಿ ಮಾತನಾಡಬಹುದೇ? ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿತು.

2018ರಲ್ಲಿ ಮುಖ್ಯಮಂತ್ರಿ ರೆಡ್ಡಿ ವಿರುದ್ಧ ಹಣಕ್ಕಾಗಿ ಮತ ಹಗರಣದ ಪ್ರಕರಣ ದಾಖಲಿಸಲಾಗಿದೆ. ಇದರ ವಿಚಾರಣೆಯನ್ನು ತೆಲಂಗಾಣದಿಂದ ಭೂಪಾಲಕ್ಕೆ ವರ್ಗಾಯಿಸುವ ಕುರಿತ ಅರ್ಜಿಯ ವಿಚಾರಣೆ ನಡೆಸುವಾಗ ಸುಪ್ರೀಂ ಕೋರ್ಟ್ ಈ ಟಿಪ್ಪಣಿ ಮಾಡಿದೆ.

ಮಂಗಳವಾರ ಮಾಧ್ಯಮಗಳ ಜೊತೆ ಮಾತನಾಡಿದ್ದ ಮುಖ್ಯಮಂತ್ರಿ ರೆಡ್ಡಿ, ದೆಹಲಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯ ಅವರು ಜಾಮೀನು ಪಡೆಯಲು 15 ತಿಂಗಳು ಬೇಕಾಯಿತು. ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಇನ್ನೂ ಜಾಮೀನು ದೊರೆತಿಲ್ಲ. ಹೀಗಾಗಿ ಶಾಸಕಿ ಕವಿತಾ ಅವರಿಗೆ ಐದು ತಿಂಗಳಲ್ಲೇ ಜಾಮೀನು ನೀಡಿರುವುದು ಅನುಮಾನ ಮೂಡಿಸಿದೆ ಎಂದಿದ್ದರು.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗಾಗಿ ಬಿಆರ್‌ಎಸ್ ಶ್ರಮಿಸಿತ್ತು.

ಬಿಆರ್‌ಎಸ್ ಹಾಗೂ ಬಿಜೆಪಿ ನಡುವಿನ ಒಪ್ಪಂದದ ಕಾರಣದಿಂದಾಗಿ ಕವಿತಾರಿಗೆ ಜಾಮೀನು ದೊರೆತಿದೆ ಎಂಬ ಮಾತು ಕೇಳಿ ಬಂದಿದೆ ಎಂದು ರೆಡ್ಡಿ ಆರೋಪಿಸಿದ್ದರು.

## ಭಾರತ ವಿಶ್ವದಲ್ಲೇ ದೊಡ್ಡ ಡಾಟಾ ಮಾರುಕಟ್ಟೆ : ಅಂಬಾನಿ



ನವದೆಹಲಿ, ಆ. 30 - ಭಾರತ ಈಗ ವಿಶ್ವದಲ್ಲೇ ಅತಿ ದೊಡ್ಡ ಡಾಟಾ ಮಾರುಕಟ್ಟೆಯಾಗಿದೆ. ಜಿಯೋ ಜಾಗತಿಕ ಮೊಬೈಲ್ ಡಾಟಾ ಕಂಪನಿಯಾಗಿದ್ದು, 490 ದಶಲಕ್ಷ ಗ್ರಾಹಕರನ್ನು ಹೊಂದಿದೆ. ಗ್ರಾಹಕರು ಪ್ರತಿ ತಿಂಗಳು ಸರಾಸರಿ 30 ಜಿ.ಬಿ. ಡಾಟಾ ಬಳಸುತ್ತಿದ್ದಾರೆ ಎಂದು ರಿಲೈಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ ತಿಳಿಸಿದ್ದಾರೆ.

ರಿಲೈಯನ್ಸ್ 47ನೇ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅಂಬಾನಿ, ವಿಶ್ವದ ಶೇ.8ರಷ್ಟು ಡಾಟಾ ಬಳಕೆಯನ್ನು ಜಿಯೋ ನಿರ್ವಹಿಸುತ್ತಿದೆ ಎಂದು ಹೇಳಿದ್ದಾರೆ.

5ಜಿ ಹಾಗೂ 6ಜಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಜಿಯೋ 350 ಪೇಟೆಂಟ್ ಹೊಂದಿದೆ ಎಂದು ಅಂಬಾನಿ ಹೇಳಿದರು.

# ಮಕ್ಕಳ ಪ್ರತಿಭೆ ಗುರುತಿಸುವ ಶಿಕ್ಷಕರಲ್ಲೂ ಪ್ರತಿಭೆ ಇರಬೇಕು

**ಮಲೇಬೆನ್ನೂರು : ಪ್ರತಿಭಾ ಕಾರಂಜಿ ಉದ್ಘಾಟನೆಯಲ್ಲಿ ಸಿಪಿಓ ತೀರ್ಥಪ್ಪ ಕಿವಿಮಾತು**

ಮಲೇಬೆನ್ನೂರು, ಆ.29- ಪಟ್ಟಣದ ಭಾನು ಹೈಟೆಕ್ ಶಾಲೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮಲೇಬೆನ್ನೂರು ಕ್ಲಸ್ಟರ್ ಮಟ್ಟದ ಪ್ರೌಢಶಾಲೆಗಳ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮವನ್ನು ಶಿಕ್ಷಣ ಸಂಯೋಜಕ ತೀರ್ಥಪ್ಪ ದೀಪ ಬೆಳಗಿಸಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮಕ್ಕಳ ಪ್ರತಿಭೆ ಗುರುತಿಸಲು ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆ ಜಾರಿಗೊಳಿಸಿದ್ದು, ಮಕ್ಕಳ ಪ್ರತಿಭೆ ಗುರುತಿಸುವ ಶಿಕ್ಷಕರಲ್ಲೂ ಪ್ರತಿಭೆ ಇರಬೇಕೆಂದರು. ಯಾವ ಮಕ್ಕಳ ಪ್ರತಿಭೆಗೂ ದಕ್ಕೆ ಆಗದಂತೆ ತೀರ್ಪುಗಾರರು ನೋಡಿಕೊಳ್ಳಬೇಕೆಂದು ಸಿಇಓ ತೀರ್ಥಪ್ಪ ಕಿವಿಮಾತು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಆರ್‌ಪಿ ಕರಿಬಸಪ್ಪ ಬಸಲಿ ಅವರು, ಪ್ರತಿಭಾ ಕಾರಂಜಿ



ಮಕ್ಕಳ ಪ್ರತಿಭೆ ಹೊರ ಹಾಕುವ ಸೂಕ್ತ ವೇದಿಕೆಯಾಗಿದ್ದು, ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಲು ಶಿಕ್ಷಕರು, ಪೋಷಕರು ಪ್ರೋತ್ಸಾಹಿಸಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷ ವಹಿಸಿದ್ದ ನೀ.ವೀ.ವಿದ್ಯಾಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಪಿ.ವಿ.ಮಾಲತೇಶ್ ಮಾತನಾಡಿ, ಮಕ್ಕಳ ಪ್ರತಿಭೆ ಗುರುತಿಸುವುದರ ಜೊತೆಗೆ ಸದಾ ಪ್ರೋತ್ಸಾಹ ನೀಡುವ ಕೆಲಸ ಆಗಬೇಕೆಂದರು.

ತಾಲ್ಲೂಕು ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಟಿ. ಮಂಜಪ್ಪ, ತಾ. ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷೆ ಸಾಕಮ್ಮ, ನಿರ್ದೇಶಕ ಬಿ.ಹೆಚ್. ಶಿವಕುಮಾರ್, ಶಿಕ್ಷಕರ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಶಶಿಕುಮಾರ್, ಹೆಚ್.ಗೋವಿಂದಪ್ಪ, ಅನುದಾನಿತ ಶಾಲಾ ಶಿಕ್ಷಕರ ಒಕ್ಕೂಟದ ಅಧ್ಯಕ್ಷ ಕೆ.ಭೀಮಪ್ಪ, ಎಸ್‌ಬಿಕೆಎಂ ಶಾಲೆಯ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ, ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರಾದ ಸುರೇಶ್ ಮೂಲಿಮನಿ, ರಾಮಪ್ಪ ಸೋಮಣ್ಣನವರ್, ನೀ.ವೀ. ವಿದ್ಯಾಸಂಸ್ಥೆಯ ಚೈತ್ರಾ ಮಾಲತೇಶ್, ಜ್ಯೋತಿ ಭಾನುಪ್ರಕಾಶ್ ಮತ್ತಿತರರು ಭಾಗವಹಿಸಿದ್ದರು.

ಭಾನು ಹೈ-ಟೆಕ್ ಶಾಲೆಯ ಪಕ್ಕೀರಪ್ಪ ಸ್ವಾಗತಿಸಿದರು. ಶಿಕ್ಷಕ ಶ್ರೀ ಹರಿ ನಿರೂಪಿಸಿದರು. ಶಿಕ್ಷಕ ಸಾಗರ್ ವಂದಿಸಿದರು.

ತೀರ್ಪುಗಾರರಾಗಿ ಸಲ್ಮಾ ಭಾನು, ರೇಣುಕಾ, ಅಕ್ಬರ್ ಕಾರ್ಯ ನಿರ್ವಹಿಸಿದರು.

# ಬೆಂಗಳೂರು ಅಭಿವೃದ್ಧಿಗೆ ಅರ್ಧದಷ್ಟು ಅನುದಾನ

**ಕಲ್ಯಾಣ ಕರ್ನಾಟಕ, ಪಶ್ಚಿಮ ಘಟ್ಟಗಳಿಗೆ ಹೆಚ್ಚಿನ ಅನುದಾನ ಕೋರಿಕೆ : ಸಿಎಂ**

ಬೆಂಗಳೂರು ಆ. 29 - ರಾಜ್ಯಕ್ಕೆ ಕಳೆದ ಐದು ವರ್ಷಗಳಿಂದ ವಿಶೇಷ ಅನುದಾನ ಹಾಗೂ ತೆರಿಗೆ ಹಂಚಿಕೆಯಲ್ಲಿ 80,000 ಕೋಟಿ ರೂ. ಅನುದಾನ ಕಡಿಮೆಯಾಗಿದೆ, ಇದನ್ನು ಸರಿಪಡಿಸಬೇಕೆಂದು 16ನೇ ಹಣಕಾಸು ಆಯೋಗವನ್ನು ಕೋರಲಾಗಿದ್ದು, ಆಯೋಗವು ಸಕಾರಾತ್ಮಕವಾಗಿ ಸ್ಪಂದಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿವಿಸಿಬಲ್ ಪೂಲ್‌ಗೆ ಸೆಸ್ ಮತ್ತು ಸರ್‌ಚಾರ್ಜ್ ಅನ್ನು ಸೇರಿಸಬೇಕೆಂದು ಹಾಗೂ ಭಾರತ ಸರ್ಕಾರಕ್ಕೆ ಬರುವ ತೆರಿಗೆಯೇತರ ಆದಾಯವನ್ನೂ ಸಹ ಡಿವಿಸಿಬಲ್ ಪೂಲ್‌ಗೆ ಸೇರಿಸಬೇಕೆಂದು ಕೋರಲಾಗಿದೆ ಎಂದರು.

ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ರಾಜ್ಯ ಸರ್ಕಾರ ಪ್ರತಿ ವರ್ಷ 5000 ಕೋಟಿ ರೂ.ಗಳಂತೆ ಐದು ವರ್ಷಕ್ಕೆ 25,000 ಕೋಟಿ ರೂ. ಖರ್ಚು ಮಾಡುತ್ತಿದೆ. ಕೇಂದ್ರ ಸರ್ಕಾರವೂ ಇದಕ್ಕೆ ಅನುರೂಪದ ಅನುದಾನ ನೀಡಬೇಕೆಂದು ಕೋರಲಾಗಿದೆ. ಬೆಂಗಳೂರು ಅಭಿವೃದ್ಧಿಗೆ ಸುಮಾರು 55,000 ಕೋಟಿ ರೂ. ವೆಚ್ಚವಾಗಲಿದ್ದು, ಈ ಮೊತ್ತದ ಅರ್ಧದಷ್ಟಾದರೂ ಅನುದಾನ ನೀಡಬೇಕೆಂದು ಕೋರಲಾಗಿದೆ.

ಪಶ್ಚಿಮಘಟ್ಟ ವಿಪತ್ತು ನಿರ್ವಹಣೆಗೆ ಹೆಚ್ಚಿನ ಅನುದಾನ ನೀಡಲು ಕೋರಲಾಯಿತು. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಗಳಿಗೆ ದಂಡ ವಿಧಿಸಬಾರದು. ದೇಶದ ಜಿಡಿಪಿಗೆ ನಮ್ಮ ರಾಜ್ಯದಿಂದ ಶೇ.9 ರಷ್ಟು ಕೊಡುಗೆ ನೀಡುತ್ತಿದ್ದು, ಅದರಲ್ಲಿ ಕೇವಲ ಶೇ. 1.5 ರಷ್ಟು ಮಾತ್ರ ನಮ್ಮ ರಾಜ್ಯದ ಪಾಲಿಗೆ ಬರುತ್ತಿದೆ. ಇದನ್ನು ಸರಿಪಡಿಸಲು ಕೋರಲಾಗಿದೆ.

14 ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಶೇ.4.713 ಪ್ರಮಾಣದ ತೆರಿಗೆ ಹಂಚಿಕೆಯಾಗುತ್ತಿತ್ತು. ಆದರೆ 15ನೇ ಹಣಕಾಸು ಆಯೋಗದಲ್ಲಿ ಈ ಪ್ರಮಾಣ ಶೇ. 3.647 ಕ್ಕೆ ಇಳಿದಿದ್ದು, ಈ ಪ್ರಮಾಣವನ್ನೂ ಸರಿಪಡಿಸಬೇಕೆಂದು ಕೋರಲಾಗಿದೆ. ತೆರಿಗೆ ಪ್ರಮಾಣದಲ್ಲಿ ಶೇ.1.66 ಕಡಿಮೆಯಾಗಿರುವ ಬಗ್ಗೆ ಆಯೋಗಕ್ಕೆ ವಿವರಣೆ ನೀಡಲಾಗಿದೆ ಎಂದರು. ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ನರೇಂದ್ರ ಮೋದಿಯವರು ತೆರಿಗೆ ಹಂಚಿಕೆ ಯಲ್ಲಿ ಶೇ. 50 ರಷ್ಟು ಪಾಲಿಗೆ ಬೇಡಿಕೆಯಿಟ್ಟಿದ್ದರು. ಅನೇಕ ರಾಜ್ಯಗಳು ಈ ರೀತಿ ಬೇಡಿಕೆ ಸಲ್ಲಿಸಿರುವುದರಿಂದ ಕರ್ನಾಟಕದ ಬೇಡಿಕೆಯನ್ನು ಈಡೇರಿಸಬಹುದೆಂಬ ವಿಶ್ವಾಸವಿದೆ ಎಂದರು.

## ಶ್ರೀಕೃಷ್ಣ, ರಾಧೆಯ ವೇಷಭೂಷಣ ಸ್ಪರ್ಧೆ

ದಾವಣಗೆರೆ, ಆ. 29 - ಜ್ಞಾನ ಸೌರಭ ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್‌ನ ಎಸ್‌ಜೆಎಂ ಪಬ್ಲಿಕ್ ಸ್ಕೂಲ್ ಇವರ ಮತ್ತು ಲಯನ್ಸ್ ಕ್ಲಬ್ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ನಗರ ಮಟ್ಟದ ಚಿಣ್ಣರ ಶ್ರೀಕೃಷ್ಣ ಮತ್ತು ರಾಧೆಯ ವೇಷಭೂಷಣ ಸ್ಪರ್ಧೆಯನ್ನು ನಾಡಿದ್ದು ದಿನಾಂಕ 31ರಂದು ಬೆಳಿಗ್ಗೆ 10.30ಕ್ಕೆ ನಗರದ ಲಯನ್ಸ್ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಡಿ. ಮಹೇಶ್ವರಪ್ಪ ತಿಳಿಸಿದ್ದಾರೆ.


## ನಗರದಿಂದ ಶಿವಮೊಗ್ಗ, ಮಣಿಪಾಲ್‌ಗೆ ಹೆಚ್ಚುವರಿ ಬಸ್‌ಗಳಿಗೆ ಮನವಿ



ದಾವಣಗೆರೆ, ಆ. 29- ಇಲ್ಲಿನ ಕಿತ್ತೂರು ರಾಣಿ ಚನ್ನಮ್ಮ ಪ್ರತಿಷ್ಠಾನದ ಅಧ್ಯಕ್ಷ ಹೆಚ್. ಜಯಣ್ಣ ಅವರ ಅಧ್ಯಕ್ಷತೆಯಲ್ಲಿ ದಾವಣಗೆರೆಯಿಂದ ಶಿವಮೊಗ್ಗಕ್ಕೆ ಸಂಚರಿಸಲು ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಕೊರತೆ ಹಾಗೂ ದಾವಣಗೆರೆಯಿಂದ ಶಿವಮೊಗ್ಗ, ಮಣಿಪಾಲ್‌ಗೆ ಹೆಚ್ಚುವರಿ ಬಸ್ ಬಿಡಬೇಕೆಂದು ಒತ್ತಾಯಿಸಿ ಸಚಿವ ಎಸ್. ಮಲ್ಲಿಕಾರ್ಜುನ್ ಹಾಗೂ ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ನಿಯಂತ್ರಣಾಧಿಕಾರಿ ಫಕೃದ್ದೀನ್ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಕಾಯಿಪೇಟೆ ಹಾಲೇಶ್, ನಿರ್ದೇಶಕರಾದ ಅಕ್ಕಿ ರಾಮಚಂದ್ರ, ಪ್ರಶಾಂತ ಶೆಟ್ರು ಅಣಜಿ, ಚರಂತಿಮಠ, ಬಸವಕುಮಾರ್ ಪೂಜಾರ್, ಬಿ.ವಿ. ರಾಜಶೇಖರ್, ಡಾ. ಗಂಗಾಧರ್, ಮಲ್ಲಿಕಾರ್ಜುನ್ ಕಟ್ಟಿಮನಿ, ವಿ. ಶಿವಮೂರ್ತಿ ಸ್ವಾಮಿ, ಡೋಲಿ ಚಂದ್ರು ಉಪಸ್ಥಿತರಿದ್ದರು.

## ಡಾ. ಎಸ್‌ಎಸ್‌ಎನ್‌ಪಿಎಸ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ



ದಾವಣಗೆರೆ, ಆ. 29- ಡಾ. ಎಸ್. ಎಸ್. ಎನ್. ಪಿ. ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ವಿಶೇಷವಾದ ಸಭೆ ಆಯೋಜಿಸಲಾಗಿತ್ತು.

ಶಾಲೆಯ ನಾಲ್ಕು ತಂಡದವರಿಂದ (ವಿಶ್ವಾಮಿತ್ರ, ಕಶ್ಯಪ, ಗೌತಮ, ವಸಿಷ್ಟ) ಶ್ರೀ ಕೃಷ್ಣ ಜನ್ಮಾಷ್ಟಮಿಯ ಅಲಂಕಾರ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಜೊತೆಗೆ ನಾಲ್ಕು ತಂಡದವರಿಂದ ಪಿರಮಿಡ್ ರಚಿಸಿ ಮಡಿಕೆ ಒಡೆಯುವ ಕಾರ್ಯಕ್ರಮ ಜರುಗಿತು. ಇದರಲ್ಲಿ ಗೌತಮ ತಂಡವು ಜಯ ಗಳಿಸಿತು. ಸಭೆಯ ಉಸ್ತುವಾರಿ ವಹಿಸಿದ್ದ ಪ್ರಾಂಶುಪಾಲರಾದ ಶ್ರೀಮತಿ ಕಮಲ ಬಿ. ನಾರಾಯಣ್ ಅವರು ಭಗವದ್ಗೀತೆಯ ಸಾರಾಂಶವನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಬಾಪೂಜಿ ಸಂಸ್ಥೆಯ ಡೀನ್ ಮಂಜುನಾಥ ರಂಗರಾಜು, ಉಪಪ್ರಾಂಶುಪಾಲ ರಮೇಶ್ ಬಾಬು, ಆಡಳಿತಾಧಿಕಾರಿ ಅಜಯ್ ಎಸ್., ಶಾಲಾ ಸಂಯೋಜಕರಾದ ಶ್ರೀಮತಿ ರುತಿಕಾ ಮತ್ತು ಇತರರು ಉಪಸ್ಥಿತರಿದ್ದರು.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ದಾವಣಗೆರೆ ವಿಭಾಗ: ದಾವಣಗೆರೆ**

ಸಂ: ಕರಾಸಾ:ದಾವಿ:ಸಂ:ವಾ:1497:2024–25 ದಿನಾಂಕ: 29.08.2024

**ಇ–ಟೆಂಡರ್ ಪ್ರಕಟಣೆ ಸಂಖ್ಯೆ: 07/2024–25 (ಕೆಪಿಪಿ ಪೋರ್ಟಲ್ ಮೂಲಕ)**

ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ ನೂತನವಾಗಿ ಪ್ರಾರಂಭಗೊಂಡಿರುವ ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣದಲ್ಲಿರುವ ತಳ ಅಂತಸ್ತು (ಪಾರ್ಕಿಂಗ್ ಸ್ಥಳ), ನೆಲ ಅಂತಸ್ತು, ಮೊದಲ ಅಂತಸ್ತು, ಎರಡನೇ ಅಂತಸ್ತು ಮತ್ತು ಮೂರನೇ ಅಂತಸ್ತು ಒಟ್ಟು ಸೇರಿ ಒಂದೇ ಪರವಾನಿಗೆ ನೀಡುವ ಸಲುವಾಗಿ "As is where is basis" ಆಧಾರದಲ್ಲಿ ಏಕೈಕ ಪರವಾನಿಗೆಗೆ 06 ವರ್ಷದ ಅವಧಿಗೆ (ಪ್ರತಿ ವರ್ಷ ಶೇ. 5ರಷ್ಟು ಪರವಾನಗಿ ಶುಲ್ಕದ ಹೆಚ್ಚಳದೊಂದಿಗೆ) ಪರವಾನಿಗೆ ನೀಡಲು ಕೆಪಿಪಿ ಪೋರ್ಟಲ್ ಮೂಲಕ ಇ-ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18.09.2024ರಂದು ಸಂಜೆ 17.00 ಗಂಟೆಯವರೆಗೆ.** ಸದರಿ ಮಾಹಿತಿಯನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್: ksrtc.karnataka.gov.in ನಿಂದ **ದಿನಾಂಕ: 29.08.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

**ಸದರಿ ಶಾಪಿಂಗ್ ಮಾಲ್ ಏರಿಯಾದ ಒಟ್ಟು ಸ್ಥಳದ ವಿವರ ಕೆಳಕಂಡಂತಿದೆ.**

| ಕ್ರ.ಸಂ. | ಬಸ್ ನಿಲ್ದಾಣದ ಹೆಸರು | ಮಳಿಗೆಯ ವಿವರ | ವಿಸ್ತೀರ್ಣ (ಚ.ಅ) | ಪರವಾನಿಗೆ ಅವಧಿ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ (ಜಿಎಸ್‌ಟಿ ಹಾಗೂ ಇನ್ನಿತರ ಶುಲ್ಕ ಒಳಗೊಂಡಿರುವುದಿಲ್ಲ (ರೂ.ಗಳಲ್ಲಿ) | ಡಿ.ಡಿ. ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) | ಕೆಪಿಪಿ ಪೋರ್ಟಲ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿಎಸ್‌ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 01 | ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣ | ಶಾಪಿಂಗ್ ಮಾಲ್ ಏರಿಯಾ | 151601.30 | 06 ವರ್ಷ | 59,59,000/– | 1,78,76,500/– | 500/– | 3540/– |

*ಮೇಲ್ಕಂಡ ತಳ ಅಂತಸ್ತು (ಬೇಸ್‌ಮೆಂಟ್, ಪಾರ್ಕಿಂಗ್ ಸ್ಥಳ), ವಿಸ್ತೀರ್ಣ 37751.57, ನೆಲ ಅಂತಸ್ತು (ಗ್ರೌಂಡ್ ಫ್ಲೋರ್) ವಿಸ್ತೀರ್ಣ 24197.52, ಮೊದಲ ಅಂತಸ್ತು ವಿಸ್ತೀರ್ಣ 29884.07 ಚ.ಅಡಿ, ಎರಡನೇ ಅಂತಸ್ತು 29884.07 ಚ.ಅಡಿ, ಮತ್ತು ಮೂರನೇ ಅಂತಸ್ತು ವಿಸ್ತೀರ್ಣ 29884.07 ಒಟ್ಟು ವಿಸ್ತೀರ್ಣ 151601.30 ಚ.ಅಡಿ ಶಾಪಿಂಗ್ ಮಾಲ್ ಏರಿಯಾ ವಿಸ್ತೀರ್ಣಕ್ಕೆ (ಸದರಿ ಶಾಪಿಂಗ್ ಮಾಲ್ ಏರಿಯಾ ವಿಸ್ತೀರ್ಣದಲ್ಲಿ 03 ಫಿಲಂ ಥಿಯೇಟರ್‌ಗಳು ಇರುತ್ತವೆ) "As is where is basis" ಆಧಾರದಲ್ಲಿ ಏಕೈಕ ಪರವಾನಿಗೆ ನಿಗದಿಪಡಿಸಲಾಗಿರುತ್ತದೆ. ಸದರಿ ಅಂತಸ್ತುಗಳ ಶುಚಿತ್ವ ನಿರ್ವಹಣೆಯನ್ನು ಒಳಗೊಂಡು ಒಟ್ಟು ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ ನಿಗದಿಪಡಿಸಿದ್ದು, 06 ವರ್ಷದ ಅವಧಿಗೆ ನಿಗದಿಪಡಿಸಲಾಗಿರುತ್ತದೆ.

ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗ ಸಂಚಾರ ಅಧಿಕಾರಿ – 7760990452,
ಸಹಾಯಕ ಸಂಚಾರ ಅಧೀಕ್ಷಕರು – 7022030183

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ: ದಾವಣಗೆರೆ ವಿಭಾಗ

ವಾಸಾಸಂಇ/ವಾ.ಪ್ರ/1713/ಎಂಎಎ/24–25



**ಗ್ರಾಮ ಪಂಚಾಯ್ತಿ ಕಾರ್ಯಾಲಯ - ಕಂದಗಲ್ಲು**
**ತಾಲ್ಲೂಕು ಪಂಚಾಯಿತಿ - ದಾವಣಗೆರೆ, ಜಿಲ್ಲಾ ಪಂಚಾಯ್ತಿ - ದಾವಣಗೆರೆ.**

ಸಂಖ್ಯೆ : ಗ್ರಾ.ಪಂ.ಕ.ಇ.ಟೆ.ಪ್ರ/ /2023-24 ದಿನಾಂಕ :

**ಇ-ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)**

**ಉಲ್ಲೇಖ : ಕಂದಗಲ್ಲು ಗ್ರಾಮ ಪಂಚಾಯಿತಿ ಇ - ಟೆಂಡರ್ ಪ್ರಕಟಣಾ ದಿನಾಂಕ : 28.08.2024 ರಂತೆ.**

2023-24ನೇ ಸಾಲಿನ ದಾವಣಗೆರೆ ತಾಲ್ಲೂಕು ಕಂದಗಲ್ಲು ಗ್ರಾಮ ಪಂಚಾಯಿತಿಗೆ 15ನೇ ಹಣಕಾಸು ಯೋಜನೆ ಮತ್ತು ಎಂ.ಜಿ.ಎನ್.ಆರ್.ಜಿ.ಎ. ಯೋಜನೆಯ ಈ ಕೆಳಕಂಡ ಸಂಖ್ಯೆಯ ಇ-ಟೆಂಡರ್ ಪ್ರಕಟಣೆಯಲ್ಲಿರುವ ಸಾಮಗ್ರಿ ಮತ್ತು ಸೇವೆಗಳನ್ನು ಒದಗಿಸಲು, ಜಿ.ಎಸ್.ಟಿ.ಯಲ್ಲಿ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್‌ಗಾಗಿ ಇ-ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಮತ್ತು ಸೇವಾವಾರು ಟೆಂಡರ್‌ಗಳನ್ನು Standard Tender Documents for E-Procurement ನಮೂನೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಜಿ.ಎಸ್.ಟಿ.ಯಲ್ಲಿ ಅಧಿಕೃತವಾಗಿ ನೋಂದಾಯಿತ ಆಸಕ್ತ ಸಾಮಗ್ರಿ ಸರಬರಾಜುದಾರ ಏಜೆನ್ಸಿಗಳು ಹಾಗೂ ಸೇವಾ ಪೂರೈಕೆದಾರ ಏಜೆನ್ಸಿಗಳು ಇ-ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ, ಒಂದು ರಾಜ್ಯ ಮಟ್ಟದ ಹಾಗೂ ಒಂದು ಸ್ಥಳೀಯ ಜಿಲ್ಲಾ ಮಟ್ಟದ ದಿನಪತ್ರಿಕೆಗಳಲ್ಲಿ ಪ್ರಚುರಪಡಿಸಲು ಈ ಮೂಲಕ ತಮಗೆ ಕೋರಲಾಗಿದೆ.

| ಕ್ರ. ಸಂ. | ವಿವರ/ಕಾಮಗಾರಿ | ಇ-ಟೆಂಡರ್ ಸಂಖ್ಯೆ | ಅಂದಾಜು ಮೊತ್ತ ರೂ.ಗಳಲ್ಲಿ | ಇ.ಎಂ.ಡಿ. ಮೊತ್ತ ರೂ. |
|---|---|---|---|---|
| 01 | ಕಂದಗಲ್ಲು ಮತ್ತು ಗಿಡ್ಡೇನಹಳ್ಳಿ ಗ್ರಾಮಗಳಿಗೆ ಬೀದಿ ದೀಪದ ಸಾಮಗ್ರಿ ಖರೀದಿ (15ನೇ ಹಣಕಾಸು ಯೋಜನೆ) | RDPR/2024-25/SE1413/CAL-2 | 220000/- | 5500/- |
| 02 | ಕಂದಗಲ್ಲು ಗ್ರಾಮದ ಮಿನಿ ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿ (ಎಂ.ಜಿ.ಎನ್.ಆರ್.ಜಿ.ಎ. ಯೋಜನೆ) | RDPR/2024-25/IND4206 | 560000/- | 14000/- |

ಇ.ಎಂ.ಡಿ. ಮೊತ್ತವನ್ನು ಪಿ.ಡಿ.ಓ. ಮತ್ತು ಅಧ್ಯಕ್ಷರು ಗ್ರಾಮ ಪಂಚಾಯಿತಿ ಕಂದಗಲ್ಲು ಇವರ ಪದನಾಮಕ್ಕೆ ಡಿಡಿಯನ್ನು ತೆಗೆಸಬೇಕು. ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಅಸಮಂಜಸ ಅಂಶಗಳು ಕಂಡುಬಂದಲ್ಲಿ ಸದರಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಕರೆದಿರುವ ಪ್ರಾಧಿಕಾರ ಹೊಂದಿರುತ್ತದೆ ಹಾಗೂ ಸದರಿ ಸೇವಾ ಹಾಗೂ ಸಾಮಗ್ರಿ ಪೂರೈಕೆಯು ಒಪ್ಪಂದ ಮಾಡಿಕೊಂಡ ದಿನಾಂಕದಿಂದ ದಿ. : 30.02.2025ರವರೆಗೆ ಜಾರಿಯಲ್ಲಿರುತ್ತದೆ ಹಾಗೂ ನಮೂನೆಯಲ್ಲಿರುವ ಷರತ್ತುಗಳು ಕಡ್ಡಾಯವಾಗಿ ಅನ್ವಯವಾಗುತ್ತವೆ.

ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯಿತಿ, ಕಂದಗಲ್ಲು, ದಾವಣಗೆರೆ ತಾ||



**ದಿ ದಾವಣಗೆರೆ – ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ**

**ಹಣಕಾಸು ಸ್ವತ್ತುಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಕಾಯ್ದೆಯ ಜಾರಿ (ಸರ್‌ಫೇಸಿಯಾ ಕಾಯ್ದೆ 2002) ಅಡಿಯಲ್ಲಿ ಬಹಿರಂಗ ಹರಾಜು ಮೂಲಕ ಬ್ಯಾಂಕ್‌ಗೆ ಅಡವು ಮಾಡಿದ ಸ್ಥಿರ ಆಸ್ತಿಗಳ ಮಾರಾಟ**

ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ ಈ ಕೆಳಕಂಡ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿರುವುದರಿಂದ ಈ ಕೆಳಗೆ ನಮೂದಿಸಿದ ಆಸ್ತಿಯನ್ನು ಸುರಕ್ಷಿತ ಸಾಲಗಾರರಿಗೆ (Secured Creditor) ಅಡವು ಮಾಡಲಾಗಿದೆ ಎಂದು ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರನ ವಾರಸುದಾರರಿಗೆ ಸೂಚನೆಯನ್ನು ನೀಡಲಾಗಿದೆ. ಸೆಕ್ಷನ್ 13(4) ಅಡಿಯಲ್ಲಿ ಸಹಿ ಮಾಡಿದ ಸುರಕ್ಷಿತ ಸಾಲಗಾರರ ಅಧಿಕೃತ ಅಧಿಕಾರಿ (Authorised Officer) ಬಾಕಿಗಳ ವಸೂಲಾತಿಗಾಗಿ ಈ ಕೆಳಗೆ ವಿವರಿಸಿದ ಆಸ್ತಿಯನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ (ಇನ್ನು ಮುಂದೆ ನಿಯಮಗಳೆಂದು ಉಲ್ಲೇಖಿಸಲಾಗಿದೆ) ನಿಯಮ ಸಂಖ್ಯೆ 8 ಮತ್ತು 9 ರ ಅಡಿಯಲ್ಲಿ 'ಎಲ್ಲಿ ಇದೆಯೋ ಹಾಗೆ' ಮತ್ತು 'ಹೇಗೆ ಇದೆಯೋ ಹಾಗೆ' ಮಾರಾಟ ಮಾಡಲಾಗುತ್ತಿದೆ.

**ಬಹಿರಂಗ ಹರಾಜು ಮೂಲಕ ಸ್ಥಿರ ಆಸ್ತಿಗಳ ಮಾರಾಟದ ವಿವರಗಳು**

| | | |
|---|---|---|
| 1 | ಸಾಲಗಾರನ ವಾರಸುದಾರರ ಹೆಸರು ಮತ್ತು ವಿಳಾಸ | 1. ಶ್ರೀಮತಿ ಕಮಲಮ್ಮ 2. ಶ್ರೀ ತಿಪ್ಪೇರುದ್ರಸ್ವಾಮಿ 3. ಶ್ರೀ ರವಿ 4. ಶ್ರೀಮತಿ ಭುವನೇಶ್ವರಿ 5. ಶ್ರೀಮತಿ ಓಂಕಾರೇಶ್ವರಿ ಇವರೆಲ್ಲಾ ಸಾಲಗಾರರಾದ ದಿ|| ಎನ್.ಬಿ. ರುದ್ರಮುನಿಯವರ ವಾರಸುದಾರರುಗಳು. ಇವರುಗಳ ವಾಸ ದೇವರಾಜ್ ಅರಸು ಬಡಾವಣೆ 'ಎ' ಬ್ಲಾಕ್, ದಾವಣಗೆರೆ-577006. |
| 2 | ದಿನಾಂಕ:31-07-2024 ರಂದು ಬಾಕಿ ಇರುವ ಒಟ್ಟು ಮೊತ್ತ | ರೂ.68,99,562=87 + ದಿನಾಂಕ:01-08-2024 ರಿಂದ ಬಡ್ಡಿ + ಇತರೆ ಖರ್ಚು ಇದ್ದಲ್ಲಿ |
| 3 | ಸ್ವಾಧೀನ ಸ್ವರೂಪ | ಅಧಿಕೃತ ಅಧಿಕಾರಿಯ ಸ್ವಾಧೀನದಲ್ಲಿದೆ. |
| 4 | ಬಹಿರಂಗ ಹರಾಜು ನಡೆಯುವ ದಿನಾಂಕ ಮತ್ತು ಸ್ಥಳ | ದಿನಾಂಕ:18-09-2024, ಸಮಯ: ಬೆಳಿಗ್ಗೆ 11:00 ಘಂಟೆಗೆ<br>ಸ್ಥಳ: ಬಹಿರಂಗ ಹರಾಜಿಗೆ ಒಳಪಡಿಸಿರುವ ಸ್ವತ್ತಿನ ಮುಂಭಾಗದಲ್ಲಿ |
| 5 | ಮೀಸಲು ಬೆಲೆ | ನಿವೇಶನ ಸಂಖ್ಯೆ.29 ರಿಂದ 32 ರವರೆಗೆ ಪ್ರತಿ ನಿವೇಶನಕ್ಕೆ ರೂ.13,50,000/-<br>ನಿವೇಶನ ಸಂಖ್ಯೆ.28 ರೂ.14,76,000/-<br>ನಿವೇಶನ ಸಂಖ್ಯೆ.53 ಮತ್ತು 54 ಪ್ರತಿ ನಿವೇಶನಕ್ಕೆ ರೂ.12,00,000/-<br>ನಿವೇಶನ ಸಂಖ್ಯೆ.55 ರೂ.11,00,000/-<br>ನಿವೇಶನ ಸಂಖ್ಯೆ.56 ರೂ.11,10,000/-<br>ನಿವೇಶನ ಸಂಖ್ಯೆ.57 ರೂ.13,70,000/- |
| 6 | ಇ.ಎಂ.ಡಿ. ಮೊತ್ತ | ರೂ.25,000/- ಪ್ರತಿ ಸೈಟ್‌ಗೆ |
| 7 | ಬಿಡ್‌ನ ಕನಿಷ್ಠ ಹೆಚ್ಚಳ | ರೂ.5,000=00 |
| 8 | ಭದ್ರತೆಯಾಗಿ ನೀಡಿರುವ ಭದ್ರತಾ ಆಸ್ತಿ | **ಆಸ್ತಿ ಸಂಖ್ಯೆ:1,** ಹರಿಹರ ಉಪನೋಂದಣಾಧಿಕಾರಿಗಳ ಅಧಿಕಾರ ವ್ಯಾಪ್ತಿಗೆ ಒಳಪಟ್ಟು, ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಹನಗವಾಡಿ ಗ್ರಾಮ ಪಂಚಾಯತ್ ಕಸಬಾ ಹೋಬಳಿಯಲ್ಲಿರುವ ಖಾಲಿ ನಿವೇಶನಗಳು ಇವುಗಳ ಖಾನೇಷುಮಾರಿ ಸಂಖ್ಯೆ 17, ಸೈಟ್ ಸಂಖ್ಯೆ.28 ರಿಂದ 32 ರವರೆಗೆ ಒಟ್ಟು 5 ನಿವೇಶನಗಳು ಇವುಗಳ ಪ್ರತಿ ನಿವೇಶನದ ಅಳತೆ 30 ಅಡಿ x 40 ಅಡಿಗಳು ಇವುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ಇವುಗಳ ಒಟ್ಟು ಚೆಕ್ಕುಬಂದಿ ಪೂರ್ವಕ್ಕೆ: ಸೈಟ್ ನಂ,27, ಪಶ್ಚಿಮಕ್ಕೆ: ಸೈಟ್ ನಂ.33, ಉತ್ತರಕ್ಕೆ: ರಸ್ತೆ,ದಕ್ಷಿಣಕ್ಕೆ: ಸೈಟ್ ನಂ.53.<br>**ಆಸ್ತಿ ಸಂಖ್ಯೆ:2,** ಹರಿಹರ ಉಪನೋಂದಣಾಧಿಕಾರಿಗಳ ಅಧಿಕಾರ ವ್ಯಾಪ್ತಿಗೆ ಒಳಪಟ್ಟು, ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಹನಗವಾಡಿ ಗ್ರಾಮ ಪಂಚಾಯತ್ ಕಸಬಾ ಹೋಬಳಿಯಲ್ಲಿರುವ ಖಾಲಿ ನಿವೇಶನಗಳು ಇದರ ಖಾನೇಷುಮಾರಿ ಸಂಖ್ಯೆ.17, ಸೈಟ್ ಸಂಖ್ಯೆ.53 ರಿಂದ 57 ರವರೆಗೆ ಒಟ್ಟು 5 ನಿವೇಶನಗಳು ಇವುಗಳ ಪ್ರತಿ ನಿವೇಶನದ ಅಳತೆ 30 ಅಡಿ x 40 ಅಡಿಗಳು. ಇವುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ಇವುಗಳ ಒಟ್ಟು ಚೆಕ್ಕುಬಂದಿ ಪೂರ್ವಕ್ಕೆ: ಸೈಟ್ ನಂ.58, ಪಶ್ಚಿಮಕ್ಕೆ: ಸೈಟ್ ನಂ.52, ಉತ್ತರಕ್ಕೆ: ಸೈಟ್ ನಂ.32, ದಕ್ಷಿಣಕ್ಕೆ: ರಸ್ತೆ, |
| 9 | ಬ್ಯಾಂಕ್‌ಗೆ ತಿಳಿದಿರುವಂತೆ ಆಸ್ತಿಯ ಮೇಲಿನ ಇತರೆ ಜವಾಬ್ದಾರಿಗಳು | ಇತರೆ ಜವಾಬ್ದಾರಿಗಳು ಬ್ಯಾಂಕಿನ ಗಮನಕ್ಕೆ ಬಂದಿರುವುದಿಲ್ಲ. |
| 10 | ಆಸ್ತಿಯ ವಿರುದ್ಧ ಮಂಡಿಸಲಾದ ಕ್ಲೈಮ್‌ಗಳು ಮತ್ತು ಸುರಕ್ಷಿತ ಸಾಲಗಾರನಿಗೆ (Secured Creditor) ತಿಳಿದಿರುವ ಯಾವುದೇ ಇತರೆ ಬಾಕಿಗಳು | ಬ್ಯಾಂಕಿನ ಉತ್ತಮ ಜ್ಞಾನಕ್ಕೆ ಯಾವುದೇ ಕ್ಲೈಮ್‌ಗಳು ತಿಳಿದಿರುವುದಿಲ್ಲ. |
| 11 | ಅಧಿಕೃತ ಅಧಿಕಾರಿಯು ಅಡವು ಮಾಡಿದ ಖಾಲಿ ನಿವೇಶನಗಳನ್ನು ಒಂದೊಂದಾಗಿ ಮತ್ತು ಪ್ರತ್ಯೇಕವಾಗಿ ಹರಾಜು ಮಾಡಲಾಗುವುದು. | |

**ಹೆಚ್ಚಿನ ವಿವರಗಳಿಗಾಗಿ ಮತ್ತು ಮಾರಾಟದ ನಿಯಮಗಳು ಮತ್ತು ಷರತ್ತುಗಳಿಗಾಗಿ ಆಸಕ್ತ ಬಿಡ್‌ದಾರರು ದಯವಿಟ್ಟು ಬ್ಯಾಂಕ್ ಕೆಲಸದ ದಿನಗಳು ಮತ್ತು ಸಮಯದಲ್ಲಿ ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಬಹುದು.**

**ನಿಯಮಗಳು ಮತ್ತು ನಿಬಂಧನೆಗಳು**

(1) SARFAESI ಕಾಯಿದೆಯ ನಿಬಂಧನೆಗಳ ಅಡಿಯಲ್ಲಿ ಅಧಿಕೃತ ಅಧಿಕಾರಿಯಿಂದ ಹರಾಜು ಮೂಲಕ ಮಾರಾಟವನ್ನು ಮಾಡಲಾಗುವುದು. (2) ಬಹಿರಂಗ ಹರಾಜು ಈ ಕೆಳಕಂಡ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ಅದರಲ್ಲಿ ತಿಳಿಸಲಾದ ಕಾರ್ಯ ವಿಧಾನದ ಪ್ರಕಾರ ಹರಾಜನ್ನು ನಡೆಸಲಾಗುತ್ತದೆ. (3) ಮಾರಾಟವು SARFAESI ಕಾಯಿದೆ ಮತ್ತು ನಿಯಮಗಳಿಗೆ ಅನುಸಾರವಾಗಿ ನಡೆಸಲಾಗುತ್ತದೆ. (4) ಹರಾಜಿನಲ್ಲಿ ಭಾಗವಹಿಸುವವರು ಅಥವಾ ಅವರ ಅಧಿಕೃತ ಏಜೆಂಟರು ವೈಯಕ್ತಿಕ ಮಾಹಿತಿಯ ಅರ್ಜಿಯೊಂದಿಗೆ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಲಗತ್ತಿಸಿ EMD ಮೊತ್ತವನ್ನು ತುಂಬಿ ಹರಾಜಿನಲ್ಲಿ ಭಾಗವಹಿಸಬೇಕು. ಇವರನ್ನು ಹೊರತು ಪಡಿಸಿ ಇತರೆಯವರಿಗೆ ಹರಾಜಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ. (5) ಅರ್ಹ ಬಿಡ್‌ದಾರರ ನಡುವೆ ಇಂಟರ್ ಸೆ ಬಿಡ್ಡಿಂಗ್ ಅರ್ಹ ಬಿಡ್‌ದಾರರು ಉಲ್ಲೇಖಿಸಿದ ಮೀಸಲು ಬೆಲೆಗಿಂತ ಹೆಚ್ಚಿನ ಬಿಡ್‌ನಿಂದ ಪ್ರಾರಂಭವಾಗುತ್ತದೆ ಮತ್ತು ಬಿಡ್‌ದಾರರು ರೂ.5,000/- ರಷ್ಟು ಗುಣಾಕಾರಗಳಲ್ಲಿ ಬಿಡ್ ಮಾಡುವುದು. (6) ಯಾವುದೇ ಸಂದರ್ಭದಲ್ಲಿ ಆಸ್ತಿಯನ್ನು ಮೀಸಲು ಬೆಲೆಗಿಂತ ಕಮ್ಮಿ ಬೆಲೆಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ. (7) ಸೆಕ್ಯೂರ್ಡ್ ಕ್ರೆಡಿಟರ್‌ನಿಂದ ಬಿಡ್‌ನ ಮೊತ್ತದ ಬಗ್ಗೆ ಒಪ್ಪಿಗೆ ಪಡೆದು, ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡಿದ ಬಿಡ್‌ದಾರರಿಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದು. (8) ಯಶಸ್ವೀ ಬಿಡ್‌ದಾರರು ಮಾರಾಟದ ಪ್ರಕ್ರಿಯೆಗಳನ್ನು ಮುಕ್ತಾಯಗೊಳಿಸಿದ ತಕ್ಷಣ ಇ.ಎಂ.ಡಿ. ಸೇರಿದಂತೆ ಖರೀದಿ ಮೊತ್ತದ ಶೇ.25 ರಷ್ಟು ಹಣವನ್ನು ಠೇವಣಿ ಮಾಡಬೇಕು. ಯಶಸ್ವೀ ಬಿಡ್‌ದಾರರಿಗೆ ತಾಂತ್ರಿಕ ಸಮಸ್ಯೆಗಳು / ಡೀಫಾಲ್ಟ್ ತಪ್ಪಿಸಲು ಬ್ಯಾಂಕ್‌ನ ವ್ಯವಹಾರದ ಸಮಯವನ್ನು ಗಮನಿಸಲು ಸಲಹೆ ನೀಡಲಾಗಿದೆ. (9) ಖರೀದಿ ಹಣದ ಬಾಕಿ ಮೊತ್ತವನ್ನು ದಾವಣಗೆರೆ – ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆಯ ಅಧಿಕೃತ ಅಧಿಕಾರಿಗೆ ಹರಾಜಿನ ದಿನಾಂಕದಿಂದ 15ನೇ ದಿನ ಅಥವಾ ಮೊದಲು ಅಥವಾ ಅಧಿಕೃತ ಅಧಿಕಾರಿಯು ಲಿಖಿತವಾಗಿ ಒಪ್ಪಿಗೆ ನೀಡಿದ ಹೆಚ್ಚುವರಿ ಅವಧಿಯೊಳಗೆ ಪಾವತಿಸಬೇಕು. ನಿಗದಿತ ಅವಧಿಯೊಳಗೆ ಪಾವತಿ ಮಾಡಲು ತಪ್ಪಿದಲ್ಲಿ ಮಾರಾಟವು ರದ್ದಾದಂತೆ ತಿಳಿಯುವುದು. ಬಿಡ್‌ದಾರನು ಪಾವತಿ ಮಾಡಿದ ಇ.ಎಂ.ಡಿ. ಮೊತ್ತ ಮತ್ತು ಸಂಪೂರ್ಣ ಠೇವಣಿ ಮೊತ್ತವನ್ನು ಯಾವುದೇ ಸೂಚನೆ ನೀಡದೆ ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರು ಮಾರಾಟ ಮಾಡಲಾಗುವುದು. ಷರತ್ತಿನಂತೆ ಹರಾಜು ಮೊತ್ತವನ್ನು ಅವಧಿಯೊಳಗೆ ತುಂಬದ ಯಶಸ್ವಿ ಬಿಡ್‌ದಾರರು ಬ್ಯಾಂಕು ಅಥವಾ ಅಧಿಕೃತ ಅಧಿಕಾರಿಯ ವಿರುದ್ದ ಯಾವುದೇ ಹಕ್ಕು ಅಥವಾ ಪರಿಹಾರಕ್ಕೆ ಅರ್ಹರಾಗಿರುವುದಿಲ್ಲ. (10) ವಿಫಲ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ಹರಾಜು ಮಾರಾಟ ಪ್ರಕ್ರಿಯೆಯ ಮುಕ್ತಾಯವಾದ ಮೇಲೆ ಬಡ್ಡಿಯಿಲ್ಲದೆ ಹಿಂತಿರುಗಿಸಲಾಗುತ್ತದೆ. (11) ಯಶಸ್ವೀ ಬಿಡ್‌ದಾರರು ಮಾರಾಟ ಪ್ರಮಾಣ ಪತ್ರ, ನೋಂದಣಿ ಶುಲ್ಕಗಳು, ಸರ್ಕಾರಕ್ಕೆ ಪಾವತಿಸಬೇಕಾದ ಎಲ್ಲಾ ಶಾಸನಬದ್ದ ಬಾಕಿಗಳು, ತೆರಿಗೆಗಳು ಮತ್ತು ದರಗಳು ಮತ್ತು ಆಸ್ತಿಗಳಿಗೆ ಸಂಬಂಧಿಸಿದಂತೆ, ಅಸ್ತಿತ್ವದಲ್ಲಿರುವ ಮತ್ತು ಭವಿಷ್ಯದ ಶುಲ್ಕಗಳನ್ನು ಭರಿಸಬೇಕು. (12) ಯಶಸ್ವಿ ಬಿಡ್ ಮೊತ್ತಕ್ಕೆ ಮಾರಾಟದ ಪರಿಗಣನೆಯಾಗಿ, ಸಂಪೂರ್ಣ ಯಶಸ್ವಿ ಬಿಡ್ ಮೊತ್ತವನ್ನು ಮತ್ತು ಇತರೆ ಯಾವುದೇ ಶುಲ್ಕಗಳು ಇದ್ದರೆ ಪಾವತಿಸಿದ ನಂತರ ಯಶಸ್ವೀ ಬಿಡ್‌ದಾರರ ಹೆಸರಿನಲ್ಲಿ ಮಾತ್ರ ಮಾರಾಟ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. (13) ಆಸ್ತಿಯನ್ನು 'ಎಲ್ಲಿ ಇದೆಯೋ ಹಾಗೆ' ಮತ್ತು 'ಹೇಗಿದೆಯೋ ಹಾಗೆ' ಯಾವುದಾದರೂ ಶಾಸನಬದ್ಧ ಬಾಕಿಗಳೂ ಇದ್ದರೆ ಅದಕ್ಕೆ ಒಳಪಟ್ಟು ಮಾರಾಟ ಮಾಡಲಾಗುವುದು. ಬ್ಯಾಂಕಿನ ಸಾಲದ ಹೊರತಾಗಿ ಇತರೆ ಯಾವುದಾದರೂ ಹಕ್ಕುಗಳು, ಋಣಗಳು, ಜವಾಬ್ದಾರಿಗಳು ಮತ್ತು ಶುಲ್ಕಗಳ ಬಗ್ಗೆ ಉದ್ದೇಶಿತ ಬಿಡ್‌ದಾರರೇ ಪ್ರತ್ಯೇಕವಾಗಿ ವಿಚಾರಿಸಿ, ದೃಢಪಡಿಸಿಕೊಳ್ಳಬೇಕು ಹಾಗೂ ಆಸ್ತಿಯ ಮಾಲೀಕತ್ವದ ಬಗ್ಗೆ, ಗುಣಮಟ್ಟದ ಬಗ್ಗೆ ಮತ್ತು ಅಳತೆಯ ಬಗ್ಗೆ ದೃಢಪಡಿಸಿಕೊಂಡ ನಂತರವೇ ಬಿಡ್‌ನಲ್ಲಿ ಭಾಗವಹಿಸಬೇಕು. ಬಿಡ್ ನಂತರ ಮುಂದೆ ಬರುವ ಯಾವುದೇ ವ್ಯತ್ಯಾಸಗಳಿಗೆ ಮತ್ತು ಆಗು ಹೋಗುಗಳಿಗೆ ಬಿಡ್‌ದಾರನೇ ವೈಯಕ್ತಿಕವಾಗಿ ಬಗೆಹರಿಸಿಕೊಳ್ಳಬೇಕು. (14) ಮಾರಾಟಕ್ಕೆ ಇಟ್ಟಿರುವ ಆಸ್ತಿ, ಆಸ್ತಿಯ ಮೇಲಿನ ಶುಲ್ಕಗಳು / ಹೊರೆಗಳು ಅಥವಾ ಇತರೆ ಯಾವುದೇ ವಿಷಯದ ಬಗ್ಗೆ ಯಾವುದೇ ರೀತಿಯ ಹಕ್ಕುಗಳನ್ನು ಬಿಡ್ / ಮಾರಾಟದ ದೃಢೀಕರಣದ ಸಲ್ಲಿಕೆ ನಂತರ ಪರಿಗಣಿಸಲಾಗುವುದಿಲ್ಲ. (15) ಅಧಿಕೃತ ಅಧಿಕಾರಿ / ಬ್ಯಾಂಕು ಮಾರಾಟದಲ್ಲಿರುವ ಆಸ್ತಿಗೆ ಸಂಬಂಧಿಸಿದಂತೆ, ಯಾವುದೇ ಶುಲ್ಕ ಹೊಣೆಗಾರಿಕೆ, ಹೊರೆಗಳು, ಆಸ್ತಿ ತೆರಿಗೆ ಬಾಕಿಗಳು, ವಿದ್ಯುತ್ ಬಾಕಿಗಳು, ಇತ್ಯಾದಿಗಳಿಗೆ ಅಥವಾ ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಯಾರಿಗಾದರೂ ಇತರೆ ಬಾಕಿಗಳಿಗೆ ಜವಾಬ್ದಾರರಾಗಿರುವುದಿಲ್ಲ. (16) ಉದ್ದೇಶಿತ ಬಿಡ್‌ದಾರರು ಮಾರಾಟಕ್ಕೆ ಒಳಪಟ್ಟ ಆಸ್ತಿಯ ಮಾಲೀಕತ್ವದ ಪತ್ರದ ನಕಲು ಪ್ರತಿಗಳನ್ನು ವೀಕ್ಷಿಸಿ ಖಾತ್ರಿ ಪಡಿಸಿಕೊಳ್ಳಬಹುದಾಗಿದೆ. ಮುಂದೆ ಯಾವುದೇ ತರಹದ ಹಕ್ಕು ಮತ್ತು ತಂಟೆ, ತಕರಾರುಗಳಿಗೆ ಬ್ಯಾಂಕು ಜವಾಬ್ದಾರರಾಗಿರುವುದಿಲ್ಲ. (17) ಅಧಿಕೃತ ಅಧಿಕಾರಿಯು ಯಾವುದೇ ಬಿಡ್ಡನ್ನು ಒಪ್ಪಲು ಅಥವಾ ತಿರಸ್ಕರಿಸಲು ಅಥವಾ ಮಾರಾಟವನ್ನು ಮುಂದೂಡಲು / ರದ್ದುಗೊಳಿಸಲು ಅಥವಾ ಯಾವುದೇ ಸಮಯದಲ್ಲಿ ಈ ಮಾರಾಟದ ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ಮಾಲೀಕರು, ಬಿಡ್‌ದಾರರಿಗೆ ಮತ್ತು ಸಾರ್ವಜನಿಕರಿಗೆ ಯಾವುದೇ ಕಾರಣ ನೀಡದೇ ಪೂರ್ವ ಸೂಚನೆಯಿಲ್ಲದೇ ಬದಲಾಯಿಸಲು / ತೆಗೆದು ಹಾಕಲು ಸಂಪೂರ್ಣ ಹಕ್ಕು ಮತ್ತು ವಿವೇಚನೆಯನ್ನು ಹೊಂದಿರುತ್ತಾರೆ. (18) ಹರಾಜು ಮಾರಾಟವು ಸುರಕ್ಷಿತ ಸಾಲಗಾರ / ಬ್ಯಾಂಕ್‌ನಿಂದ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. ಸಾಲಗಾರನು ಮಾರಾಟದ ದಿನಾಂಕದ ಮೊದಲು ಬ್ಯಾಂಕ್‌ಗೆ ಪಾವತಿಸಬೇಕಾದ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿದರೆ, ಯಾವುದೇ ಮಾರಾಟವನ್ನು ನಡೆಸಲಾಗುವುದಿಲ್ಲ. ಯಶಸ್ವಿ ಬಿಡ್‌ದಾರರು ಈ ವಿಷಯದಲ್ಲಿ ಹಕ್ಕನ್ನು ಹೊಂದಿರುವುದಿಲ್ಲ ಮತ್ತು ಮಾರಾಟ / ಹರಾಜಿನ ರದ್ದತಿಯು ಬ್ಯಾಂಕ್ / ಅಧಿಕೃತ ಅಧಿಕಾರಿಯ ವಿವೇಚನೆಗೆ ಒಳಪಟ್ಟಿರುತ್ತದೆ. (19) ಉದ್ದೇಶಿತ ಬಿಡ್‌ದಾರರು ಮೇಲೆ ತಿಳಿಸಲಾದ ಸಮಯ ಮತ್ತು ದಿನಾಂಕದಂದು ಅವರ ವೆಚ್ಚದಲ್ಲಿ ಪೂರ್ವ ನೇಮಕಾತಿಯ ಒಪ್ಪಿಗೆಯನ್ನು ಪಡೆದು ಮಾರಾಟಕ್ಕೆ ಒಳಪಡಿಸಿದ ಆಸ್ತಿಯನ್ನು ದಿನಾಂಕ:30-08-2024 ರಿಂದ 17-09-2024 ರವರೆಗೆ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಪರಿಶೀಲಿಸಬಹುದು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಅಧಿಕೃತ ಅಧಿಕಾರಿ ಶ್ರೀ ಎನ್. ತುಳಸೀನಾಥ್, ದೂರವಾಣಿ ಸಂಖ್ಯೆ 8970004100, ಶ್ರೀ ಕೆ.ಎಂ. ರುದ್ರಮುನಿ ದೂರವಾಣಿ ಸಂಖ್ಯೆ 9449370369, ಶ್ರೀ ಕೆ.ಎಂ. ನಟರಾಜ್ ದೂರವಾಣಿ ಸಂಖ್ಯೆ 7899681386, ಶ್ರೀ ವಿನಯ್ ಟಿ. ನವಲೆ, ಸಾಲ ವಸೂಲಾತಿ ಅಧಿಕಾರಿ ದೂರವಾಣಿ ಸಂಖ್ಯೆ 8970004200, ಶ್ರೀ ಜಿ.ಹೆಚ್. ಸುರೇಶ್‌ಬಾಬು ಶಾಖಾ ವ್ಯವಸ್ಥಾಪಕರು, ಹರಿಹರ ದೂರವಾಣಿ ಸಂಖ್ಯೆ 9902557408 ಇವರುಗಳನ್ನು ಸಂಪರ್ಕಿಸಬಹುದಾಗಿದೆ. (20) ಆಸ್ತಿಯ ಬಗ್ಗೆ ಮತ್ತು ಮಾರಾಟದ ಷರತ್ತುಗಳನ್ನು ಹಾಗೂ ಹರಾಜಿನ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಬಿಡ್‌ದಾರರು ಬಿಡ್ ಪೂರ್ವದಲ್ಲಿಯೇ ತಿಳಿದುಕೊಂಡ ನಂತರ ಹರಾಜಿನ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು. ನಂತರ ಯಾವುದೇ ಸಮಸ್ಯೆಗಳು ಉಂಟಾದಲ್ಲಿ ಬಿಡ್‌ದಾರನೇ ಸ್ವತಃ ಬಗೆಹರಿಸಿಕೊಳ್ಳಬೇಕು. (21) ಈ ಮೇಲಿನ ಸಾಲದ ವಾರಸುದಾರರು ಈ ಮೇಲಿನ ದಿನಾಂಕದಂದು ಸಾಲದ ಬಾಕಿಗಳನ್ನು ಪೂರ್ಣವಾಗಿ ಮರುಪಾವತಿ ಮಾಡದಿದ್ದಲ್ಲಿ ಅವರುಗಳಿಗೆ ಇದು ಸೂಚನೆಯಾಗಿದೆ.

ಸ್ಥಳ: ದಾವಣಗೆರೆ
ದಿನಾಂಕ :29-08-2024

ಸಹಿ/- ಅಧಿಕೃತ ಅಧಿಕಾರಿ
ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ

# ಜಗಳೂರಿನಲ್ಲಿ ರೈತ ಸಂಘದ ಪ್ರತಿಭಟನೆ




ಜಗಳೂರು, ಆ. 29- ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ್)ಬಣದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರು ಪಟ್ಟಣದ ಮಹಾತ್ಮಗಾಂಧಿವೃತ್ತದ ಬಳಿ ಮಾನವ ಸರಪಳಿ ರಚಿಸಿ ನಂತರ ಬೆಸ್ಕಾಂ ಕಛೇರಿ ಮುಂಬಾಗದ ಜಮಾಯಿಸಿ ಬೆಸ್ಕಾಂ ಅಧಿಕಾರಿ ಅಭಿಷೇಕ್ ಹಾಗೂ ಶಾಸಕ ಬಿ.ದೇವೇಂದ್ರಪ್ಪ ಅವರಿಗೆ ಲಿಖಿತ ಮನವಿ ಸಲ್ಲಿಸಿದರು.

ಸಂಘಟನೆಯ ತಾಲ್ಲೂಕು ಅಧ್ಯಕ್ಷ ಚಿರಂಜೀವಿ ಸಿ.ಎಂ. ಹೊಳೆ ಮಾತನಾಡಿ,'ಕೃಷಿ ಪಂಪ್ ಸೆಟ್ ಗಳಿಗೆ ಆಧಾರ್ ಜೋಡಣೆಯೊಂದಿಗೆ ಮೀಟರ್ ಅಳವಡಿಸಿ ವಿದ್ಯುತ್ ಶುಲ್ಕ ವಿಧಿಸುವುದನ್ನು ಕೈಬಿಡಬೇಕು.

2023 ರ ತಿದ್ದುಪಡಿ ಕಾಯ್ದೆ ರದ್ದುಪಡಿಸಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕಕ್ಕೆ ಉಪಕರಣಗಳನ್ನು ಹಿಂದಿನಂತೆ ವಿತರಿಸಬೇಕು. ಸರ್ಕಾರ ಜಾರಿಗೊಳಿಸಿರುವ ಮನೆಗಳಲ್ಲಿ 200 ಯೂನಿಟ್ ಉಚಿತ ವಿದ್ಯುತ್ ಗೆ ಯೂನಿಟ್ ವಿದ್ಯುತ್ ದರ ಹೆಚ್ಚಿಸಿರುವುದನ್ನು ಕಡಿಮೆಗೊಳಿಸಬೇಕು. ಸೋಲಾರ್ ಸಂಪರ್ಕ ಹೊಂದಿರುವ ಪಂಪ್ ಸೆಟ್ ಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದನ್ನು ಕೈಬಿಡಬೇಕೆಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿ ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ತಾಲ್ಲೂಕಿನ ರೈತರ ಸಂಕಷ್ಟಗಳಿಗೆ ಸದಾ ಸ್ಪಂದಿಸುವೆ. ತಮ್ಮ ಹೋರಾಟದ ಮನವಿ ಕುರಿತು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಇತ್ಯರ್ಥಕ್ಕೆ ಕ್ರಮಕೈಗೊಳ್ಳಲು ಸೂಚಿಸುವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಂಘಟನೆ ಪ್ರಧಾನ ಕಾರ್ಯದರ್ಶಿ ರಾಜನಹಟ್ಟಿ ರಾಜು, ಪದಾಧಿಕಾರಿಗಳಾದ ಸಹದೇವ ರೆಡ್ಡಿ, ಗಂಗಾಧರಪ್ಪ, ಸತೀಶ್, ಶರಣಪ್ಪ, ಅನಿಲ್, ವೀರೇಶ್ ಕೆಂಚಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

## ಉಮೇಶ್ ನಾಯ್ಕರಿಗೆ ರಾಯಣ್ಣ ಪ್ರಶಸ್ತಿ



ದಾವಣಗೆರೆ, ಆ. 29- ಶ್ರೀ ಕನಕ ಆರೋಗ್ಯ ಇಲಾಖೆ ನೌಕರರ ಸಂಘದ ವತಿಯಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜಯಂತಿ ಅಂಗವಾಗಿ ನಗರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 25 ವರ್ಷಗಳಿಂದ ಜಾನಪದ ಕ್ಷೇತ್ರದಲ್ಲಿ ಸೇವೆ ಮಾಡುತ್ತಿರುವ ದಾವಣಗೆರೆ ತಾಲ್ಲೂಕಿನ ಚಿನ್ನಸಮುದ್ರ ಗ್ರಾಮದ ಉಮೇಶ ನಾಯ್ಕ ಅವರಿಗೆ 2024ನೇ ಸಾಲಿನ ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಡಾ. ಶಿವಾನಂದ ದಳವಾಯಿ, ಹಿರಿಯ ಪತ್ರಕರ್ತ ಬಸವರಾಜ್ ದೊಡ್ಮನಿ ಹಾಗೂ ಇತರರು ಉಪಸ್ಥಿತರಿದ್ದರು.

## ಹರಪನಹಳ್ಳಿ ತಾ. ನಿಟ್ಟೂರಿನಲ್ಲಿ ರಕ್ತದಾನ ಶಿಬಿರ



ಹರಪನಹಳ್ಳಿ, ಆ. 29- ತಾಲ್ಲೂಕಿನ ನಿಟ್ಟೂರಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ರಕ್ತದಾನ ಶಿಬಿರ ನಡೆಯಿತು. ಈ ಸಂದರ್ಭದಲ್ಲಿ ಡಾ. ಅರ್ಪಿತಾ ಮತ್ತು ಡಾ.ವೀರೇಶ್, ಗ್ರಾಮ ಪಂಚಾಯತಿ ಅಧ್ಯಕ್ಷೆ ಸುಧಾ ಬಾರ್ಕಿ, ಉಪಾಧ್ಯಕ್ಷ ಕೆ. ಮಾರುತಿ ಮತ್ತು ಸದಸ್ಯರುಗಳು ಹಾಗೂ ಗ್ರಾಮದ ಮುಖಂಡರಾದ ಹೆಚ್.ಎಂ ಸಿದ್ದಲಿಂಗ ಸ್ವಾಮಿ, ಮಾಜಿ ಅಧ್ಯಕ್ಷ ರಮೇಶ್ ಹುಲಿ, ಬಾರ್ಕಿ ಶಿವಾನಂದಪ್ಪ, ಚಲವಾದಿ ನಾಗರಾಜ್, ಪೂಜಾರ್ ಬಸವರಾಜ್, ಎಂ. ಪ್ರಶಾಂತ್, ಮತ್ತೂರು ಮಂಜು, ಎ.ಕೆ. ಗೋದೆಪ್ಪ, ಪ್ರೌಢಶಾಲೆ ಪ್ರದೀಪ್ ಮಾಸ್ಟರ್, ಕೆ.ಎಸ್.ಆರ್ ಟಿ.ಸಿ ಮಾರುತಿ ಹಾಜರಿದ್ದರು.

## ಮಲಯಾಳಂ ಚಿತ್ರರಂಗದ ಲೈಂಗಿಕ ಪೀಡನೆ : ಇನ್ನಷ್ಟು ಜನರ ವಿರುದ್ಧ ಪ್ರಕರಣ

ತಿರುವನಂತಪುರಂ, ಆ. 29 - ಮಲಯಾಳಂ ಚಿತ್ರರಂಗದಲ್ಲಿ ಲೈಂಗಿಕ ಪೀಡನೆ ವಿವಾದ ಮತ್ತಷ್ಟು ಭುಗಿಲೆದ್ದಿದ್ದು, ಇನ್ನಷ್ಟು ಪ್ರಮುಖರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ. ಸಿಪಿಐ (ಎಂ) ಶಾಸಕ ಕೆ. ಮುಕೇಶ್ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಲಾಗಿದ್ದು, ಅವರು ರಾಜೀನಾಮೆ ನೀಡಬೇಕು ಎಂಬ ಒತ್ತಡ ಹೆಚ್ಚಾಗಿದೆ. ನಟರಾದ ಜಯಸೂರ್ಯ ಹಾಗೂ ಮುನಿಯಂಪಿಲ್ಲ ರಾಜು ವಿರುದ್ಧವೂ ಆರೋಪಗಳು ಕೇಳಿ ಬಂದಿವೆ. ಕಲಾವಿದರ ಒಕ್ಕೂಟದ ಪದಾಧಿಕಾರಿ ಇಡವೇಲು ಬಾಬು ವಿರುದ್ಧವೂ ಲೈಂಗಿಕ ಪೀಡನೆಯ ಆರೋಪ ಮಾಡಲಾಗಿದೆ.

## ನಗರದಲ್ಲಿ ನಾಳೆ ವರದಿಗಾರರ ಕೂಟದ ಪದಗ್ರಹಣ

ದಾವಣಗೆರೆ, ಆ. 29- ವರದಿಗಾರರ ಕೂಟದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವು ನಾಡಿದ್ದು ದಿನಾಂಕ 31ರ ಶನಿವಾರ ಬೆಳಿಗ್ಗೆ 10.30ಕ್ಕೆ ನಗರದ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ ಎಂದು ಕೂಟದ ಗೌರವಾಧ್ಯಕ್ಷ ಬಿ.ಎನ್. ಮಲ್ಲೇಶ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಎಸ್. ಬಡದಾಳ್ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಕೂಟದ ವೆಬ್‌ಸೈಟ್ ಉದ್ಘಾಟನೆ ಮಾಡಲಿದ್ದು, ಅತಿಥಿಗಳಾಗಿ ಶಾಸಕರಾದ ಬಿ.ಪಿ ಹರೀಶ್, ಕೆ.ಎಸ್. ಬಸವಂತಪ್ಪ, ಕೂಟದ ನಿಕಟ ಪೂರ್ವ ಅಧ್ಯಕ್ಷ ಕೆ. ಏಕಾಂತಪ್ಪ ಭಾಗವಹಿಸಲಿದ್ದಾರೆ.

ವಾರ್ಷಿಕ ಮಾಧ್ಯಮ ಪ್ರಶಸ್ತಿಯನ್ನು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ಪ್ರದಾನ ಮಾಡಲಿದ್ದಾರೆ. ಹಿರಿಯ ಪತ್ರಕರ್ತರನ್ನು ಗುರುತಿಸಿ ಜೀವಮಾನ ಸಾಧನೆಗಾಗಿ ಗೌರವ ಸನ್ಮಾನವನ್ನು ಶಾಸಕ ಶಾಮನೂರು ಶಿವಶಂಕರಪ್ಪ ಅವರು ಮಾಡಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್, ಪ್ರಧಾನ ಕಾರ್ಯದರ್ಶಿ ಎಂ.ವೈ. ಸತೀಶ್, ಖಜಾಂಚಿ ಪವನ್ ಕುಮಾರ್ ಐರಣಿ, ಕಾರ್ಯದರ್ಶಿ ಸಿಕಂದರ್ ಉಪಸ್ಥಿತರಿದ್ದರು.

## ಸಿಎಂ ಪ್ರಾಸಿಕ್ಯೂಷನ್ ಅರ್ಜಿ

(1ನೇ ಪುಟದಿಂದ) ವಿಚಾರಣೆಯನ್ನು ನ್ಯಾಯಮೂರ್ತಿ ನಾಗಪ್ರಸನ್ನ ಅವರನ್ನೊಳಗೊಂಡಂತ ನ್ಯಾಯಪೀಠದಲ್ಲಿ ನಡೆಸಲಾಯಿತು.ಈ ವೇಳೆ ರಾಜ್ಯಪಾಲರು ತರಾತುರಿಯಲ್ಲಿ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವ ಬಗ್ಗೆ ಸಿಎಂ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ಮನವರಿಕೆ ಮಾಡಿಕೊಟ್ಟರು.

ಇದಷ್ಟೇ ಅಲ್ಲದೇ ಶಶಿಕಲಾ ಜೊಲ್ಲೆ, ಹೆಚ್.ಡಿ ಕುಮಾರಸ್ವಾಮಿ ಸೇರಿದಂತೆ ವಿವಿಧ ರಾಜಕೀಯ ನಾಯಕರ ವಿರುದ್ಧದ ಪ್ರಾಸಿಕ್ಯೂಷನ್ ಗೆ ಅನುಮತಿ ಕೋರಿ ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಿದ್ದರೂ ಈವರೆಗೆ ಯಾವುದೇ ಉತ್ತರ ನೀಡಿಲ್ಲ. ಆದರೇ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದಲ್ಲಿ ಅನುಮತಿ ಕೋರಿದ ಕೆಲವೇ ದಿನಗಳಲ್ಲಿ ನೀಡಲಾಗಿದೆ ಎಂಬುದಾಗಿ ವಾದಿಸಿದರು.

ಈ ವಾದವನ್ನು ಆಲಿಸಿದ ನಂತ್ರ ಹೈಕೋರ್ಟ್, ಪ್ರತಿವಾದಿಗಳ ವಾದವನ್ನು ಆಲಿಸುವುದಕ್ಕೆ ಸಮಯಾವಕಾಶ ಕೋರಿದ ಕಾರಣ ನಾಡಿದ್ದು ದಿನಾಂಕ 31ಕ್ಕೆ ವಿಚಾರಣೆಯನ್ನು ಮುಂದೂಡಿದೆ.

ಅಲ್ಲದೇ ಈ ಹಿಂದಿನ ಸಿಎಂ ಸಿದ್ಧರಾಮಯ್ಯ ವಿರುದ್ಧದ ಮುಡಾ ಹಗರಣ ಸಂಬಂಧ ರಾಜ್ಯಪಾಲರು ನೀಡಿದ್ದ ಪ್ರಾಸಿಕ್ಯೂಷನ್ ಅನುಮತಿ ನೀಡಿದಂತಹ ವಿಚಾರದ ಮಧ್ಯಂತರ ಆದೇಶವನ್ನು ಮುಂದುವರೆಸಿ ಆದೇಶಿಸಿದೆ.

## ನೌಕಾ ದಳಕ್ಕೆ ಅರಿಘಾಟ್ ಸೇರ್ಪಡೆ

(1ನೇ ಪುಟದಿಂದ) ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉಪಸ್ಥಿತರಿದ್ದರು. ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವ ಸಿಂಗ್, ಜಲಾಂತರ್ಗಾಮಿಯಿಂದ ದೇಶದ ಅಣು ನಿಗ್ರಹ ಸಾಮರ್ಥ್ಯ ಹೆಚ್ಚಾಗಿದೆ ಎಂದು ಹೇಳಿದರು.

## ಸ್ಫೂರ್ತಿ ಸೇವಾ ಟ್ರಸ್ಟ್‌ನಿಂದ ಪ್ರಶಸ್ತಿ ಪತ್ರ ವಿತರಣೆ



ದಾವಣಗೆರೆ, ಆ. 29 - ನಗರದ ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿರುವ ಸ್ಫೂರ್ತಿ ಸೇವಾ ಟ್ರಸ್ಟ್‌ನಿಂದ ಹಲವಾರು ಸಾಮಾಜಿಕ ಕಾರ್ಯಗಳು ನಡೆಯುತ್ತಿದ್ದು, ಈಚೆಗೆ ಅಂಧ ಮಕ್ಕಳಿಗೆ ಉಚಿತ ಕಂಪ್ಯೂಟರ್ ತರಬೇತಿ ನೀಡಿ ಅವರನ್ನು ರಸ್ತೆಯಲ್ಲಿ ಯಾರ ಸಹಾಯವೂ ಇಲ್ಲದೆ ನಡೆದಾಡುವ ಮತ್ತು ಸ್ವಾವಲಂಬಿಗಳ್ನಾಗಿ ಮಾಡಿ ಏಕಾಂಗಿ ಜೀವನ ನಡೆಸುವ ಶೈಲಿಯನ್ನು ರೂಪಿಸಿಕೊಳ್ಳುವಂತಹ ಶಿಕ್ಷಣ ನೀಡಿದ್ದು, ಈ ಶಿಕ್ಷಣದಲ್ಲಿ ತೇರ್ಗಡೆ ಹೊಂದಿದ ಮಕ್ಕಳಿಗೆ ಪ್ರಶಸ್ತಿ ಪತ್ರ ನೀಡಿ ಅವರಿಗೆ ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ 15ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಮತ್ತು ಕಾಂಗ್ರೆಸ್ ಮುಖಂಡ ಉಮೇಶ್ ದಂಪತಿ ಈ ಭಾಗದ ಸಾಮಾಜಿಕ ಕಾರ್ಯಕರ್ತ ಹಾಗೂ ಪತ್ರಿಕಾ ವರದಿಗಾರ ಬೇಕರಿ ವಿರೂಪಾಕ್ಷ ಪ್ರಶಸ್ತಿ ಪತ್ರ ವಿತರಿಸಿ, ಸ್ಫೂರ್ತಿ ಸೇವಾ ಟ್ರಸ್ಟ್‌ಗೆ ಶುಭ ಹಾರೈಸಿದರು.

ಸಂಸ್ಥೆಯ ಮುಖ್ಯಸ್ಥರುಗಳಾದ ರೂಪನಾಯಕ್, ರೇಣುಕಮ್ಮ, ಕೃಷ್ಣ, ಉದ್ಯೋಗಿಗಳಾದ ಪೂಜಾ, ಅನುಸೂಯಮ್ಮ, ಭಾರತಿ ಉಪಸ್ಥಿತರಿದ್ದರು.

## ಮಹಿಳೆ, ಮೊಮ್ಮಗನ ಮೇಲೆ ಹಲ್ಲೆ ನಡೆಸಿದ ಆರು ರೈಲ್ವೆ ಪೊಲೀಸರ ಅಮಾನತ್ತು

ಭೂಪಾಲ್, ಆ. 29 - ಮಧ್ಯಪ್ರದೇಶದ ಕತ್ನಿ ಜಿಲ್ಲೆಯಲ್ಲಿ ಮಹಿಳೆ ಹಾಗೂ ಮೊಮ್ಮಗನನ್ನು ಥಳಿಸಿದ ಕಾರಣಕ್ಕಾಗಿ ಸರ್ಕಾರಿ ರೈಲ್ವೆ ಪೊಲೀಸರ ಆರು ಸಿಬ್ಬಂದಿಯನ್ನು ಅಮಾನತ್ತುಗೊಳಿಸಿ, ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕತ್ನಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಮಹಿಳೆ ಹಾಗೂ ಮೊಮ್ಮಗನ ಮೇಲೆ ಹಲ್ಲೆ ನಡೆಸುವ ಹಳೆಯ ದೃಶ್ಯ ಇತ್ತೀಚೆಗೆ ವೈರಲ್ ಆಗಿತ್ತು. ಈ ಬಗ್ಗೆ ರೈಲ್ವೆಯ ಡಿಐಜಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಸಿಬ್ಬಂದಿ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಮೋಹನ್ ಯಾದವ್ ತಿಳಿಸಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x55, 30x40, ಪೂರ್ವ 40x60 ರಲ್ಲಿ ಬನಶಂಕರಿ ಬಡಾವಣೆ ಪೂರ್ವ 30x50, 30x57 (ಅಕ್ಕ-ಪಕ್ಕ) ಪಶ್ಚಿಮ 40x70 (ಅಕ್ಕ-ಪಕ್ಕ) ಉತ್ತರ 30x50 ಡಾಲರ್ಸ್ ಕಾಲೋನಿಯಲ್ಲಿ ಉತ್ತರ 40x70 (ಅಕ್ಕ-ಪಕ್ಕ)
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ ಟೀಂ ಅಕಾಡೆಮಿ ಕಾಲೇಜ್ ಹತ್ತಿರ 30x40 ಪೂರ್ವ, 30x50 ಪೂರ್ವ, 30x40 ಪಶ್ಚಿಮ, 30x60 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗೆ ದೊರೆಯುತ್ತದೆ**
ನಗರದ ತರಳಬಾಳು ಬಡಾವಣೆಯ 16ನೇ ಕ್ರಾಸ್ ನಲ್ಲಿ ಇರುವ, ಮೊದಲನೇ ಮಹಡಿಯ 30x50 ಅಡಿ ಜಾಗದಲ್ಲಿ ಕಟ್ಟಿರುವ 3 ರೂಮ್ ಗಳ ಮನೆ ಬಾಡಿಗೆಗೆ ದೊರೆಯುತ್ತದೆ. ಸಸ್ಯಾಹಾರಿಗಳಿಗೆ ಮಾತ್ರ
8317588730 ಮಂಜುನಾಥ್. ಜಿ

**ಬೇಕಾಗಿದ್ದಾರೆ**
ಸೇಲ್ಸ್‌ಮ್ಯಾನ್ - 2
ಅಕೌಂಟೆಂಟ್ (ಮಹಿಳೆ)
ಆಫೀಸ್ ಕ್ಲರ್ಕ್ (ಪುರುಷ)
80888 92673

**ಮನೆಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಉತ್ತರ 30x40 (ಮೇಲೆ-ಕೆಳಗೆ) SS 'A' Block ಪೂರ್ವ 30x40 (ಡುಪ್ಲೆಕ್ಸ್) SS 'B' Block ದಕ್ಷಿಣ 30x40 (ಡುಪ್ಲೆಕ್ಸ್) ವಿದ್ಯಾನಗರ ಪೂರ್ವ 40x70.
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x50 ಪೂರ್ವ ಅಕ್ಕ-ಪಕ್ಕ, 30x50 ಪಶ್ಚಿಮ ಅಕ್ಕ-ಪಕ್ಕ, 30x40 ಪಶ್ಚಿಮ ಅಕ್ಕ-ಪಕ್ಕ, ಹೊಸ ಬನಶಂಕರಿ ಬಡಾವಣೆಯಲ್ಲಿ 30x57 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬಾಡಿಗೆಗೆ ದೊರೆಯುತ್ತವೆ**
ವಾಣಿಜ್ಯ ಮಳಿಗೆಗಳು/ಸಿಂಗಲ್ ಬಿ.ಹೆಚ್.ಕೆ. ಮನೆಗಳು/ಅಟ್ಯಾಚ್ ರೂಮ್ ಗಳು ಬಾಡಿಗೆಗೆ ದೊರೆಯುತ್ತವೆ. ನಗರದ DCM ಬಡಾವಣೆಯ 60 ಅಡಿ ಮುಖ್ಯ ರಸ್ತೆಯ, ಕಾರ್ನರ್ ಜಾಗದಲ್ಲಿ 1.ಅಡಿ ವಿವಿಧ ಅಳತೆ ಬಹು ಉಪಯೋಗಿ ವಾಣಿಜ್ಯ ಮಳಿಗೆಗಳು. 2. ಸಿಂಗಲ್ ಬಿ.ಹೆಚ್.ಕೆ. ಮನೆಗಳು (ನೆಲ ಮಹಡಿಯಲ್ಲಿ) 3.ಅಟ್ಯಾಚ್ ರೂಮ್ಸ್ (ಎರಡನೆ ಮಹಡಿಯಲ್) ಮನೆ ಮತ್ತು ರೂಮ್ ಸಸ್ಯಾಹಾರಿಗಳಿಗೆ
8317588730 Manjunath

**ಕಾರುಗಳು ಮಾರಾಟಕ್ಕಿವೆ**
Maruthi Celerio Automatic
Hyundai Eon Sportz
Vitara Brezza ZDI+
Swift Petrol Vxi
ದೈವಿಕ್ ಐನಳ್ಳಿ
99456 43223

**ಬೇಕಾಗಿದ್ದಾರೆ**
ರೆಸ್ಟೋರೆಂಟ್‌ನಲ್ಲಿ ಬಿಲ್ಲಿಂಗ್ ಮಾಡಲು ಮತ್ತು ಕ್ಯಾಷಿಯರ್ ಕೆಲಸಕ್ಕೆ ಕಂಪ್ಯೂಟರ್ ಜ್ಞಾನ ಇರುವವರು ಬೇಕಾಗಿದ್ದಾರೆ.
97316 45909
94489 47909

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**WANTED**
RETAIL EXPERIENCE
Required male or Female Store Manager, Branded Store,
Firstcry.com
C.G. Hospital Road, Davangere.
83108 00027, 97434 47019

**ಬೇಕಾಗಿದ್ದಾರೆ**
ARBAB appನಲ್ಲಿ ಮಾರ್ಕೆಟಿಂಗ್ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ. ನೇರ ಭೇಟಿ, ಭಾನುವಾರ 11 ಗಂಟೆಗೆ ಆಂಜನೇಯ ಬಡಾವಣೆ, ಭದ್ರ ಕಾಲೇಜ್ ಹತ್ತಿರ (ಆಧಾರ್ ಕಾರ್ಡ್ ಜೊತೆಗೆ ತನ್ನಿ)
87626 24197

**ಬೇಕಾಗಿವೆ**
ಪಿ. ಜಿ. ನಡೆಸಲು ಹಳೆಯ ಡಬಲ್ ಡೆಕ್ಕರ್ ಮಂಚಗಳು ಬೇಕಾಗಿವೆ.
ಸಂಪರ್ಕಿಸಿ :
98441 12457
97432 77880

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಸೇಲ್ಸ್ ಗಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ.
ಎಸ್.ಎಸ್. ಹೈಟೆಕ್ ಆಸ್ಪತ್ರೆ ರೋಡ್, ಜಯನಗರ 'ಬಿ' ಬ್ಲಾಕ್, ದಾವಣಗೆರೆ.
99861 62462

**FULLY AUTOMATIC**
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್
1000/- Rs. Off
ಸೇಲ್ಸ್, ಸರ್ವೀಸ್‌ಗಾಗಿ
ಮರುತ್ ಎಂಟರ್ ಪ್ರೈಸಸ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು, ಬಾಪೂಜಿ ಬ್ಯಾಂಕ್ ಹತ್ತಿರ, ದಾವಣಗೆರೆ.
98868 96574, 98458 67574

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವುಳ್ಳ ಮತ್ತು ಟ್ಯಾಲಿ ಗೊತ್ತಿರುವ ಹಾಗೂ Stock Maintanance ಮಾಡಲು ಬರುವ ಹುಡುಗಿಯರು ಬೇಕಾಗಿದ್ದಾರೆ.
ಕಶೆಟ್ಟರ್ ಇಂಡಸ್ಟ್ರೀಯಲ್ ಎಸೆನ್ಸಿಯಲ್ಸ್, ಲಾಯರ್ ರೋಡ್, ದಾವಣಗೆರೆ.

**ಮಾರಾಟಕ್ಕಿವೆ**
ನಮ್ಮಲ್ಲಿ ಊದಿನಕಟ್ಟಿ (ಅಗರಬತ್ತಿ) ಮಾಡಲು ಬೇಕಾದ ಮೆಷಿನ್ಸ್-3, ಮಿಕ್ಸಿಂಗ್ ಮಿಷಿನ್-1 ಮತ್ತು ಎಲ್ಲಾ ಸಾಮಗ್ರಿಗಳ ಸಹಿತ ಮಾರಾಟಕ್ಕಿವೆ.
9738022593
8892483443, 7975 732390

**ಶಾಪಿಂಗ್ ಕಾಂಪ್ಲೆಕ್ಸ್‌ಗಳು ಮಾರಾಟಕ್ಕಿವೆ**
ಅಳತೆ 30×50 ಚ.ಅ. ಆರ್‌ಎಂಸಿ ಲಿಂಕ್ ರಸ್ತೆ, 12ನೇ ಕ್ರಾಸ್ 'ಅಥಣಿ' ಕಾಂಪ್ಲೆಕ್ಸ್ ಪಕ್ಕದ ರಸ್ತೆ, ದಾವಣಗೆರೆ.
86601 25491, 98453 63900

**ಶ್ರೀ ಮಾರಿಕಾಂಬಾ ಫೈರ್‌ವುಡ್, ಸ್ಪ್ಲಿಟಿಂಗ್ ಸರ್ವೀಸ್**
ದಾವಣಗೆರೆ-ಹರಿಹರ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಮನೆ, ದೇವಸ್ಥಾನ, ಮಠ ಮತ್ತು ಕಾರ್ಖಾನೆಗಳಲ್ಲಿ ವಿವಿಧ ಅವಶ್ಯಕತೆಗಳಿಗಾಗಿ ಬಳಸುವ ಉರುವಲು ಸೌದೆ ಸೀಳುವ ಕೆಲಸವನ್ನು ತಮ್ಮ ಜಾಗಕ್ಕೆ ಬಂದು ಸೀಳಿ ಕೊಡಲಾಗುವುದು. ಸಂಪರ್ಕಿಸಿ :
87226 78999

**ನೀರಾವರಿ ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 6 ಕಿ.ಮೀ. ಹತ್ತಿರದ ಪುಟಗನಾಳ ಗ್ರಾಮಕ್ಕೆ ಹೊಂದಿಕೊಂಡಿರುವ ಕೆಂಪು ಮಸಾರಿ ಹೊಲ, ಅಡಿಕೆ ಗಿಡ ಹಾಕಲು ಸೂಕ್ತವಾದ 4 ಎಕರೆ 16 ಸೇಂಟ್ಸ್ ಜಮೀನಿದೆ. 1 ಬೋರ್ ಇದೆ.
90084 15137, 63609 35608

**ಮನೆ ಲೀಸ್‌ಗೆ ಇದೆ**
ಮೊದಲನೇ ಮಹಡಿಯಲ್ಲಿ ಬೋರ್‌ವೆಲ್ ಮುನ್ಸಿಪಲ್ ನೀರಿನ ಸೌಲಭ್ಯವಿರುವ 3 BHK ಮನೆ ಲೀಸ್‌ಗೆ ಇದೆ. #1299/49 ಬಿಜೆಎಂ ಸ್ಕೂಲ್ ಹಿಂಭಾಗ, ವಿಜಯ ನಗರ ಬಡಾವಣೆ, ಕೊಂಡಜ್ಜಿ, ದಾವಣಗೆರೆ.
78924 85581, 74064 14528

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**Shop for Sale**
Plumbing & Sanitary shop 30x40 (1200 sqft) Kalidasa Circle, Jayanagar, SS hospital Road, Davangere.
9353250075, 7676747642

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಹುಡುಗರು ಬೇಕಾಗಿದ್ದಾರೆ**
ಟೀ ಶಾಪಿನಲ್ಲಿ ಅನುಭವವುಳ್ಳ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
99800 32310

**ಬೇಕಾಗಿದ್ದಾರೆ**
ಅಕೌಂಟೆಂಟ್ ಕೆಲಸಕ್ಕೆ
ವಿದ್ಯಾರ್ಹತೆ : ಬಿ.ಕಾಂ. ಪಾಸಾಗಿರಬೇಕು & ಟ್ಯಾಲಿ ತಿಳಿದವರಾಗಿರಬೇಕು.
ಶ್ರೀ ದುರ್ಗ ಶ್ರೀ ಟಿಂಬರ್ಸ್
ಆರ್.ಎಂ.ಸಿ ರೋಡ್, ನ್ಯೂ ಬಂಬೂಬಜಾರ್, ದಾವಣಗೆರೆ.
63630 50554

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ಸಂಪರ್ಕಿಸಿ
81056 99985
89715 04492

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಇಂಧನ ಹಾಕಲು ಹಾಗೂ 2 ವೀಲರ್‌ಗಳಿಗೆ ಆಯಿಲ್ ಚೇಂಜ್ ಮಾಡಲು/ ಏರ್ ಹಾಕಲು ಯುವಕರು ಬೇಕಾಗಿದ್ದಾರೆ.
ಭಾರತ್ ಪೆಟ್ರೋಲಿಯಂ ಪೆಟ್ರೋಲ್ ಬಂಕ್, ಐಟಿಐ ಕಾಲೇಜ್ ಎದುರು, ಹದಡಿ ರಸ್ತೆ, ದಾವಣಗೆರೆ. ಸಂಪರ್ಕಿಸಿ :
72044 31117

**ಶ್ರೀ ಮಹಾಗಣಪತಿ ಶ್ರೀ ವೀರಭದ್ರೇಶ್ವರ ಸೇವಾ ಟ್ರಸ್ಟ್ (ರಿ.)**
ಎ ಬ್ಲಾಕ್, ಎಸ್.ಎಸ್. ಬಡಾವಣೆ, ಶಾಮನೂರು ರಸ್ತೆ, ದಾವಣಗೆರೆ-4.
ರಿ.ನಂ. 96/04-05. ದಿನಾಂಕ : 18.08.2024

**ಸರ್ವ ಸದ್ಭಕ್ತರಲ್ಲಿ ಮನವಿ**

ಈ ಮೂಲಕ ದೇವಸ್ಥಾನದ ಸದ್ಭಕ್ತರಿಗೆ ತಿಳಿಸುವುದೇನೆಂದರೆ, ಮೇಲ್ಕಂಡ ಶ್ರೀ ಮಹಾಗಣಪತಿ ಶ್ರೀ ವೀರಭದ್ರೇಶ್ವರ ಸೇವಾ ಟ್ರಸ್ಟ್‌ನ ಹೆಸರಿನಲ್ಲಿ ಯಾರೋ ಅನಾಮಧೇಯ ವ್ಯಕ್ತಿಗಳು ಚಂದಾ/ದೇಣಿಗೆಯನ್ನು ಪಡೆಯುತ್ತಿದ್ದಾರೆಂದು ಟ್ರಸ್ಟ್‌ನ ಗಮನಕ್ಕೆ ಬಂದಿದ್ದು, ಈ ಕುರಿತು ಟ್ರಸ್ಟ್ ಯಾವುದೇ ಭಕ್ತರ ಬಳಿ ಹೋಗಿ ಚಂದಾ/ದೇಣಿಗೆಯನ್ನು ಸಂಗ್ರಹಿಸುತ್ತಿರುವುದಿಲ್ಲ ಎಂದು ಈ ಮನವಿ ಮೂಲಕ ಟ್ರಸ್ಟ್‌ನ ವತಿಯಿಂದ ತಮಗೆಲ್ಲರಿಗೂ ತಿಳಿಯಪಡಿಸುತ್ತೇವೆ.

ಸದ್ಭಕ್ತರು ಸೇವಾ ಕಾರ್ಯಕ್ಕಾಗಿ ದೇಣಿಗೆ/ಚಂದಾ ಹಣವನ್ನು ನೀಡಲು ಇಚ್ಛಿಸಿದಲ್ಲಿ ದೇವಸ್ಥಾನದಲ್ಲಿಯೇ ಅರ್ಚಕರ ಬಳಿ ನೀಡಿ ರಸೀದಿ ಪಡೆದು ಕೊಳ್ಳತಕ್ಕದ್ದು, ಯಾರಾದರೂ ತಮ್ಮಲ್ಲಿಗೆ ಬಂದು ದೇಣಿಗೆ/ಚಂದಾ ಹಣವನ್ನು ಕೇಳಿದರೆ ದಯವಿಟ್ಟು ಟ್ರಸ್ಟ್‌ನ ಗಮನಕ್ಕೆ ತರಲು ಈ ಮೂಲಕ ಕೋರಿದೆ.

ಸಹಿ/- ಎಂ.ಆರ್. ವೀರಯ್ಯ, ಎಸ್.ಆರ್. ಚಂದ್ರಶೇಖರ್
ಅಧ್ಯಕ್ಷರು, ಕಾರ್ಯದರ್ಶಿ
ಶ್ರೀ ಮಹಾಗಣಪತಿ ಶ್ರೀ ವೀರಭದ್ರೇಶ್ವರ ಸೇವಾ ಟ್ರಸ್ಟ್
ಮೊ. : 9380600618, 8105225883

ತಾಲ್ಲೂಕು ಪಂಚಾಯಿತಿ ದಾವಣಗೆರೆ ಜಿಲ್ಲಾ ಪಂಚಾಯಿತಿ ದಾವಣಗೆರೆ

**ಗ್ರಾಮ ಪಂಚಾಯಿತಿ ಕಾರ್ಯಾಲಯ, ಹುಚ್ಚವ್ವನಹಳ್ಳಿ**

**ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಪ್ರಕಟಣೆ**

ಹುಚ್ಚವ್ವನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಟೆಂಡರ್ ನಲ್ಲಿನ ಷರತ್ತುಗಳ ಪ್ರಕಾರ 2024-25ನೇ ಸಾಲಿನ ಹುಚ್ಚವ್ವನಹಳ್ಳಿ ಗ್ರಾಮ ಪಂಚಾಯಿತಿಯ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈ ಕೆಳಕಂಡ ಸಂಖ್ಯೆಯ ಇ-ಟೆಂಡರ್ ಪ್ರಕಟಣೆಯಲ್ಲಿರುವ ಸಾಮಗ್ರಿ ಮತ್ತು ಸೇವೆಗಳನ್ನು ಒದಗಿಸಲು ಜಿಎಸ್‌ಟಿಯಲ್ಲಿ ನೋಂದಾಯಿತ ಅರ್ಹ ಹಾಗೂ ಇ-ಟೆಂಡರಗಾಗಿ ಇ-ಪ್ರಕ್ಯೂರ್‌ಮೆಂಟ್ ಸೆಲ್ ನಲ್ಲಿ ನೊಂದಾಯಿಸಲ್ಪಟ್ಟ ಸರಬರಾಜುದಾರರಿಂದ ಇಲಾಖೆ ನಿಯಮಾವಳಿ ಮೇರೆಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂ ವಾರು ಮತ್ತು ಸೇವಾವಾರು ಮತ್ತು ಟೆಂಡರ್ ಗಳನ್ನು Standered tender Documents for E-Procurment ನಮೂನೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಜಿ.ಎಸ್.ಟಿಯಲ್ಲಿ ಅಧಿಕೃತವಾಗಿ ಆಸಕ್ತ ಸಾಮಗ್ರಿ ಸರಬರಾಜುದಾರರು ಏಜೆನ್ಸಿಗಳು ಹಾಗೂ ಸೇವಾ ಪೂರೈಕೆದಾರರ ಏಜೆನ್ಸಿಗಳು ಇ-ಟೆಂಡರ್ ಪ್ರಕಟಣೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

**ಕಾಮಗಾರಿಗಳ ವಿವರ:** 1) ದಾವಣಗೆರೆ ತಾಲ್ಲೂಕಿನ ಹುಚ್ಚವ್ವನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹುಚ್ಚವ್ವನಹಳ್ಳಿ ಗ್ರಾಮದ ಎ ಕೆ ಕಾಲೋನಿಯ ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ ನಿರ್ವಹಣೆಗಾಗಿ ಇ-ಟೆಂಡರ್ ಸಂಖ್ಯೆ **RDPR/2024-25/IND4099** ಸಾಮಗ್ರಿ ಮೊತ್ತ 523251.49 ಇ.ಎಂ.ಡಿ. ಮೊತ್ತ 13100.00 2) ದಾವಣಗೆರೆ ತಾಲ್ಲೂಕಿನ ಹುಚ್ಚವ್ವನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹುಚ್ಚವ್ವನಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ ನಿರ್ವಹಣೆಗಾಗಿ ಇ-ಟೆಂಡರ್ ಸಂಖ್ಯೆ **RDPR/2024-25/IND4103** ಸಾಮಗ್ರಿ ಮೊತ್ತ 523251.49 ಇ.ಎಂ.ಡಿ. ಮೊತ್ತ 13100.00. 3 ದಾವಣಗೆರೆ ತಾಲ್ಲೂಕು ಹುಚ್ಚವ್ವನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕ್ಯಾತನಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ ನಿರ್ವಹಣೆಗಾಗಿ ಇ-ಟೆಂಡರ್ ಸಂಖ್ಯೆ **RDPR/2024-25/IND4105** ಸಾಮಗ್ರಿ ಮೊತ್ತ 523251.49 ಇ.ಎಂ.ಡಿ. ಮೊತ್ತ 13100.00 ಈ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಅಸಮಂಜಸ ಅಂಶಗಳು ಕಂಡುಬಂದಲ್ಲಿ ಸದರಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಕರೆಯುವ ಪ್ರಾಧಿಕಾರ ಹೊಂದಿರುತ್ತದೆ. ಹಾಗೂ ಸದರಿ ಸೇವಾ ಹಾಗೂ ಸಾಮಾಗ್ರಿ ಪೂರೈಕೆಯ ಒಪ್ಪಂದ ಮಾಡಿಕೊಂಡ ದಿನಾಂಕ:17-09-2024 ರಿಂದ 17-12-2024ರ ವರೆಗೆ ಜಾರಿಯಲ್ಲಿರುತ್ತದೆ. ಹಾಗೂ ನಮೂನೆಯಲ್ಲಿರುವ ಷರತ್ತುಗಳು ಕಡ್ಡಾಯವಾಗಿ ಅನ್ವಯವಾಗುತ್ತವೆ.

1) ಖಾಲಿ ಟೆಂಡರ್ ಅರ್ಜಿಗಳನ್ನು ಅನುಬಂಧ-1, ಅನುಬಂಧ-2 ಮತ್ತು ಅನುಬಂಧ-3ನ್ನು ಇ-ಪ್ರಕ್ಯೂರ್ಮೆಂಟ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ:-28-08-2024 ರಿಂದ 11-09-2024 ರಂದು ಸಾಯಂಕಾಲ 05 ಗಂಟೆಯೊಳಗೆ https:/kppp.karnataka.gov.in
2) ಇ-ಪೋರ್ಟಲ್ ನಲ್ಲಿ ಇಂಡೀಕರಿಸಲು ಕೊನೆಯ ದಿನಾಂಕ:12-09-2024 ಸಂಜೆ 05 ಗಂಟೆಯೊಳಗೆ.
3) ಇ-ಪೋರ್ಟಲ್ ನಲ್ಲಿ ದಾಖಲಾತಿಗಳ ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ:13-09-2024 ಸಂಜೆ 05-15 ಗಂಟೆಗೆ.
4) ಇ-ಪೋರ್ಟಲ್ ನಲ್ಲಿ ದಾಖಲಾತಿಗಳ/ಆರ್ಥಿಕ ಬಿಡ್ ಗಳನ್ನು ತೆರೆಯುವ ದಿನಾಂಕ:17-09-2024 ಸಂಜೆ 05-30 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ kppp.karnataka.gov.in ಸಂಪರ್ಕಿಸಬಹುದಾಗಿದೆ.

ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು,
ಗ್ರಾಮ ಪಂಚಾಯಿತಿ, ಹುಚ್ಚವ್ವನಹಳ್ಳಿ.

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2ಕೆಜಿ ಚೀಲಗಳು ರೂ. 25/- ಸ್ಥಳ : ದೊಡ್ಡಬಾತಿ
88920 08800

**WANTED**
Service Engineer, ITI Electronics, Freshers can aslo apply. Contact : Esskay Technology
98807 65334

**ERA GROUP OF COMPANIES**
CALL CENTRE
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
Only for Girls / Ladies,
Qualification : SSLC to Degree,
Salary - 7000 to 10000/-
ಸ್ಥಳ : KR Market, Davanagere
95350 51589, 78670 75786

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ತಕ್ಷಣ ಸೆಕ್ಯೂರಿಟಿ ಗಾರ್ಡ್/ Supevisor ಬೇಕಾಗಿದ್ದಾರೆ. 12 Hours Duty + ESI, PF Salary 9000-14000/-
91130 53483

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಅತೀ ಕಡಿಮೆ ಖರ್ಚಿನಲ್ಲಿ MBBS**
18 ರಿಂದ 28 ಲಕ್ಷದೊಳಗೆ ವಿದೇಶಗಳಲ್ಲಿ MBBS ಮಾಡಬಹುದು.
NEET SCORE SC, ST,OBC 129, GEN : 164.
98868 96574, 86602 35013

**ರಕ್ತ ದಾನ ಶ್ರೇಷ್ಠ ದಾನ**

**ಮಲೇಬೆನ್ನೂರು ಶ್ರೀ ಗಣೇಶ ಚಿತ್ರಮಂದಿರದ ಸ್ವತ್ತಿನ ಬಗ್ಗೆ**
**ಸಾರ್ವಜನಿಕರ ತಿಳುವಳಿಕೆಗಾಗಿ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಸಿ. ಕೊಟ್ರೇಶ್ ಇವರು ಮಲೇಬೆನ್ನೂರು ವಾಸಿಯಾದ ಡಿ.ಆರ್. ರಾಮಮೂರ್ತಿ ಇವರ ವಿರುದ್ಧ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಿರುವಂತಹ ಸ್ವತ್ತಿನ ಮೇಲೆ ಹರಿಹರದ ಘನ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಆರ್.ಎ.ನಂ. 32/2022 ರಡಿಯಲ್ಲಿ ಮೇಲ್ಮನವಿ ಚಾಲ್ತಿಯಲ್ಲಿರುತ್ತದೆ. ಸದರಿ ಮೇಲ್ಮನವಿಯಲ್ಲಿ ಎದುರುದಾರರಾಗಿರುವ ಮತ್ತು ಸ್ವತ್ತಿನ ಮಾಲೀಕರಾಗಿರುವ ಡಿ.ಆರ್. ರಾಮಮೂರ್ತಿಯವರು ದಾವಾ ಷೆಡ್ಯೂಲ್ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾರೆಂದು ತಿಳಿದುಬಂದಿರುತ್ತದೆ. ಆದ ಕಾರಣ ಸದರಿ ಷೆಡ್ಯೂಲ್ ಸ್ವತ್ತಿನ ಕುರಿತು ಯಾರೂ ಸಹ ಯಾವ ರೀತಿಯಲ್ಲಿಯೂ ವ್ಯವಹರಿಸಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

**ಷೆಡ್ಯೂಲ್ : ಹರಿಹರ ತಾಲ್ಲೂಕು ಈ ಹಿಂದೆ ಮಲೇಬೆನ್ನೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿದ್ದು, ಹಾಲಿ ಮಲೇಬೆನ್ನೂರು ಪುರ ಸಭೆಗೆ ಸೇರಿದ, ಮಲೇಬೆನ್ನೂರಿನ ಹರಿಹರ-ಶಿವಮೊಗ್ಗ ರಸ್ತೆಯಲ್ಲಿ ಇರುವ ಗಣೇಶ ಚಿತ್ರಮಂದಿರ ಮತ್ತು ಸದರಿ ಚಿತ್ರಮಂದಿರವಿರುವ ಜಾಗಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ಹರಿಹರ-ಶಿವಮೊಗ್ಗ ರಸ್ತೆ, ಪಶ್ಚಿಮಕ್ಕೆ : ಧರ್ಮಣ್ಣ ಇವರ ಸ್ವತ್ತು, ಉತ್ತರಕ್ಕೆ : ತಾಲ್ಲೂಕಿನ ಬೋರ್ಡ್‌ಗೆ ಸೇರಿದ ಸ್ವತ್ತು, ದಕ್ಷಿಣಕ್ಕೆ : ನಂದಿಗುಡಿ ರಸ್ತೆ.**

ದಿನಾಂಕ : 29.08.2024 ಸಹಿ/- ರುದ್ರಗೌಡ ಪಿ., ವಕೀಲರು
ಸ್ಥಳ : ಹರಿಹರ. ದೇವಸ್ಥಾನ ರಸ್ತೆ, ಹರಿಹರ. ಮೊ. : 9844358458

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**WANTED**
S.V.MARKETING DAVANGERE
* Marketing Executive
* Accountant
* godown Incharge
63620 23451, 97434 37003

**KAIDB**
Furniture Factory for Rent, Davanagere. 4000 Sqft.
98459 77475

**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ ಮನೋಜ್ ಕೆ.ಎಂ. ಬಿನ್ ಮಂಜುನಾಥ ದಾವಣಗೆರೆ ಇವರು ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು ಮಂಜುಳ.ಎನ್ ಕೋಂ ಎನ್.ಡಿ.ನರಸಿಂಹಯ್ಯ ಇವರಿಂದ ಖರೀದಿಸಲು ಇಚ್ಛಿಸಿದ್ದು, ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಹಕ್ಕು ಬಾಧ್ಯತೆಗಳು ಅಥವಾ ತಕರಾರು ಇದ್ದಲ್ಲಿ ಈ ಪ್ರಕಟಣೆಯಾದ 7 ದಿನಗಳೊಳಗಾಗಿ ತಕರಾರನ್ನು ದಾಖಲೆಗಳೊಂದಿಗೆ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾವುದೇ ಹಕ್ಕು ಭಾದ್ಯತೆ ಅಥವಾ ತಕರಾರು ಇರುವುದಿಲ್ಲ ಎಂದು ಪರಿಗಣಿಸಲಾಗುವುದು.

**ಷೆಡ್ಯೂಲ್ :**

ದಾವಣಗೆರೆ ತಾಲ್ಲೂಕು ಸಬ್‌ರಿಜಿಸ್ಟ್ರಾರ್ ಕಛೇರಿಯ ಅಧಿಕಾರಕ್ಕೆ ಸೇರಿದ, ದಾವಣಗೆರೆ ನಗರ ಸರಹದ್ದಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು ಆವರಗೆರೆ ಗ್ರಾಮದ ರೀ ಸರ್ವೆ ನಂ.199/3 ವಿಸ್ತೀರ್ಣ 03-00 ಗುಂಟೆ ಜಮೀನು ಈ ಹಿಂದೆ ವಾಸೋಪಯೋಗಕ್ಕಾಗಿ ಚಿತ್ರದುರ್ಗ ವಿಶೇಷ ಜಿಲ್ಲಾಧಿಕಾರಿಗಳವರಿಂದ ಅಧಿಕೃತ ಜ್ಞಾಪನ ಸಂಖ್ಯೆ ಎಎಲ್‌ಎನ್/ ಎಸ್‌ಆರ್:177/85-86 ದಿನಾಂಕ:16.12.1985 ರಂದು ಅಲಿನೇಷನ್ ಆಗಿದ್ದು, ನಂತರ ಸದರಿ ಪ್ರದೇಶದಲ್ಲಿ ವಿಂಗಡಿಸಿರುವ ಸೈಟ್ ಪ್ಲಾನನ್ನು ದಾವಣಗೆರೆ ನಗರ ಯೋಜನಾ ಪ್ರಾಧಿಕಾರ ಇವರಿಂದ ನಂ. 2175/84-85 ದಿನಾಂಕ:27.12.1985ರ ಪ್ರಕಾರ ಅಂತಿಮ ವಸತಿ ವಿನ್ಯಾಸ ಅನುಮೋದನೆಯಾಗಿರುವ ಪ್ಲಾನ್‌ನಲ್ಲಿ ಕಂಡ ಸೈಟುಗಳಿಗೆ ದಾವಣಗೆರೆ ಮಹಾನಗರ ಪಾಲಿಕೆಯ ಆವರಗೆರೆ ವಿಭಾಗದಲ್ಲಿ ಡೋರ್ ನಂಬರ್ ಸಹಾ ದಾಖಲಾಗಿರುವ 'ಶ್ರೀ ರಾಘವೇಂದ್ರ ಬಡಾವಣೆ' ಯಲ್ಲಿರುವ ಸೈಟುಗಳ ಪೈಕಿ ಸೈಟು ನಂ. 78, ಡೋರ್ ನಂ. 940/78, ಇ-ಸ್ವತ್ತು ನಂ. 26-4-795-752, ಅಳತೆ ಪೂರ್ವ-ಪಶ್ಚಿಮ 9.144018 mtr ಉತ್ತರ-ದಕ್ಷಿಣ 12.192024mtr ಮತ್ತು ಸೈಟು. ನಂ.79, ಡೋರ್ ನಂ. 941/79 ಇ-ಸ್ವತ್ತು ನಂ. 26-4-795-750, ಪೂರ್ವ-ಪಶ್ಚಿಮ 9.144018mtr (12.192024 +13.594107)/2mtr ವುಳ್ಳ ಎರಡು ಸೈಟುಗಳಿಗೆ ಒಟ್ಟಿಗೆ ಚಕ್ಕುಬಂದಿ : ಪೂರ್ವ - 30 ಅಡಿ ರೋಡ್, ಪಶ್ಚಿಮ- ಸೈಟ್‌ನಂ.70 & 71, ಉತ್ತರ - ರೋಡ್, ದಕ್ಷಿಣ-ಸೈಟ್ ನಂ.77

**ಕೆ. ಬಿ. ಶೈಲಶ್ರೀ, ವಕೀಲರು, ನಂ. 1963,**
**ಎಸ್.ಎಸ್. ಲೇ ಔಟ್ 'ಎ' ಬ್ಲಾಕ್, ದಾವಣಗೆರೆ. ಮೊ. : 94486 58502**

## ಸಂಕ್ಷಿಪ್ತ ಸುದ್ದಿ

**ಅತ್ಯಾಚಾರ ವಿರೋಧಿ ಮಸೂದೆಗಾಗಿ ಪಶ್ಚಿಮ ಬಂಗಾಳ ಸರ್ಕಾರದಿಂದ ವಿಶೇಷ ಅಧಿವೇಶನ**

ಕೊಲ್ಕತಾ : ಅತ್ಯಾಚಾರಿಗಳಿಗೆ ಮರಣ ದಂಡನೆ ವಿಧಿಸುವ ಕುರಿತ ಮಸೂದೆ ಜಾರಿಗೆ ತರುವ ಸಲುವಾಗಿ ಪಶ್ಚಿಮ ಬಂಗಾಳ ಸರ್ಕಾರ ಸೋಮವಾರದಿಂದ ಎರಡು ದಿನಗಳ ವಿಶೇಷ ವಿಧಾನಸಭಾ ಅಧಿವೇಶನ ಕರೆದಿದೆ. ವಿಧಾನಸಭೆಯಿಂದ ಅಂಗೀಕಾರಗೊಂಡ ಈ ಮಸೂದೆಗೆ ರಾಜ್ಯಪಾಲರು ಅನುಮತಿ ನೀಡದೇ ಇದ್ದರೆ ಪ್ರತಿಭಟನೆ ನಡೆಸುವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದರು..

**ಮುಸ್ಲಿಮರ ಮದುವೆ ನೋಂದಣಿ ಮಸೂದೆ ಅಂಗೀಕಾರ**

ಗುವಾಹತಿ : ಮುಸ್ಲಿಮರ ಮದುವೆ ಹಾಗೂ ವಿಚ್ಛೇದನದ ನೋಂದಣಿ ಕಡ್ಡಾಯಗೊಳಿಸುವ ಮಸೂದೆಗೆ ಅಸ್ಸಾಂ ವಿಧಾನಸಭೆ ಒಪ್ಪಿಗೆ ನೀಡಿದೆ.

**ವೈ.ಎಸ್.ಆರ್.ಸಿ.ಪಿ. ಇಬ್ಬರು ರಾಜ್ಯಸಭಾ ಸದಸ್ಯರ ರಾಜೀನಾಮೆ**

ನವದೆಹಲಿ : ವೈ.ಎಸ್.ಆರ್.ಸಿ.ಪಿ.ಯ ಇಬ್ಬರು ರಾಜ್ಯಸಭಾ ಸದಸ್ಯರಾದ ಬೀಢಾ ಮಸ್ತಾನ್ ರಾವ್ ಜಾಧವ್ ಹಾಗೂ ವೆಂಕಟರಮಣ ರಾವ್ ಮೊಪಿದೇವಿ ಅವರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಇದರಿಂದಾಗಿ ರಾಜ್ಯಸಭೆಯಲ್ಲಿ ಪಕ್ಷದ ಸಂಖ್ಯಾಬಲ 9ಕ್ಕೆ ಕುಸಿದಿದೆ.

**ಆರ್.ಜಿ. ಕರ್ ಆಸ್ಪತ್ರೆಯ ಹೊಸ ವಿವಾದ**

ಕೊಲ್ಕತಾ : ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ವೈದ್ಯೆ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಸ್ಪತ್ರೆಯ ಅಧಿಕಾರಿಗಳು ವೈದ್ಯೆಯ ಪೋಷಕರಿಗೆ ಕರೆ ಮಾಡಿರುವ ಆಡಿಯೋಗಳು ಸೋರಿಕೆಯಾಗಿವೆ. ಆಸ್ಪತ್ರೆಯ ಅಧಿಕಾರಿಗಳು ಪ್ರಕರಣವನ್ನು ಮರೆಮಾಚಲು ಪ್ರಯತ್ನ ನಡೆಸಿದ್ದು ಇದರಿಂದ ಬಯಲಾಗಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ. ವೈದ್ಯೆ ಸಾವನ್ನು ಆತ್ಮಹತ್ಯೆ ಎಂದು ಹೇಳಿರುವುದು ಆಡಿಯೋದಲ್ಲಿದೆ.

**ಭಾರತದಲ್ಲಿ ಸೌತ್‌ಹ್ಯಾಂಪ್ಟನ್ ಕ್ಯಾಂಪಸ್**

ನವದೆಹಲಿ : ಬ್ರಿಟನ್‌ನ ಸೌತ್‌ಹ್ಯಾಂಪ್ಟನ್ ವಿಶ್ವವಿದ್ಯಾಲಯ ಭಾರತದಲ್ಲಿ ತನ್ನ ಕ್ಯಾಂಪಸ್ ತೆರೆದಿದೆ. ನೂತನ ಶಿಕ್ಷಣ ನೀತಿಯ ಅನ್ವಯ ಕ್ಯಾಂಪಸ್ ತೆರೆದ ಮೊದಲ ವಿಶ್ವವಿದ್ಯಾಲಯ ಇದಾಗಿದೆ. ದೆಹಲಿಯಲ್ಲಿ ಕ್ಯಾಂಪಸ್ ಸ್ಥಾಪಿಸಲಾಗುವುದು.

**ಪಾಕಿಸ್ತಾನದ ಸಭೆಗಾಗಿ ಮೋದಿಗೆ ಆಹ್ವಾನ**

ಇಸ್ಲಾಮಾಬಾದ್ : ಬರುವ ಅಕ್ಟೋಬರ್‌ನಲ್ಲಿ ಪಾಕಿಸ್ತಾನದಲ್ಲಿ ನಡೆಯಲಿರುವ ಶಾಂಘೈ ಸಹಕಾರಿ ಸಂಘಟನೆಯ ಸಭೆಯಲ್ಲಿ ಪಾಲ್ಗೊಳ್ಳಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪಾಕಿಸ್ತಾನ ಆಹ್ವಾನ ನೀಡಿದೆ.

**ಬಾಂಗ್ಲಾ ಪ್ರತಿಭಟನೆ ವೇಳೆ ಸಾವಿರಕ್ಕೂ ಹೆಚ್ಚು ಸಾವು**

ಢಾಕಾ : ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆಯ ವೇಳೆ ಸಾವಿರಕ್ಕೂ ಹೆಚ್ಚು ಪ್ರತಿಭಟನಾಕಾರರು ಸಾವನ್ನಪ್ಪಿದ್ದಾರೆ ಎಂದು ಹಂಗಾಮಿ ಸರ್ಕಾರದ ಸಲಹೆಗಾರರೊಬ್ಬರು ಹೇಳಿದ್ದಾರೆ. ಪ್ರತಿಭಟನೆಯ ವೇಳೆ ಪೊಲೀಸರ ಗುಂಡಿಗೆ ಸಿಲುಕಿ 400ಕ್ಕೂ ಹೆಚ್ಚು ಜನ ದೃಷ್ಟಿ ಕಳೆದುಕೊಂಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

## ಜಿಗಳಿ : ಶಿಕ್ಷಕ ನಾಗೇಶ್‌ಗೆ ಬೀಳ್ಕೊಡುಗೆ

ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ ಜಿ.



ನಾಗೇಶ್ ಅವರು ನಾಳೆ ಸೇವೆಯಿಂದ ವಯೋ ನಿವೃತ್ತಿ ಹೊಂದುತ್ತಿದ್ದು, ಈ ಹಿನ್ನೆಲೆಯಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ಮಹೇಶ್ವರ ಸಮುದಾಯ ಭವನದಲ್ಲಿ ಎಸ್‌ಡಿಎಂಸಿ ಸಮಿತಿ, ಶಿಕ್ಷಕ ವೃಂದ ಮತ್ತು ಗ್ರಾಮಸ್ಥರ ವತಿಯಿಂದ ಜಿ.ನಾಗೇಶ್ ಅವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಎಸ್‌ಡಿಎಂಸಿ ಅಧ್ಯಕ್ಷ ಗಂಗಾಧರಚಾರಿ ತಿಳಿಸಿದ್ದಾರೆ.

# ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಅವಕಾಶ

ದಾವಣಗೆರೆ, ಆ. 29 - ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ಭಾವಚಿತ್ರವಿರುವ ಮತದಾರರ ಪಟ್ಟಿಯ ಸಂಕ್ಷಿಪ್ತ ವಿಶೇಷ ಪರಿಷ್ಕರಣೆಗೆ ಅವಕಾಶ ಕಲ್ಪಿಸಿದ್ದು, 2025 ರ ಜನವರಿ 1 ಕ್ಕೆ 18 ವರ್ಷ ತುಂಬುವವರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಬಹುದಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕುರಿತು ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ನಿನ್ನೆ ನಡೆಸಿದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ 17 ವರ್ಷ ತುಂಬಿ 18 ನೇ ವರ್ಷಗಳಲ್ಲಿರುವ ಯುವ ಮತದಾರರು ಬರುವ ಜನವರಿ 1 ಕ್ಕೆ 18 ವರ್ಷ ತುಂಬುವ ಎಲ್ಲಾ ಹೊಸ ಮತದಾರರು ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೊಂದಾಯಿಸಬಹುದಾಗಿದೆ.

ಹೊಸದಾಗಿ ನೋಂದಾಯಿಸಲು ನಮೂನೆ-6, ಹೆಸರು ಕೈಬಿಡಲು ನಮೂನೆ-7,



ತಿದ್ದುಪಡಿ, ಸ್ಥಳಾಂತರ, ವಿಶೇಷ ಚೇತನರ ಗುರುತಿಸುವಿಕೆಗೆ ನಮೂನೆ-8, ವಿದೇಶದಲ್ಲಿ ನೆಲೆಸಿರುವ ಭಾರತೀಯವರು ನಮೂನೆ-6ಎ ರಡಿ ವಿವರವನ್ನು ಭರ್ತಿ ಮಾಡಿ ಮತದಾರರ ನೋಂದಣಾಧಿಕಾರಿ ಗಳಿಗೆ ನೀಡಬೇಕು.

ವೋಟರ್ ಹೆಲ್ಪ್ ಲೈನ್ ಆಪ್ ಅಥವಾ http;//voters.eci.gov.in/ ವೆಬ್‌ಸೈಟ್ ಮೂಲಕವೂ ನೋಂದಣಿ, ತಿದ್ದುಪಡಿ, ವರ್ಗಾವಣೆಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಇದೆ. ದಾವಣಗೆರೆ ಮತ್ತು ಹೊನ್ನಾಳಿ ಉಪವಿಭಾಗಾಧಿಕಾರಿಗಳು, ದಾವಣಗೆರೆ ಮಹಾನಗರ ಪಾಲಿಕೆ ಆಯುಕ್ತರು ಮತದಾರರ ನೊಂದಣಾಧಿಕಾರಿಗಳಾಗಿದ್ದು ಆಯಾ ತಾಲ್ಲೂಕಿನ ತಹಶೀಲ್ದಾರರು, ಪಾಲಿಕೆ ಪರಿಷತ್ ಕಾರ್ಯದರ್ಶಿ ಸಹಾಯ ಮತದಾರರ ನೋಂದಣಾಧಿಕಾರಿಗಳಾಗಿರುತ್ತಾರೆ.

ಪರಿಷ್ಕರಣೆ ಅವಧಿಯಲ್ಲಿ ಮತಗಟ್ಟೆ ಅಧಿಕಾರಿಗಳು ಮನೆ ಮನೆ ಭೇಟಿ ನೀಡಿ ಸಂಕ್ಷಿಪ್ತ ಪರಿಷ್ಕರಣೆ ನಡೆಸುವರು. ಈಗಾಗಲೇ ವರ್ಗಾವಣೆಯಿಂದ ತೆರವಾಗಿರುವ ಬಿಎಲ್‌ಓಗಳನ್ನು ಸಹ ನೇಮಕ ಮಾಡಲಾಗಿದೆ. ಭಾವಚಿತ್ರ ಸ್ಪಷ್ಟವಾಗಿ ಕಾಣದಿರುವ ಪಟ್ಟಿಯನ್ನೂ ಸಹ ಪರಿಷ್ಕರಿಸಲಿದ್ದು ಅಂತಹ ಮತದಾರರನ್ನು ಸಂಪರ್ಕಿಸಲಾಗುತ್ತದೆ. ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಏಜೆಂಟರ ಮೂಲಕ ಸಂಕ್ಷಿಪ್ತ ಪರಿಷ್ಕರಣೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ತಿಳಿಸಿದರು.

ಚುನಾವಣಾ ಆಯೋಗದ ನಿರ್ದೇಶನದನ್ವಯ ಪ್ರತಿ ಮತಗಟ್ಟೆಗಳಲ್ಲಿ ಕನಿಷ್ಠ 300 ರಿಂದ 1500 ಮತದಾರರನ್ನು ಹೊಂದಿರುತ್ತದೆ. ಈ ಸಂಖ್ಯೆ ಕಡಿಮೆ ಆದಲ್ಲಿ ಪರಿಷ್ಕರಣೆ ಮತ್ತು ಹೆಚ್ಚಾದಲ್ಲಿ ಹೆಚ್ಚುವರಿ ಮತಗಟ್ಟೆ ಸ್ಥಾಪನೆ ಮಾಡಲು ಪರಿಶೀಲಿಸಲಿದ್ದು ಈ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳ ಗಮನಕ್ಕೆ ತರಲಾಗುತ್ತದೆ ಎಂದರು.

**ಸಂಪರ್ಕಿಸಬೇಕಾದ ತಹಶೀಲ್ದಾರರ ದೂರವಾಣಿ;**

ಜಗಳೂರು 9164687171, ದಾವಣಗೆರೆ 9108268759, ಹರಿಹರ 9880994147, ಪಾಲಿಕೆ ಕಂದಾಯಾಧಿಕಾರಿ 9901768584, ಪರಿಷತ್ ಕಾರ್ಯದರ್ಶಿ 7892012952, ಚನ್ನಗಿರಿ 9880383519, ಹೊನ್ನಾಳಿ 9480545472 ಮೊಬೈಲ್‌ಗೆ ಕರೆ ಮಾಡಬಹುದಾಗಿದೆ.

**ಪರಿಷ್ಕರಣೆ ಅವಧಿ ;** ಮತದಾರರ ಪಟ್ಟಿಯ ಕರಡು ಪಟ್ಟಿಯನ್ನು 2024 ರ ಅಕ್ಟೋಬರ್ 29 ರಂದು ಪ್ರಕಟಿಸಲಾಗುತ್ತದೆ. ಆಕ್ಷೇಪಣೆಗಳಿದ್ದಲ್ಲಿ 2024 ರ ನವೆಂಬರ್ 28 ರೊಳಗಾಗಿ ಸಲ್ಲಿಸಬಹುದಾಗಿದೆ. ಈ ಅವಧಿಯಲ್ಲಿನ ಎರಡನೇ ಶನಿವಾರ, ಭಾನುವಾರ ರಜಾ ದಿನಗಳಂದು ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತದೆ. ಸಲ್ಲಿಕೆಯಾಗುವ ಎಲ್ಲಾ ಆಕ್ಷೇಪಣೆಗಳನ್ನು 2024 ರ ಡಿಸೆಂಬರ್ 24 ರೊಳಗಾಗಿ ಇತ್ಯರ್ಥ ಮಾಡಿ 2025 ರ ಜನವರಿ 6 ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಚುನಾವಣಾ ತಹಶೀಲ್ದಾರ್ ಕವಿರಾಜ್ ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಉಪಸ್ಥಿತರಿದ್ದರು.

# ರೈತನಿಗೆ ಕಿರುಕುಳ ಆರೋಪ

## ರೈತ ಸಂಘದಿಂದ ಜಲಸಂಪನ್ಮೂಲ ಕಚೇರಿ ಮುತ್ತಿಗೆ



ದಾವಣಗೆರೆ, ಆ. 29 - ಪೈಪ್‌ಲೈನ್ ಅಳವಡಿಕೆಗೆ ಅಡ್ಡಿಪಡಿಸಿ, ರೈತ ಮುಖಂಡನ ಆರೋಗ್ಯ ಹದಗೆಡುವಂತೆ ಮಾಡಿದ್ದಾರೆಂದು ಆರೋಪಿಸಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಕಾರ್ಯಕರ್ತರು ಗುರುವಾರ ದಿಢೀರ್ ಜಲಸಂಪನ್ಮೂಲ ಇಲಾಖೆ ಕಚೇರಿ ಮುತ್ತಿಗೆ ಹಾಕಿ, ಪ್ರತಿಭಟಿಸಿದರು.

ನಗರದ ಹದಡಿ ರಸ್ತೆಯಲ್ಲಿರುವ ಕಚೇರಿಗೆ ಮುತ್ತಿಗೆ ಹಾಕಿದ ಸಂಘದ ಪದಾಧಿಕಾರಿಗಳು, ಮುಖಂಡರು ಇಲಾಖೆಯ ಇಇ ಮಂಜುನಾಥ, ಎಇಇ ವಿಜಯ್ ಅವರ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ಮಾತನಾಡಿದ ಸಂಘದ ರಾಜ್ಯ ಕಾರ್ಯದರ್ಶಿ ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ನಲ್ಕುದುರೆ ಚನ್ನಬಸಪ್ಪ ಅವರ ಹೊಲದ ಪಕ್ಕದಲ್ಲಿಯೇ ರಸ್ತೆ ಹೋಗಿದೆ. ಈ ಹಿಂದೆ ಹಳೆ ರಸ್ತೆ ಇದ್ದ ಜಾಗದಲ್ಲಿ ಇದೀಗ ಹೊಸ ರಸ್ತೆ ನಿರ್ಮಾಣ ಮಾಡಿದ್ದಾರೆ. ರಸ್ತೆ ಅಗೆದು ಪೈಪ್‌ಲೈನ್ ಹಾಕಿ ಚನ್ನಬಸಪ್ಪನವರ ಜಮೀನಿಗೆ ನೀರು ಹರಿಸಬೇಕಿತ್ತು. ಇದಕ್ಕೆ ಅಡ್ಡಿಪಡಿಸಿದ ಇಲಾಖೆಯ ಅಧಿಕಾರಿಗಳು ಪದೇ ಪದೇ ಚನ್ನಬಸಪ್ಪ ಅವರಿಗೆ ಕಿರುಕುಳ ನೀಡುತ್ತಾ ಬಂದಿದ್ದಾರೆ.

ನೀರಿಲ್ಲದೆ ಬೆಳೆ ಬೆಳೆಯಲು ಆಗದು. ಅಲ್ಲಿಗೆ ನಮ್ಮ ಭೂಮಿ ಬೀಳು ಬೀಳಲಿವೆ ಎಂಬ ಆತಂಕದಿಂದ ಚನ್ನಬಸಪ್ಪ ಅವರ ಆರೋಗ್ಯ ಹದಗೆಟ್ಟಿತು. ರಕ್ತದೊತ್ತಡ ತೀರಾ ಕೆಳಮಟ್ಟಕ್ಕೆ ಇಳಿದು, ಸಾವು - ಬದುಕಿನ ಮಧ್ಯೆ ಹೋರಾಟ ಮಾಡುವಂತಾಯಿತು. ಇದಕ್ಕೆ ಅಧಿಕಾರಿಗಳು ಹೊಣೆ ಎಂದರು.

ಸಂಘದ ಜಿಲ್ಲಾಧ್ಯಕ್ಷ ಶತಕೋಟಿ ಬಸಪ್ಪ ಮಾತನಾಡಿ, ರೈತರಿಗೆ ಕಿರುಕುಳ ನೀಡಿದರೆ ಏನಾಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನ. ಚನ್ನಬಸಪ್ಪ ಅವರ ವಿಷಯ ತಿಳಿದು ನಮ್ಮ ಸಂಘದ ಪದಾಧಿಕಾರಿಗಳು ಧೈರ್ಯ ತುಂಬಿದ್ದರಿಂದ ಇಂದು ಅವರು ಆರೋಗ್ಯವಾಗಿ ಇದ್ದಾರೆ. ಇಲ್ಲದೇ ಹೋದರೆ ಅವರ ಜೀವಕ್ಕೆ ಅಪಾಯ ಇತ್ತು. ಇನ್ನಾದರೂ ಅಧಿಕಾರಿಗಳು ಇಂತಹ ಕಾರ್ಯ ಕೈಬಿಡಬೇಕು ಎಂದರು.

ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಚಿನ್ನಸಮುದ್ರ ಶೇಖರ್‌ನಾಯ್ಕ ಮಾತನಾಡಿ, ತಕ್ಷಣ ಅಧಿಕಾರಿಗಳು ಪೈಪ್‌ಲೈನ್ ಹಾಕಲು ಅಗತ್ಯ ಅನುಮತಿ ನೀಡಬೇಕು ಎಂದರು. ಸತತ ಒಂದು ತಾಸಿನ ಪ್ರತಿಭಟನೆ ಬಳಿಕ ಅಧಿಕಾರಿಗಳು ರೈತ ಸಂಘದ ಬೇಡಿಕೆಗೆ ಸಮ್ಮತಿ ಸೂಚಿಸಿದರು. ಇದರೊಂದಿಗೆ ರೈತ ನಾಯಕರು ಪ್ರತಿಭಟನೆ ಹಿಂಪಡೆದರು.

ಸಂಘದ ದಾವಣಗೆರೆ ತಾಲ್ಲುಕು ಅಧ್ಯಕ್ಷ ಮಂಡ್ಲೂರು ವಿಶ್ವನಾಥ್, ಚನ್ನಗಿರಿ ತಾಲ್ಲೂಕು ಅಧ್ಯಕ್ಷ ಎಲೋದಹಳ್ಳಿ ಕಾಳೇಶ್, ಮುಖಂಡರಾದ ದಾಗಿನಕಟ್ಟೆ ಬಸಪ್ಪ, ಮಾಸಡಿ ಭರಮಪ್ಪ, ಶ್ರೀನಿವಾಸ್ ನೇತೃತ್ವ ವಹಿಸಿದ್ದರು.

## ಕೃಷಿ ಪಂಪ್ ಸೆಟ್‌ಗಳಿಗೆ ಆಧಾರ್ ನಂಬರ್ ಅಳವಡಿಕೆ

ದಾವಣಗೆರೆ, ಆ.29- ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಆಧಾರ್ ನಂಬರ್ ಅಳವಡಿಕೆಗೆ ರಾಜ್ಯ ರೈತ ಸಂಘ ಹಸಿರುಸೇನೆ ಹುಚ್ಚವ್ವನಹಳ್ಳಿ ಮಂಜುನಾಥ್ ಬಣ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಂಘಟನೆಯ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಈ ಹಿಂದಿನ ಮತ್ತು ಪ್ರಸ್ತುತ

**ರೈತ ಸಂಘದ ವಿರೋಧ**

ಸರ್ಕಾರಗಳು ಒಂದಲ್ಲ ಒಂದು ರೂಪದಲ್ಲಿ ಕೃಷಿ ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಸುವ ಹುನ್ನಾರ ನಡೆಸುತ್ತಿದ್ದು,ಯಾವುದೇ ಕಾರಣಕ್ಕೂ ಇದಕ್ಕೆ ಅವಕಾಶ ನೀಡುವುದಿಲ್ಲ ಎಂದು ಮಂಜುನಾಥ್ ತಿಳಿಸಿದ್ದಾರೆ.

ಹಿಂದಿನ ರಾಜ್ಯ ಸರ್ಕಾರದ ಅವಧಿಯಲ್ಲಿ ಪ್ರತಿ ರೈತನಿಗೆ 10 ಹೆಚ್‌ಪಿ ವರೆಗೂ ಮಾತ್ರ ಉಚಿತ ವಿದ್ಯುತ್ ನೀಡಲಾಗುವುದು. ಉಳಿದ ವಿದ್ಯುತ್ ಬಳಕೆಗೆ ಶುಲ್ಕ ಬರಿಸಬೇಕು ಎಂದು ಕಾಯಿದೆ ಜಾರಿಗೆ ಮಾಡಲಾಗಿತ್ತು. ಅದರ ಭಾಗವಾಗಿ ಅಂದಿನ ಸರ್ಕಾರ ರೈತರ ಎಲ್ಲಾ ಕೃಷಿ ಪಂಪ್ ಸೆಟ್‌ಗಳಿಗೆ ಆಧಾರ್ ಜೋಡಣೆಯಾಗಬೇಕೆಂದು ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಂಡು ಎಲ್ಲಾ ಕೃಷಿ ಪಂಪ್‌ಸೆಟ್‌ಗಳ ಆರ್‌ಆರ್ ನಂಬರ್‌ಗಳಿಗೆ ಆಧಾರ್ ಕಾರ್ಡ್ ಜೋಡಣೆ ಮಾಡುವ ಸಂಚು ರೂಪಿಸಿತ್ತು. ಇದರ ಮುಖ್ಯ ಉದ್ದೇಶ ಒಬ್ಬ ರೈತನಿಗೆ 10 ಹೆಚ್‌ಪಿ ವರೆಗೂ ಮಾತ್ರ ಉಚಿತ ವಿದ್ಯುತ್ ನೀಡುವುದು ಹಾಗೂ ಉಳಿದ ವಿದ್ಯುತ್ ಬಳಕೆಗೆ ಶುಲ್ಕ ನಿಗಧಿಪಡಿಸುವುದೇ ಆಗಿದೆ ಎಂದು ಮಂಜುನಾಥ್ ಆರೋಪಿಸಿದ್ದಾರೆ.

## ಸ್ವನಿಧಿಯಲ್ಲಿ ಪಾಲಿಕೆ ಸಾಧನೆಗೆ ಪ್ರಶಸ್ತಿ



ದಾವಣಗೆರೆ, ಆ. 29 – ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಹಾಗೂ ಕರ್ನಾಟಕ ಕೌಶಲ್ಯಾಭಿವೃದ್ಧಿ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿರುವ ಪಿಎಂ ಸ್ವ-ನಿಧಿ ಯೋಜನೆ ಜಾರಿಗಾಗಿ ದಾವಣಗೆರೆ ಪಾಲಿಕೆ ಹಾಗೂ ಹರಿಹರ ನಗರಸಭೆಗಳು ಪ್ರಶಸ್ತಿ ಪಡೆದುಕೊಂಡಿವೆ.

ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ನೀಡುವ ಸರ್ಕಾರದ ಯೋಜನೆಯಾದ ಪಿಎಂ - ಸ್ವನಿಧಿಯಲ್ಲಿ ದಾವಣಗೆರೆ ಮಹಾನಗರ ಪಾಲಿಕೆಯು ರಾಜ್ಯದಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದೆ. ಹರಿಹರ ನಗರಸಭೆಯು ಹತ್ತನೇ ಸ್ಥಾನದಲ್ಲಿದೆ.

ಈ ಯೋಜನೆಯ ಮೂಲಕ ಜಿಲ್ಲೆಯ ಒಟ್ಟಾರೆ 16 ಸಾವಿರ ಬೀದಿ ವ್ಯಾಪಾರಸ್ಥರಿಗೆ ಸಾಲ ನೀಡಲಾಗಿದೆ. ದಾವಣಗೆರೆ ನಗರ ಪಾಲಿಕೆಯು ಗುರಿ ಮೀರಿ ಶೇ.117ರ ಸಾಧನೆ ಮಾಡಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಶರಣ್ ಪ್ರಕಾಶ್ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಕಳೆದ ವಾರ ಬೆಂಗಳೂರಿನ ವಿಕಾಸಸೌಧದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಪಾಲಿಕೆ ಆಯುಕ್ತೆ ರೇಣುಕಾ ಅವರು ಪ್ರಶಸ್ತಿ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಅಭಿವೃದ್ಧಿ ಆಯುಕ್ತರಾದ ಉಮಾ ಮಹಾದೇವನ್, ಅಭಿಯಾನದ ನಿರ್ದೇಶಕಿ ಪಿ. ವಿದ್ಯಾ, ದಾವಣಗೆರೆ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಇಲಾಖೆ ಅಧಿಕಾರಿ ಏಕನಾಥ್ ಹಾಗೂ ಜಿಲ್ಲೆಯ ಅಭಿಯಾನ ವ್ಯವಸ್ಥಾಪಕ ಡಾ. ಬಸವರಾಜ್ ಉಪಸ್ಥಿತರಿದ್ದರು.

## ಮಲೇಬೆನ್ನೂರು : ಇಂದು ಪುರಸಭೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ

ಇಲ್ಲಿನ ಪುರಸಭೆಯ ಅಧ್ಯಕ್ಷ - ಉಪಾಧ್ಯಕ್ಷ ಸ್ಥಾನಗಳಿಗೆ ಇಂದು ಚುನಾವಣೆ ನಡೆಯಲಿದ್ದು, ಚುನಾವಣಾಧಿಕಾರಿಯಾಗಿ ತಹಶೀಲ್ದಾರ್ ಗುರುಬಸವರಾಜ್ ಕಾರ್ಯನಿರ್ವಹಿಸಲಿದ್ದಾರೆ.

ಅಧ್ಯಕ್ಷ ಸ್ಥಾನ ಎಸ್ಟಿ ಮಹಿಳೆಗೆ ಮತ್ತು ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿದೆ. ಇಲ್ಲಿ ಎಸ್ಟಿ ಮಹಿಳಾ ಸದಸ್ಯರು ಯಾರೂ ಇಲ್ಲದ ಕಾರಣ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುವ ಸಾಧ್ಯತೆ ಇಲ್ಲ ಎನ್ನಲಾಗಿದೆ.

ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿರುವುದರಿಂದ ಒಟ್ಟು 11 ಮಹಿಳೆಯರು ಇದ್ದಾರೆ. ಪುರಸಭೆಯಲ್ಲಿ ಕಾಂಗ್ರೆಸ್ ಬಹುಮತ ಹೊಂದಿರುವುದರಿಂದ ಸಹಜವಾಗಿಯೇ ಉಪಾಧ್ಯಕ್ಷ ಸ್ಥಾನ ಕಾಂಗ್ರೆಸ್ ಪಾಲಾಗಲಿದೆ. ಏತನ್ಮಧ್ಯೆ, ಕೆಲವು ಪುರಸಭೆ ಸದಸ್ಯರು ಅಧ್ಯಕ್ಷ ಸ್ಥಾನದ ಮೀಸಲಾತಿ ಬದಲಿಸುವಂತೆ ಹೈಕೋರ್ಟ್ ಮೊರೆ ಹೋಗಿದ್ದಾರೆ.

## ಚನ್ನಗಿರಿ ಪುರಸಭೆ ಅಧ್ಯಕ್ಷ ಸ್ಥಾನದ ಮೀಸಲಾತಿ ಬದಲಿಸಲು ಯತ್ನ: ಆರೋಪ


ದಾವಣಗೆರೆ, ಆ.29 - ಚನ್ನಗಿರಿ ಪುರಸಭೆ ಅಧ್ಯಕ್ಷರ ಸ್ಥಾನಕ್ಕೆ ಪರಿಶಿಷ್ಟ ಜಾತಿ ಮಹಿಳಾ ಮೀಸಲಾತಿ ದೊರೆತಿದ್ದು, ಕೂಡಲೇ ಚುನಾವಣೆ ನಡೆಸಲು ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಪುರಸಭೆ ಸದಸ್ಯರು ಹಾಗೂ ದಲಿತ ಮುಖಂಡರು ಆರೋಪಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಾದಿಗ ಸಮಾಜದ ಮುಖಂಡ ನಲ್ಲೂರು ಶಿವಪ್ಪ, ಜಿಲ್ಲಾದ್ಯಂತ ಎಲ್ಲಾ ಪುರಸಭೆ, ನಗರಸಭೆ ಹಾಗೂ ಪಟ್ಟಣ ಪಂಚಾಯ್ತಿ ಚುನಾವಣಾ ಪ್ರಕ್ರಿಯೆ ಆರಂಭವಾಗಿದ್ದರೂ ಚನ್ನಗಿರಿ ತಾಲ್ಲೂಕಿನಲ್ಲಿ ಮಾತ್ರ ಚುನಾವಣೆ ವಿಳಂಬವಾಗುತ್ತಿದೆ ಎಂದು ಆರೋಪಿಸಿದರು.

ಪುರಸಭೆ ಅಧ್ಯಕ್ಷ ಸ್ಥಾನವು ಪರಿಶಿಷ್ಟ ಮಹಿಳೆಗೆ ಮೀಸಲಾಗಿರುವುದರಿಂದ ಮೀಸಲಾತಿ ಬದಲಿಸುವ ಹುನ್ನಾರವೂ ನಡೆಯುತ್ತಿದೆ. ಒಂದು ವೇಳೆ ಮೀಸಲಾತಿ ಬದಲಾವಣೆ ಆದರೆ ಕಾನೂನು ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪುರಸಭೆ ಮಾಜಿ ಅಧ್ಯಕ್ಷೆ ಲಕ್ಷ್ಮಿದೇವಮ್ಮ ನರಸಿಂಹಮೂರ್ತಿ, ಉಬ್ಬಂಗಿ ಪ್ರಸಾದ್, ಕಮಲ ಹರೀಶ್, ನಾಗರಾಜ್ ಪಟ್ಲಿ, ಪರಮೇಶ್ ಪಾರಿ, ಚಿಕ್ಕಣ್ಣ, ಅಣ್ಣಯ್ಯ ಸಿ.ಆರ್., ಗೋವಿಂದಪ್ಪ, ಶ್ರೀನಿವಾಸ್, ರುದ್ರಪ್ಪ, ವೀರೇಶ್, ರಘು ಸಂತೇಬೆನ್ನೂರು ಇತರರು ಉಪಸ್ಥಿತರಿದ್ದರು.

## ಬಿ. ಕಲಪನಹಳ್ಳಿಯಲ್ಲಿ ಇಂದು ದುರ್ಗಾಂಬಿಕಾ ದೇವಿ ಉತ್ಸವ



ದಾವಣಗೆರೆ ತಾಲ್ಲೂಕು ಬಿ.ಕಲ್ಪನಹಳ್ಳಿ ಗ್ರಾಮದ ಎ.ಕೆ. ಕಾಲೋನಿಯ ಶ್ರೀ ದುರ್ಗಾಂಬಿಕಾ ದೇವಿಯ ಹೊಳೆ ಪೂಜೆಯು ಇಂದು ಬೆಳಗ್ಗೆ 11ಕ್ಕೆ ಹರಿಹರದ ತುಂಗಭದ್ರಾ ಹೊಳೆಯ ತಟದಲ್ಲಿ ನೆರವೇರಲಿದೆ.

ಮಧ್ಯಾಹ್ನ 3ಕ್ಕೆ ದುರ್ಗಾಂಬಿಕಾ ದೇವಿಯ ಮೆರವಣಿಗೆ ಜರುಗಲಿದ್ದು, ಸಂಜೆ 5.30ಕ್ಕೆ ಗ್ರಾಮದ ದೇವಸ್ಥಾನದಲ್ಲಿ ದೇವಿಯ ಪ್ರತಿಷ್ಠಾಪನೆ ಹಾಗೂ ಮಹಾಮಂಗಳಾರತಿ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿಯ ಹೆಚ್. ಮಲ್ಲಿಕಾರ್ಜುನ್ ವಂದಾಲಿ ತಿಳಿಸಿದ್ದಾರೆ.

## ಐಟಿಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಆ.29- ಐಟಿಐ ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಪ್ರವೇಶ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಆಗಸ್ಟ್ 31 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮಾಹಿತಿಗಾಗಿ ಆಯಾ ಸಂಸ್ಥೆಯ ಪ್ರಾಚಾರ್ಯರರನ್ನು ಸಂಪರ್ಕಿಸಬಹುದಾಗಿದೆ.

## ಜಿಲ್ಲೆಯ ಹೋಟೆಲ್‌ಗಳ ಆಹಾರ ಸುರಕ್ಷತೆ ವಿಶೇಷ ತಪಾಸಣೆ ಇಂದು

ದಾವಣಗೆರೆ, ಆ. 29- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಸೂಚನೆ ಮೇರೆಗೆ ನಾಳೆ ದಿನಾಂಕ 30 ರ ಶುಕ್ರವಾರ ಮತ್ತು ನಾಡಿದ್ದು ದಿನಾಂಕ 31ರ ಶನಿವಾರ ಜಿಲ್ಲೆಯಾದ್ಯಂತ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಬಗ್ಗೆ ವಿಶೇಷ ತಪಾಸಣೆ ನಡೆಸಲಾಗುವುದು ಎಂದು ಜಿಲ್ಲಾ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಂಕಿತ ಅಧಿಕಾರಿ ಡಾ.ಜೆ.ಎಸ್.ನಾಗರಾಜ್ ತಿಳಿಸಿದ್ದಾರೆ. ಎಫ್.ಎಸ್.ಎಸ್.ಎ ಗುಣಮಟ್ಟ ಪರೀಕ್ಷೆಗಾಗಿ ಎರಡು ದಿನಗಳಂದು ವಿಶೇಷ ಅಭಿಯಾನ ಮಾಡಲಿದ್ದು, ಸಾರ್ವಜನಿಕರು ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಬಗ್ಗೆ ಅರಿವು ಹೊಂದಬೇಕೆಂಬ ಹಿನ್ನೆಲೆಯಲ್ಲಿ ಈ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಡಾ. ನಾಗರಾಜ್ ತಿಳಿಸಿದ್ದಾರೆ.

# ಜಯದೇವ ಜಗದ್ಗುರುಗಳಿಂದ ಶಿಕ್ಷಣ ಕ್ರಾಂತಿ : ಬಸವ ಪ್ರಭು ಶ್ರೀ

ದಾವಣಗೆರೆ, ಆ. 29- ದೇಶದಾದ್ಯಂತ ಇರುವ ಜಯದೇವ ಪ್ರಸಾದ ನಿಲಯಗಳಲ್ಲಿ ಓದಿದಂತಹವರು ಇಂದು ದೇಶ - ವಿದೇಶಗಳಲ್ಲಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ಶಿವಯೋಗಾಶ್ರಮ ಟ್ರಸ್ಟ್, ಬಸವ ಕೇಂದ್ರ ವಿರಕ್ತಮಠದ ಸಹಯೋಗದಲ್ಲಿ ನಿನ್ನೆ ನಡೆದ ಶ್ರೀ ಜಯದೇವ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ 150ನೇ ಜಯಂತ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಜಯದೇವ ಜಗದ್ಗುರುಗಳ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಜಯದೇವ ಜಗದ್ಗುರುಗಳ ಜಯಂತ್ಯೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ವರ್ಷಪೂರ್ತಿ ಹಮ್ಮಿಕೊಳ್ಳಲಾಗುವುದು ಎಂದರು.

ಜಯದೇವ ಜಗದ್ಗುರುಗಳು 1906 ರಲ್ಲಿ ಜಯದೇವ ಉಚಿತ ಪ್ರಸಾದ ನಿಲಯವನ್ನು ಪ್ರಥಮ ಬಾರಿಗೆ ದಾವಣಗೆರೆಯಲ್ಲಿ ಆರಂಭಿಸಿದ್ದರು. ನಂತರದಲ್ಲಿ ಬೆಂಗಳೂರು, ತುಮಕೂರು, ತಿಪಟೂರು, ಅರಸಿಕೆರೆ, ಕೊಲ್ಲಾಪುರ, ಧಾರವಾಡ, ನಿಪ್ಪಾಣಿ ಸೇರಿದಂತೆ ವಿವಿಧೆಡೆ ಪ್ರಸಾದ ನಿಲಯಗಳನ್ನು ಆರಂಭಿಸಿದರು. ಅಂದಿನಿಂದ ಇಂದಿನವರೆಗೂ ಅವು ನಡೆದುಕೊಂಡು ಬರುತ್ತಿವೆ. ಅಂತಹ ಪರಮಪೂಜ್ಯರು ಶಿಕ್ಷಣ ಕ್ರಾಂತಿಯನ್ನು ಮಾಡದೇ ಇದ್ದಿದ್ದರೆ ಇವತ್ತು ದೇಶ, ರಾಜ್ಯ ಉದ್ಧಾರವಾಗಲು



ಶ್ರೀ ಜಯದೇವ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ 150ನೇ ಜಯಂತ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಜಯದೇವ ಜಗದ್ಗುರುಗಳ ಮೂರ್ತಿಗೆ ಪುಷ್ಪಾರ್ಚನೆ ಕಾರ್ಯಕ್ರಮದಲ್ಲಿ ಶ್ರೀ ಬಸವ ಪ್ರಭು ಸ್ವಾಮೀಜಿ

ಸಾಧ್ಯವಾಗುತ್ತಿರಲಿಲ್ಲ. ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ, ರಾಷ್ಟ್ರಪತಿ ಬಿ.ಡಿ.ಜತ್ತಿ ಸೇರಿದಂತೆ ಅನೇಕ ಸಾಹಿತಿಗಳು ಶ್ರೀಗಳು ಸ್ಥಾಪಿಸಿದ ಪ್ರಸಾದ ನಿಲಯಗಳಲ್ಲಿ ಓದಿದ್ದಾರೆ. 1940 ರಲ್ಲಿನ 45 ಲಕ್ಷ ರು.ಗಳ ಬಜೆಟ್‌ನಲ್ಲಿ ಜಯದೇವ ಜಗದ್ಗುರುಗಳು 18 ಲಕ್ಷ ರು.ಗಳನ್ನು ಶಿಕ್ಷಣ ಸಂಸ್ಥೆಗಳಿಗೆ ವಿನಿಯೋಗ ಮಾಡಿದ್ದಾರೆ.

ಜಯದೇವ ಜಗದ್ಗುರುಗಳು ಎಲ್ಲೆಲ್ಲಿ ಜಯದೇವ ಪ್ರಸಾದ ನಿಲಯ ಆರಂಭಿಸಿದ್ದಾರೆಯೋ ಅಲ್ಲಿ, ಮತ್ತು ಮುರುಘಾ ಮಠದ ಶಾಲಾ - ಕಾಲೇಜು ಗಳಲ್ಲಿ ಇಂದು ಶ್ರೀಗಳ ಭಕ್ತರು ಅರ್ಥಪೂರ್ಣವಾಗಿ ಈ ಜಯಂತಿ ಕಾರ್ಯಕ್ರಮವನ್ನು ಆಚರಿಸುತ್ತಿದ್ದಾರೆ. ಜಯದೇವ ಜಗದ್ಗುರುಗಳ ರಾಜಧಾನಿ ಎಂದರೆ ಅದು ದಾವಣಗೆರೆಯಾಗಿದೆ. ಎಲ್ಲರಿಗೂ ಶಿಕ್ಷಣ ದೊರಕುವಂತಾಗಲಿ, ಮಕ್ಕಳಿಗೆ ತೊಂದರೆಯಾಗು ವುದು ಬೇಡ ಎಂದು ನಾಡಿನಾದ್ಯಂತ ಜಯದೇವ ಶ್ರೀಗಳು ಉಚಿತ ಪ್ರಸಾದ ನಿಲಯಗಳನ್ನು ಅಂದೇ ಸ್ಥಾಪಿಸಿದರು. ಹೈಮಾಸ್ಟ್ ಲೈಟಿನಂತೆ ಜಯದೇವ ಜಗದ್ಗುರುಗಳು ಇಡೀ ಮಾನವ ಕುಲಕ್ಕೇ ಬೆಳಕಾಗಿದ್ದು ಎಲ್ಲರ ಬದುಕನ್ನು ಬೆಳಗಿಸುತ್ತಿದ್ದಾರೆ. ಜಯದೇವ ಜಗದ್ಗುರುಗಳ ಸಮಾಜಮುಖಿ ಕಾರ್ಯಗಳಿಂದ ಬರೀ ದೇಶ ಅಲ್ಲ ರಾಜ್ಯ ಉದ್ಧಾರವಾಗಿದೆ. ಎಲ್ಲರಿಗೂ ಶಿಕ್ಷಣ ಅನ್ನುವುದು ಸಿಕ್ಕಿದೆ. ಎಲ್ಲರೂ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಅಂತಹ ಮಹಾನ್ ವ್ಯಕ್ತಿಯನ್ನು ಎಲ್ಲರೂ ಸ್ಮರಣೆ ಮಾಡೋಣ, ಅವರು ಹಾಕಿಕೊಟ್ಟ ದಾರಿಯಲ್ಲಿ ನಾವು - ನೀವುಗಳು ಸಾಗೋಣ ಎಂದರು.

ಮಹಾತ್ಮಾ ಗಾಂಧೀಜಿ ಒಮ್ಮೆ ಜಯದೇವ ಜಗದ್ಗುರುಗಳನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಅಸ್ಪೃಶ್ಯತೆ ನಿವಾರಣೆ ಬಗ್ಗೆ 12ನೇ ಶತಮಾನದಲ್ಲಿ ಬಸವಣ್ಣನವರು ಹೋರಾಟ ಮಾಡಿದ್ದರು. ಅಂತಹ ಕೆಲಸವನ್ನು ನೀವು ಮಾಡುತ್ತಿದ್ದೀರಿ ಎಂದು ಜಯದೇವ ಜಗದ್ಗುರುಗಳು ಗಾಂಧೀಜಿಯವರಿಗೆ ತಿಳಿಸಿದ್ದರಂತೆ. ನಂತರದಲ್ಲಿ ಅಸಹಕಾರ ಚಳುವಳಿ ಮುಖಾಂತರ ಗಾಂಧೀಜಿ ಕರೆ ನೀಡಿದಂತೆ ಅಂದಿನಿದಲೇ ಜಯದೇವ ಜಗದ್ಗುರುಗಳು ಕೂಡಾ ತಾವು ರೇಷ್ಮೆ ಬಟ್ಟೆ ತೊಡುವುದು ಬಿಟ್ಟು ಖಾದಿ ಬಟ್ಟೆಗೆ ಕಾವಿ ಬಣ್ಣ ಹಾಕಿಕೊಂಡು ತೊಡಲು ಆರಂಭಿಸಿದರು ಎಂದು ಹೇಳಿದರು.

ಚಿತ್ರದುರ್ಗ ಬೃಹನ್ಮಠದ ಉತ್ತರಾಧಿಕಾರಿ ಬಸವಾದಿತ್ಯ ದೇವರು, ಹಾಸಬಾವಿ ಕರಿಬಸಪ್ಪ, ಎಂ.ಜಯಕುಮಾರ್, ಅಂದನೂರು ಮುಪ್ಪಣ್ಣ, ಎಸ್.ಓಂಕಾರಪ್ಪ, ಕಣಕುಪ್ಪಿ ಮುರುಗೇಶಪ್ಪ, ಎಂ.ಕೆ.ಬಕ್ಕಪ್ಪ, ಮುರುಘ ರಾಜೇಂದ್ರ ಚಿಗಟೇರಿ, ಲಂಬಿ ಮುರುಗೇಶ, ಟಿ.ಎಂ. ವೀರೇಂದ್ರ, ಬೆಳ್ಳೂಡಿ ಮಂಜುನಾಥ, ಸಂಗಣ್ಣ, ಚಿಗಟೇರಿ ಜಯದೇವ, ಕೀರ್ತಿ, ಶರಣಪ್ಪ, ಚನ್ನಬಸವ ಶೀಲವಂತ್, ರೋಷನ್, ಶಿವಬಸಮ್ಮ, ಲತಾ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

MATRUCHAYA HEALTH CARE
(Mother & child care Hospital)
2nd cross siddaveerappa Layout, Shamanuru Road, Dvg
HOSPITAL STAFF VACANCY
1) Senior Nurses (GNM) - 4
2) Junior Nurses (GNM) - 4
3) OT Nurses - 2 , 4) Pharmacist - 2
5) Receptionist - 1
Attractive Salary based on Eligibility & Exp.
Apply with Biodata, Degree Certificate & Addr. Proof.
Accomadation Available
Conact no. 78298 08443, 97427 62462

ಆರೋಗ್ಯ ಮೇಳ-24
ಆರೋಗ್ಯದ ಅರಿವೇ ಆಯುರ್ವೇದ
ಮೇಳದ ವಿಶೇಷತೆ
ಉಚಿತ
ಸಕ್ಕರೆ ಕಾಯಿಲೆ ಪರೀಕ್ಷೆ ಮೂಳೆ ಸಾಂದ್ರತೆ ಪರೀಕ್ಷೆ ಇರುತ್ತದೆ.
* ತಜ್ಞ ಆಯುರ್ವೇದ ವೈದ್ಯರಿಂದ ಉಚಿತ ತಪಾಸಣೆ ಮತ್ತು ಆಪ್ತ ಸಮಾಲೋಚನೆ.
* 30 ಕ್ಕೂ ಹೆಚ್ಚು ಆಯುರ್ವೇದ ಔಷಧಿ ಮಳಿಗೆಗಳು.
* ಎಲ್ಲಾ ತರಹದ ಆಯುರ್ವೇದ ಔಷಧಿಗಳ ಮೇಲೆ ಭಾರೀ ರಿಯಾಯಿತಿ.
* ಸಿರಿಧಾನ್ಯ, ವಿವಿಧ ಆಹಾರ ಧಾನ್ಯಗಳ ಪ್ರದರ್ಶನ ಮತ್ತು ಮಾರಾಟ.
* ಆಯುರ್ವೇದ ವೈದ್ಯರಿಂದ ಗೋಷ್ಠಿ.
ಇದೇ ಮೊದಲ ಬಾರಿಗೆ ಕರ್ನಾಟಕದ ಮಧ್ಯ ಭಾಗದಲ್ಲಿ ಆಯುರ್ವೇದ ಔಷಧಿಗಳ ಪ್ರದರ್ಶನ ಮತ್ತು ಭಾರತೀಯ ವೇದ ಸಂಸ್ಕೃತಿಯನ್ನು ಎಲ್ಲಾ ವರ್ಗದ ಜನರಿಗೆ ತಲುಪಿಸುವ ಪ್ರಯತ್ನ.
ದಿನಾಂಕ : 31-08-2024 ಮತ್ತು 1-9-2024
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 6-00 ರವರೆಗೆ
ಸ್ಥಳ : ಶ್ರೀ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪ, ಹದಡಿ ರಸ್ತೆ, ದಾವಣಗೆರೆ
ತಪಾಸಣೆಗೆ ಬರುವವರು ಮೊದಲೇ ಹೆಸರು ನೋಂದಾಯಿಸಿರಬೇಕು :
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಶ್ರೀ ಧನ್ವಂತರಿ ಆಯುರ್ವೇದ ಔಷಧ ಪ್ರತಿನಿಧಿಗಳ ಸಂಘ (ರಿ.) ದಾವಣಗೆರೆ.
ಮೊ. : 7892780466, 9008731327, 6364321664
ಸರ್ವರಿಗೂ ಸುಸ್ವಾಗತ

# ಹಸಿದವರ ದಾಹ ತಣಿಸಿದರೆ ದೇವರ ಅನುಗ್ರಹ ಪ್ರಾಪ್ತಿ



**ಚಿಂದೋಡಿ ಎಸ್. ವೀರಣ್ಣ ಮತ್ತು ಕುಟುಂಬದವರ ಜಂಗಮ ದಾಸೋಹ ಸೇವೆಯ ಶತಮಾನೋತ್ಸವ ಕಾರ್ಯಕ್ರಮದಲ್ಲಿ ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ**

ದಾವಣಗೆರೆ, ಆ.29- ಹಸಿದವರ ದಾಹ ತಣಿಸುವ ವ್ಯಕ್ತಿಗೆ ದೇವರ ಅನುಗ್ರಹ ಪ್ರಾಪ್ತಿಯಾಗುತ್ತದೆ ಎಂದು ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ತಿಳಿಸಿದರು.

ನಗರದ ಹಳೇ ಪೇಟೆಯಲ್ಲಿರುವ ಚಿಂದೋಡಿ ಎಸ್. ವೀರಣ್ಣ ಮತ್ತು ಕುಟುಂಬದವರ ನಿವಾಸದಲ್ಲಿ ಗುರುವಾರ ಆಯೋಜಿಸಿದ್ದ ಜಂಗಮ ದಾಸೋಹ ಸೇವೆಯ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ದಾಸೋಹ ನಡೆಸುವ ಕಾರ್ಯ ಸಾಹಸಮಯ, ಮಠಗಳೇ ದಾಸೋಹ ಕಾರ್ಯ ಮಾಡಲು ಕಷ್ಟ ಪಡುವ ಈ ಕಾಲದಲ್ಲಿ ಶತಮಾನಗಳಿಂದ ಚಿಂದೋಡಿ ಮನೆತನ ಶ್ರಾವಣ ಮಾಸದಲ್ಲಿ 1 ತಿಂಗಳು ಜಂಗಮ ದಾಸೋಹ ಮಾಡುತ್ತಿರುವುದು ಶ್ಲಾಘನಿಯ ಎಂದರು.

12ನೇ ಶತಮಾನದಲ್ಲಿ ಬಸವಣ್ಣ ನೀಡಿರುವಂತಹ 'ಕಾಯಕ ಮತ್ತು ದಾಸೋಹ' ಎಂಬ ಅಂಶ ಅಮೂಲ್ಯ ತತ್ವಗಳಾಗಿವೆ. ಇಂತಹ ಆದರ್ಶ ತತ್ವವನ್ನು 1924ರಲ್ಲಿ ಶಾಂತ ವೀರಪ್ಪ ಮತ್ತು ಶಾಂತ ವೀರಮ್ಮ ಪ್ರಾರಂಭಿಸಿದರು ಎಂದು ತಿಳಿಸಿದರು. ರಂಗಭೂಮಿ ಉಳಿಸುವ ಹಾಗೂ ಕಲಾವಿದರನ್ನು ಬೆಳೆಸುವ ಕಾರ್ಯದಿಂದ ದೇಶಕ್ಕೆ ಚಿಂದೋಡಿ ಮನೆತನ ಪರಿಚಿತವಾಗಿದೆ ಎಂದು ಹೇಳಿದರು.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮೂಲತಃ ಅಣ್ಣಿಗೆರೆ ಮನೆತನದ ಶಾಂತ ವೀರಪ್ಪ ಹಾಗೂ ಶಾಂತ ವೀರಮ್ಮ ಅವರು ಹಸಿವಿನ ನಿಜವಾದ ಬೆಲೆ ತಿಳಿದು ಪ್ರತಿ ಶ್ರಾವಣದಲ್ಲಿ ಜಂಗಮರ ಹಸಿವು ನೀಗಿಸುವ ಕಾರ್ಯ ಪ್ರಾರಂಭಿಸಿದರು ಎಂದರು.

ಒಬ್ಬ ಶಿವಯೋಗಿ ತೃಪ್ತಿಯಾದರೆ ಸಾಕ್ಷಾತ್ ಶಿವನೇ ತೃಪ್ತಿಯಾಗುತ್ತಾನೆ. ಜಂಗಮರಿಗೆ ದಾಸೋಹ ಮಾಡಿದ ಪುಣ್ಯದ ಫಲ ಈ ಮನೆತನವನ್ನು ಕಾಪಾಡಲಿದೆ ಎಂದು ಹೇಳಿದರು.

ಚಿಂದೋಡಿ ಮನೆತನವು ಕಲಾರಾಧನೆ ಮಾಡುವ ಮೂಲಕ ಕಲಾಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದೆ. ಅನೇಕ ಕಲಾವಿದರ ಕುಟುಂಬಕ್ಕೆ ಬದುಕು ಕಟ್ಟಿಕೊಟ್ಟಿದೆ ಎಂದರು.

ಉಕ್ಕಡಗಾತ್ರಿ ದೇವಸ್ಥಾನ ಟ್ರಸ್ಟಿನ ಕಾರ್ಯದರ್ಶಿ ಸುರೇಶ್ ಮಾತನಾಡಿ, ಮನೆತನಗಳು ದಾಸೋಹ ಕಾರ್ಯ ನಡೆಸುವುದು ವಿರಳ. ಆದರೆ ಈ ಕುಟುಂಬವು ದಾಸೋಹ ಕಾರ್ಯಕ್ರಮದ ಜತೆಗೆ ವೃತ್ತಿರಂಗ ಹಾಗೂ ಧರ್ಮರಂಗಕ್ಕೆ ಕೊಡುಗೆ ನೀಡುತ್ತಾ ಬಂದಿದೆ ಎಂದು ಹೇಳಿದರು.

ಕುಟುಂಬದ ಹಿರಿಯ ಸದಸ್ಯ ಬಂಗಾರೇಶ್ ಪ್ರಾಸ್ತಾವಿಕ ಮಾತನಾಡಿದರು. ಆಂಧ್ರಪ್ರದೇಶದ ಉರುಗಾದ್ರಿ ಸಂಸ್ಥಾನ ಮಠದ ಕರಿಬಸವ ರಾಜೇಂದ್ರ ಶ್ರೀಗಳು, ಕುಟುಂಬದ ಹಿರಿಯ ಸದಸ್ಯರಾದ ಪಾರ್ವತಮ್ಮ, ವೀರೇಶ್, ರಾಜಣ್ಣ, ಮಧುಕೇಶ್, ಶಂಭುಲಿಂಗಪ್ಪ ಸೇರಿದಂತೆ ಕುಟುಂಬದ ಸದಸ್ಯರು ಇದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬಸಾಪುರ, ಹಳೇ ಚಿಕ್ಕನಹಳ್ಳಿ, ಹೊಸ ಚಿಕ್ಕನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ರಾಜ್ಯಪಾಲರ ಹುದ್ದೆಯನ್ನು ರದ್ದುಗೊಳಿಸಲು ಆಗ್ರಹ

## ನಗರದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದಿಂದ ಪ್ರತಿಭಟನೆ : ರಾಜ್ಯಪಾಲರ ನಡೆಗೆ ಆಕ್ರೋಶ



ದಾವಣಗೆರೆ, ಆ.29 - ರಾಜ್ಯಪಾಲರ ಹುದ್ದೆಯನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಸಿಪಿಐ)ದ ಮುಖಂಡರು ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಸಂದರ್ಭದಲ್ಲಿ ರಾಜ್ಯಪಾಲರ ಕಚೇರಿ ರಾಜಕೀಯ ಒತ್ತಡಕ್ಕೆ ಮಣಿದು ತೀರ್ಮಾನ ಕೈಗೊಂಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ. ರಾಜ್ಯಪಾಲರು ಮುಡಾ ಹಗರಣದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವುದು ಸಂವಿಧಾನ ವಿರೋಧಿ ಕ್ರಮ ಎಂದು ಆರೋಪಿಸಿದರು.

ರಾಜ್ಯಪಾಲರು ಕೇಂದ್ರ ಸರ್ಕಾರದ ಬಿಜೆಪಿಯ ಕೈಗೊಂಬೆಯಾಗಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಆಯ್ಕೆಯಾಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ಮಾಡುತ್ತಿರುವುದು ಖಂಡನೀಯ ಎಂದು ಆರೋಪಿಸಿದರು.

ಸಾಂವಿಧಾನಿಕ ರಾಜ್ಯಪಾಲರ ಹುದ್ದೆಯನ್ನು ಕೆಲವಾರು ರಾಜಕೀಯ ಪಕ್ಷಗಳು ದುರ್ಬಳಕೆ ಮಾಡಿಕೊಳ್ಳುತ್ತಿರುವುದರಿಂದ ಸಾಂವಿಧಾನಿಕ, ಪ್ರಜಾತಾಂತ್ರಿಕ ಆಶಯಗಳು ಮೂಲೆ ಗುಂಪಾಗುತ್ತಿವೆ. ಹಾಗಾಗಿ ರಾಷ್ಟ್ರಪತಿಯವರು ರಾಜ್ಯಪಾಲರ ಹುದ್ದೆಯನ್ನೇ ರದ್ದು ಪಡಿಸಿ, ವಿಧಾನ ಸಭಾ ಮತ್ತು ವಿಧಾನ ಪರಿಷತ್ತು ಅಧ್ಯಕ್ಷರಿಗೆ ರಾಜ್ಯಪಾಲರ ಅಧಿಕಾರ ನೀಡುವಂತಾಗಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯ ಆವರಗೆರೆ ಎಚ್.ಜಿ. ಉಮೇಶ್, ಆವರಗೆರೆ ವಾಸು, ಆವರಗೆರೆ ಚಂದ್ರು, ಐರಣಿ ಚಂದ್ರು, ಶಿವಕುಮಾರ್ ಡಿ. ಶೆಟ್ಟರ್, ನೇತ್ರಾವತಿ, ಸುರೇಶ್, ಲಕ್ಷ್ಮಣ್, ಸರೋಜ, ಯಲ್ಲಪ್ಪ, ನಾಗೇಂದ್ರಪ್ಪ, ಚಿನ್ನಪ್ಪ, ಗುಂಡಯ್ಯ, ಕೆ.ಹೆಚ್. ಹನುಮಂತಪ್ಪ, ಮೌನಾಚಾರಿ ಎಸ್., ಎನ್. ಟಿ. ತಿಪ್ಪೇಸ್ವಾಮಿ, ನರೇಗಾ ರಂಗನಾಥ್, ಗದಿಗೇಶ್ ಪಾಳೇದ, ಬಸವರಾಜಪ್ಪ, ಎ. ತಿಪ್ಪೇಶಿ ಆವರಗೆರೆ, ಕೃಷ್ಣಪ್ಪ, ಎನ್.ಹೆಚ್. ರಾಮಪ್ಪ, ಚಮನ್ ಸಾಬ್, ಆರ್.ತಿಮ್ಮಕ್ಕ, ಆವರಗೆರೆ ಬಾನಪ್ಪ, ಶಾರದಮ್ಮ, ಸರೋಜಾ ಇತರರು ಇದ್ದರು.

## ಭಾವಸಾರ ವಿಷನ್‌ನಿಂದ ನಾಡಿದ್ದು ಶ್ವಾಸಕೋಶ ತಪಾಸಣಾ ಶಿಬಿರ

ದಾವಣಗೆರೆ, ಆ. 29 - ಭಾವಸಾರ ವಿಷನ್ ಇಂಡಿಯಾ ಹಾಗೂ ಶ್ವಾಸಕೋಶ ತಜ್ಞ ಡಾ. ಅದೀಫ್ ಬಿ. ಅಂಬರ್‌ಕರ್ ಇವರ ಸಂಯುಕ್ತಾಶ್ರಯದಲ್ಲಿ ನಗರದ ಮಹಾರಾಜ ಪೇಟೆಯ ಶ್ರೀ ವಿಠ್ಠಲ ರುಕುಮಾಯಿ ಮಂದಿರದಲ್ಲಿ ಬರುವ ಸೆಪ್ಟೆಂಬರ್ 1ರ ಭಾನುವಾರ ಉಚಿತ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಅಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 2 ಗಂಟೆವರೆಗೆ ದೀರ್ಘಾ ವಧಿ ಕೆಮ್ಮು, ದಮ್ಮು, ಅಸ್ತಮಾ, ಅಲರ್ಜಿ, ಕ್ಷಯ ರೋಗ, ಕಫ, ಸಿಗರೇಟ್ ಹಾಗೂ ಧೂಳಿನಿಂದ ಉಂಟಾಗುವ ಉಸಿರಾಟದ ತೊಂದರೆ, ಗೊರಕೆಯ ಸಮಸ್ಯೆ ನಿವಾರಿಸುವ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ.

ವಿವರಗಳಿಗೆ ಸರಳಾ ಅಮಟೆ (94483 64830), ರಮೇಶ್ ಬಾಬು ಗುಜ್ಜರ್ (99456 59498) ಇವರನ್ನು ಸಂಪರ್ಕಿಸಬಹುದಾಗಿದೆ.

## ಆಸ್ತಿ ತೆರಿಗೆ: ಶೇ. 5ರ ರಿಯಾಯಿತಿ : ಅವಧಿ ವಿಸ್ತರಣೆ

ದಾವಣಗೆರೆ, ಆ.29- ಮಹಾ ನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಮೇಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿಸಲು ಶೇ.5 ರಷ್ಟು ನೀಡುವ ರಿಯಾಯಿತಿ ಕಾಲಾವಧಿಯನ್ನು ಸೆಪ್ಟೆಂಬರ್14 ರವರೆಗೆ ವಿಸ್ತರಿಸಲಾಗಿದೆ ಎಂದು ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದ್ದಾರೆ.

## ಕಾಂಗ್ರೆಸ್ ಸದಸ್ಯತ್ವದಿಂದ ವಿನಯ್‌ಕುಮಾರ್ ಉಚ್ಛಾಟನೆ



ದಾವಣಗೆರೆ, ಆ. 29 - ಲೋಕಸಭಾ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರದ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರ ವಿರುದ್ಧ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜಿ.ಬಿ.ವಿನಯ್ ಕುಮಾರ್ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಕಾಲ ಉಚ್ಛಾಟಿಸಿ ಪಕ್ಷದ ಶಿಸ್ತು ಪಾಲನಾ ಸಮಿತಿಯ ಅಧ್ಯಕ್ಷ ರೆಹಮಾನ್ ಖಾನ್ ಆದೇಶಿಸಿದ್ದಾರೆ.

## ಶಾಮನೂರಿನ ಶಿವ - ಪಾರ್ವತಿ ಬಡಾವಣೆ ಚೌಡಾಂಬಿಕಾ ದೇವಸ್ಥಾನದಲ್ಲಿ ಇಂದು ಪರವು



ದಾವಣಗೆರೆ ಸಿಟಿ ಶಾಮನೂರಿನ ನಾಗನೂರು ರಸ್ತೆಯ ಶಿವ-ಪಾರ್ವತಿ ಬಡಾವಣೆ 3ನೇ ಕ್ರಾಸ್‌ನಲ್ಲಿರುವ ಶ್ರೀ ಚೌಡಾಂಬಿಕಾ ದೇವಿ ದೇವಸ್ಥಾನದಲ್ಲಿ ಇಂದು ಮಧ್ಯಾಹ್ನ 12.30ಕ್ಕೆ ಅಮ್ಮನವರಿಗೆ ವಿಶೇಷ ಪೂಜೆ, ಪರವು ನಡೆಯಲಿದೆ. ಭಕ್ತಾದಿಗಳು ಪಾಲ್ಗೊಳ್ಳುವಂತೆ ಕೋರಲಾಗಿದೆ.

## ಕಲುಷಿತ ನೀರು ಸೇವಿಸಿ 22ಕ್ಕೂ ಹೆಚ್ಚು ಜನ ಅಸ್ವಸ್ಥ

ದಾವಣಗೆರೆ, ಆ.29- ಕಲುಷಿತ ನೀರು ಸೇವಿಸಿ 22 ಕ್ಕೂ ಹೆಚ್ಚು ಜನರು ವಾಂತಿ ಬೇಧಿಯಿಂದ ಅಸ್ವಸ್ಥರಾಗಿ ವಿವಿಧ ಆಸ್ಪತ್ರೆಗಳಿಗೆ ದಾಖಲಾದ ಘಟನೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಜೋಳದಾಳ್ ಗ್ರಾಮದಲ್ಲಿ ಗುರುವಾರ ನಡೆದಿದೆ. ಅಸ್ವಸ್ಥಗೊಂಡವರನ್ನು ಶಿವಮೊಗ್ಗದ ಮೆಗ್ಗಾನ್, ಭದ್ರಾವತಿ, ಚನ್ನಗಿರಿ ತಾಲ್ಲೂಕು ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ.

ನೀರು ಪೂರೈಕೆಯಲ್ಲಿ ಆದ ವ್ಯತ್ಯಾಸದಿಂದ ವಾಂತಿ ಭೇದಿ ಕಾಣಿಸಿಕೊಂಡಿದೆ ಎಂದು ಹೇಳಲಾಗುತ್ತಿದೆ, ಗ್ರಾಮಕ್ಕೆ ತಾಲ್ಲೂಕು ಆರೋಗ್ಯಾಧಿಕಾರಿ ಸೇರಿದಂತೆ ವೈದ್ಯಕೀಯ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಖಾಸಗಿ ಕಂಪನಿಗಳಲ್ಲಿ ಹೂಡಿಕೆ ವಂಚನೆ : ಪರಿಹಾರಕ್ಕೆ ಆಗ್ರಹ

ದಾವಣಗೆರೆ, ಆ. 29 - ವಿವಿಧ ಖಾಸಗಿ ಕಂಪನಿಗಳಲ್ಲಿ ಹಣ ತೊಡಗಿಸಿ ವಂಚಿತರಾದ ಸಂತ್ರಸ್ತರಿಗೆ ಪರಿಹಾರ ನೀಡುವಂತೆ ಒತ್ತಾಯಿಸಿ ಬರುವ ಸೆಪ್ಟೆಂಬರ್ 1 ರಂದು ಬೆಳಿಗ್ಗೆ 11 ಗಂಟೆಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಸತ್ಯಾಗ್ರಹ ಧರಣಿ ನಡೆಸಲಾಗುವುದು ಎಂದು ವಂಚನೆ ಸಂತ್ರಸ್ತ ಠೇವಣಿದಾರರ ಕುಟುಂಬ ಸಂಘಟನೆಯ ಉಪಾಧ್ಯಕ್ಷ ಮಧು ಎಚ್.ಎಂ ಹರೋನಹಳ್ಳಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ಅವರು, ಅಗ್ರಿ ಗೋಲ್ಡ್, ಪಿಎಸಿಎಲ್, ಸಮೃದ್ದ ಜೀವನ್, ಅಚೀವರ್ಸ್, ಇ- ಸ್ಟೋರ್ ಇಂಡಿಯಾ, ಗುರು ಟೀಕ್ ಸೇರಿದಂತೆ ವಿವಿಧ ಕಂಪನಿಗಳಲ್ಲಿ ಹಣ ತೊಡಗಿಸಿರುವವರಿಗೆ ಈ ಕಂಪನಿಗಳು ಲಕ್ಷಾಂತರ ರೂ. ವಂಚಿಸಿವೆ ಎಂದು ಆರೋಪಿಸಿದರು.

ಇದರಿಂದ ಅನೇಕರು ಹಣ ಕಳೆದುಕೊಂಡು ನೊಂದಿದ್ದಾರೆ. ಸೆಬಿ ಆದೇಶದಂತೆ ಕಂಪನಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಂಡಿರುವ ಸರ್ಕಾರಗಳು ವಂಚನೆ ಸಂತ್ರಸ್ತರಿಗೆ ಇನ್ನೂ ಹಣ ಕೊಡಿಸಿಲ್ಲ. ಕೂಡಲೇ ಹಣ ಪಾವತಿಸಲು ಆದೇಶ ನೀಡಬೇಕೆಂದು ಅವರು ಒತ್ತಾಯಿಸಿದರು.

ಜಿಲ್ಲೆಯಲ್ಲಿ ಸುಮಾರು 1 ಲಕ್ಷಕ್ಕೂ ಅಧಿಕ ವಿವಿಧ ಕಂಪನಿಗಳಿಂದ ವಂಚನೆಗೊಳಗಾದ ಗ್ರಾಹಕರಿದ್ದೇವೆ. ರಾಜ್ಯದಲ್ಲಿ ಅಗ್ರಿ ಗೋಲ್ಡ್ ಒಂದು ಕಂಪನಿಯ ವಂಚನೆಯ ಮೊತ್ತವೇ ಸುಮಾರು 3000 ಕೋಟಿಯಷ್ಟಿದೆ. ಸಂತ್ರಸ್ತರು ದಾಖಲೆ ಸಮೇತ ಜಿಲ್ಲಾಧಿಕಾರಿ ಮತ್ತು ತಹಶಿಲ್ದಾರ್ ಕಚೇರಿಗಳಲ್ಲಿ ಮನವಿ ಸಲ್ಲಿಸಲು ವಿಶೇಷ ಆಡಳಿತ ಅವಕಾಶ ಕಲ್ಪಿಸಿದ್ದರೂ ಕಂಪನಿಗಳಿಂದ ಹಣ ಮರಳಿಸುವ ಕೆಲಸ ಆಗಿರುವುದಿಲ್ಲ. ಹಾಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸೇರಿದಂತೆ ರಾಷ್ಟ್ರವ್ಯಾಪಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕರಿಬಸಪ್ಪ, ಸಿದ್ದಪ್ಪ, ಚಂದ್ರಶೇಖರ್, ದಾಗಿನಕಟ್ಟೆ ಜಿ.ಎಸ್. ನಾಗರಾಜು, ಮಂಜುನಾಥ್ ಉಪಸ್ಥಿತರಿದ್ದರು.

# ಜೀವಮಾನ ಸಾಧನೆ, ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಆ. 29 - 2023 ನೇ ಸಾಲಿಗೆ ಜೀವಮಾನ ಸಾಧನೆ ಹಾಗೂ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸುವ ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ರಾಜ್ಯದ ಕ್ರೀಡಾಪಟುಗಳಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಹಾಗೂ ಗ್ರಾಮೀಣ ಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಅರ್ಹರು ವೆಬ್‌ಸೈಟ್ sevasindhuserviceskarnataka.gov.in ನಲ್ಲಿ ಸೆಪ್ಟೆಂಬರ್ 20 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ 08192-237480 ಸಂಪರ್ಕಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಜಯಲಕ್ಷ್ಮೀಬಾಯಿ ತಿಳಿಸಿದ್ದಾರೆ.


## ನಾಲ್ಕನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಮತಿ ಪ್ರಿಯದರ್ಶಿನಿ ಶ್ರೇಣಿಕ್ ಜೈನ್
ನಿಧನ : 30-8-2020
ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ...
ಪತಿ : ಶ್ರೇಣಿಕ್ ಎ. ಜೈನ್, ಮಗ : ಮಿತಾಂಶ್ ಎಸ್. ಜೈನ್
ಅತ್ತೆ-ಮಾವ : ಷಾ ಅಶೋಕ್ ಕುಮಾರ್ ಬಾಬುಲಾಲ್‌ಜೀ ಮತ್ತು ಶ್ರೀಮತಿ ರತ್ನದೇವಿ ಅಶೋಕ್‌ಕುಮಾರ್‌ಜೀ ಹಾಗೂ ಕುಟುಂಬ ವರ್ಗದವರು

|| ಶ್ರೀ ವೀರಭದ್ರೇಶ್ವರ ಪ್ರಸನ್ನ||
## ತೃತೀಯ ವರ್ಷದ ಪುಣ್ಯಸ್ಮರಣೆ




ಲಿಂ|| ಸಂಗಪ್ಪಯ್ಯ ಪಟೇಲ್
(ಗೌಡರಮನೆ, ತರಲಘಟ್ಟ ಗ್ರಾಮ, ಶಿಕಾರಿಪುರ ತಾ||)
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು, ನಿಮ್ಮ ನೆನಪು ನಮಗೆ ಸದಾ ಹಚ್ಚ ಹಸಿರು, ಸ್ಪೂರ್ತಿದಾಯಕ, ನಿಮ್ಮ ಪ್ರೀತಿ, ಆರೈಕೆ, ನೆನಪುಗಳೇ ನಮಗೆ ದಾರಿ ದೀಪ. ಸದಾ ನಿಮ್ಮ ಮಾರ್ಗದರ್ಶನದಂತೆ ನಡೆಯುತ್ತಿರುವ...
ಪತ್ನಿ : ಶ್ರೀಮತಿ ಶಾಂತಮ್ಮ ಸಂಗಪ್ಪಯ್ಯ ಪಟೇಲ್
ಪುತ್ರ : ವೀರೇಶ್ ಪಟೇಲ್
ಪುತ್ರಿ-ಅಳಿಯ : ಶ್ರೀಮತಿ ವಿನುತ, ಗಿರೀಶ್ ಮೈಸೂರು ಮಠ
ಮೊಮ್ಮಕ್ಕಳು : ತೇಜಸ್ ಜಿ.ಎಂ., ಗೌರಿ ಜಿ.ಎಂ.
ಗೌಡ್ರು ವಂಶಸ್ಥರು, ತರಲಘಟ್ಟ ಹಾಗೂ ಬಂಧು-ಮಿತ್ರರು.




**ಬೆಂಕಿಯಿಲ್ಲದ ಸಾಂಪ್ರದಾಯಿಕ ಅಡುಗೆ ಕಾರ್ಯಕ್ರಮ**

ದಾವಣಗೆರೆ, ಆ. 29- ನಗರದ ಪೋದಾರ್ ಅಂತರರಾಷ್ಟ್ರೀಯ ಶಾಲೆಯಲ್ಲಿ ಬೆಂಕಿಯಿಲ್ಲದ ಸಾಂಪ್ರದಾಯಿಕ ಅಡುಗೆ ಕಾರ್ಯಕ್ರಮ ನಡೆಯಿತು.

## ಕೃಷ್ಣ-ರಾಧೆಯರಂತೆ ಮುದ್ದು ಪುಟಾಣಿಗಳು.....



ಚಿ. ಅದ್ವಿಕ್
ತಂದೆ : ಹೆಚ್.ಎನ್. ದಿಲೀಪ್
ತಾಯಿ : ಕೆ.ಪಿ. ರಂಜಿತ



ರೋಹನ್ ಅನುಷಾ ರೋಹಿತ್ ದೇವಿಕೆರೆ



ಸತೀಶ್, ಕಾವ್ಯ, ಹರಿಹರ


|| ಶ್ರೀ ಬೆಟ್ಟದ ಮಲ್ಲಿಕಾರ್ಜುನ ಪ್ರಸನ್ನ ||
## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಸಿಟಿ ವಾಸಿ
ಶ್ರೀ ಪಿ. ಮಲ್ಲಪ್ಪ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 22-08-2024ನೇ ಗುರುವಾರ ರಾತ್ರಿ 10-00ಕ್ಕೆ ನನ್ನ ಮಗನಾದ



ಶ್ರೀ ಪಿ.ಎಂ. ಪ್ರಸನ್ನಕುಮಾರ್
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 30-08-2024ನೇ ಶುಕ್ರವಾರ ಬೆಳಿಗ್ಗೆ 10-00ಕ್ಕೆ ದಾವಣಗೆರೆ ಸ್ಪೋರ್ಟ್ಸ್ ರಿಕ್ರಿಯೇಷನ್ ಕ್ಲಬ್ ವಿದ್ಯಾನಗರ ವಿನಾಯಕ ಬಡಾವಣೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ
ಇಂತಿ ದುಃಖತಪ್ತರು : ಮೃತರ ತಂದೆ ಶ್ರೀ ಪಿ. ಮಲ್ಲಪ್ಪ, ನಿವೃತ್ತ ಮುಖ್ಯೋಪಾಧ್ಯಾಯರು ಮೃತರ ಧರ್ಮಪತ್ನಿ ಮತ್ತು ಮಕ್ಕಳು, ಸಹೋದರ, ಸಹೋದರಿಯರು, ಪುಣಬಘಟ್ಟೆ ವಂಶಸ್ಥರು, ಕೆಂಚಪ್ಪರ ವಂಶಸ್ಥರು, ಕುಂಬಳೂರು ಹಾಗೂ ದ್ಯಾಮೇನಹಳ್ಳಿ ವಂಶಸ್ಥರು, ಕುಕ್ಕುವಾಡ ಮತ್ತು ಬಂಧು-ಮಿತ್ರರು. ದಾವಣಗೆರೆ.
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಚಿರಸ್ಮರಣೆ



ದಿ. ಬೂಸ್ನೂರು ಶ್ರೀಮತಿ ಅನ್ನಪೂರ್ಣಮ್ಮನವರು
ನಿಧನ : 30-08-2021



ದಿ. ಶ್ರೀ ಬೂಸ್ನೂರು ಷಡಾಕ್ಷರಪ್ಪನವರು
ನಿಧನ : 14-07-2000

ನಮ್ಮೆಲ್ಲರಿಗೂ ದಾರಿದೀಪವಾಗಿ, ಬದುಕಿಗೆ ಪ್ರೇರಕವಾಗಿ, ಭವಿಷ್ಯಕ್ಕೆ ಬೆಳಕಾಗಿ, ಆದರ್ಶರಾಗಿ ಬಾಳಿದ ನಿಮ್ಮ ನೆನಪು ಎಂದೆಂದಿಗೂ ನಮ್ಮಲ್ಲಿ ಅಜರಾಮರ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವವರು
ಮಕ್ಕಳು :
ಶ್ರೀಮತಿ ನಿರ್ಮಲ, ಶ್ರೀ ವೀರಣ್ಣ ಬೂಸ್ನೂರು
ಶ್ರೀಮತಿ ವಿಶಾಲ, ಶ್ರೀ ಕೊಟ್ರೇಶ್ ಬೂಸ್ನೂರು
ಶ್ರೀಮತಿ ಲಾವಣ್ಯ, ಶ್ರೀ ಪ್ರಕಾಶ್ ಬೂಸ್ನೂರು
ಶ್ರೀಮತಿ ಸುನಂದ, ಶ್ರೀ ಸಿ.ವಿ. ಸೋಮಶೇಖರಪ್ಪ
ಶ್ರೀಮತಿ ನಾಗರತ್ನ, ಶ್ರೀ ಬಸವರಾಜ್ ಪಾವಟೆ
ಶ್ರೀಮತಿ ಶೋಭ, ಶ್ರೀ ನಾಗರಾಜ್ ಮಲ್ಲಾಬಾದಿ
ಮತ್ತು ಮೊಮ್ಮಕ್ಕಳು, ಮರಿಮೊಮ್ಮಕ್ಕಳು.
ಪ್ರಕಾಶ್ ಪ್ರಿಂಟಿಂಗ್ ಪ್ರೆಸ್
ಚಾಮರಾಜ ಪೇಟೆ, ದಾವಣಗೆರೆ. ಮೊ. : 98867 51091
ಪ್ರಜ್ವಲಾ ಕ್ರಿಯೇಷನ್ಸ್, ಬೆಂಗಳೂರು


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas